# ಅಮರ ಬಾಪು ಚಿಂತನ

ಗಾಂಧಿ ದನಿ ದರ್ಪಣ

ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ

# AMARA BAAPU CHINTANA

Mirror of Gandhi

Kannada & English Bi-Monthly

**Regd. Office : Gandhi Bhavan, Kumara Park East, Bangalore-560 001**

ಸಂಪುಟ : 07 ಸಂಚಿಕೆ : 05

ಬೆಲೆ : ರೂ.20/- ಪುಟಗಳು : 72

ಸೆಪ್ಟೆಂಬರ್-ಅಕ್ಟೋಬರ್ 2019


# Ba-Bapu



ಭಾರತೀಯ ಸ್ಟೇಟ್ ಬ್ಯಾಂಕ್
ಪ್ರತಿಯೋರ್ವ ಭಾರತೀಯನ ಬ್ಯಾಂಕ್

# ಭಾರತೀಯ ಸ್ಟೇಟ್ ಬ್ಯಾಂಕ್

## ರೈತರ ಏಳಿಗೆಯಲ್ಲಿ - ಅಂದು, ಇಂದು, ಎಂದೆಂದೂ

- ಬೆಳೆ ಸಾಲ
- ಬಂಗಾರದ ಅಡವಿನ ಕೃಷಿ ಸಾಲ
- ಟ್ರಾಕ್ಟರ್
- ಸ್ವ-ಸಹಾಯ ಸಂಘಗಳು
- ತೋಟಗಾರಿಕೆ
- ಪಶು ಸಂಗೋಪನ
- ಗ್ರಾಮೀಣ ಉಗ್ರಾಣ
- ನೀರಾವರಿ
- ಅಡಮಾನ ಸಾಲ



**ಇಂದೇ ನಿಮ್ಮ ಸಮೀಪದ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಗೆ ಭೇಟಿ ನೀಡಿ ಮೇಲಿನ ಯೋಜನೆಗಳ ಲಾಭ ಪಡೆಯಿರಿ**

1. ಆಕರ್ಷಕ ಬಡ್ಡಿ ದರಗಳು
2. ಪಾರದರ್ಶಕ ವ್ಯವಹಾರ
3. ತ್ವರಿತ ವಿಲೇವಾರಿ

ಪ್ರಕಟಣೆ: ಕೃಷಿ ವ್ಯವಹಾರ ಘಟಕ, ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು.



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ
ವೈದ್ಯಕೀಯ ಶಿಕ್ಷಣ ಇಲಾಖೆ



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು



# 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' (AB - ARK)

## ಸರ್ವರಿಗೂ ಆರೋಗ್ಯ ಸೇವೆ ಒದಗಿಸುವ ಸಂಯೋಜಿತ ಯೋಜನೆ

### ಸಾರ್ವಜನಿಕರ ಗಮನಕ್ಕೆ

ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಕ್ಕೆ ಒಂದು ವರ್ಷಕ್ಕೆ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ

ಎಪಿಎಲ್ ಕಾರ್ಡ್ ಹೊಂದಿದವರಿಗೆ ಸಹ–ಪಾವತಿ ಆಧಾರದ ಮೇಲೆ 30% ರಷ್ಟು ಚಿಕಿತ್ಸಾ ವೆಚ್ಚ ಸರ್ಕಾರದಿಂದ ಪಾವತಿ – ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ

ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆಯಡಿ ಸೇವೆ ಪಡೆಯಲು ಎಬಿ–ಎಆರ್‌ಕೆ ಕಾರ್ಡ್ ಕಡ್ಡಾಯವಲ್ಲ.

ಆಧಾರ್ ಕಾರ್ಡ್, ಪಡಿತರ ಚೀಟಿ ನೀಡಿ, ಎಬಿ–ಎಆರ್‌ಕೆ ಯೋಜನೆಯಡಿ ಆರೋಗ್ಯ ಸೌಲಭ್ಯ ಪಡೆಯಬಹುದು.

ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಸಲ್ಲಿಸಿ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ರೂ.10/–ಶುಲ್ಕದೊಂದಿಗೆ AB- ARK ಮಾಹಿತಿ ಮುದ್ರಿತ ಎ4 ಅಳತೆಯ ಹಾಳೆ ಪಡೆಯಿರಿ.

ಬೆಂಗಳೂರುಒನ್ / ಕರ್ನಾಟಕಒನ್ ಮತ್ತು ಸೇವಾಸಿಂಧು ಕೇಂದ್ರಗಳಲ್ಲಿ ರೂ. 10/– ಶುಲ್ಕದೊಂದಿಗೆ ಎ4 ಅಳತೆಯ ಕಾಗದದ ಮೇಲೆ ಅಥವಾ ರೂ. 35/– ಶುಲ್ಕದೊಂದಿಗೆ ಫ್ಲಾಸ್ಟಿಕ್ ಕಾರ್ಡ್ ಪಡೆಯಿರಿ.

**ಬಿಪಿಎಲ್ ಕಾರ್ಡ್ ಹೊಂದಿರುವವರು ತುರ್ತು ಸಂದರ್ಭಗಳಲ್ಲಿ ಯಾವುದೇ ರೆಫರಲ್ ಇಲ್ಲದೆ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು.**

ಹೆಚ್ಚಿನ ಮಾಹಿತಿಗಾಗಿ: ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಥವಾ ಉಚಿತ ಆರೋಗ್ಯ ಸಹಾಯವಾಣಿ: 104 / ಟೋಲ್ ಫ್ರೀ ಸಂಖ್ಯೆ: 1800 425 8330ಕ್ಕೆ ಕರೆ ಮಾಡಿ.

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು - ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಎಲ್ಲರಿಗೂ ಆರೋಗ್ಯ
ಎಲ್ಲೇಡೆಯೂ ಆರೋಗ್ಯ




Take shorter showers

Turn off the water while shaving

Turn off the water while brushing your teeth

Check Taps and pipes for leaks

Practice Rain Water Harvesting

Check your toilet for leakages

Use your automatic washing machine for full loads only

Don't let the Taps run while you clean vegetables

LIC

भारतीय जीवन बीमा निगम

LIFE INSURANCE CORPORATION OF INDIA

ಸಂಪಾದಕರು
**ಜೀರಿಗೆ ಲೋಕೇಶ್**

ಸಂಪುಟ : 7 ಸಂಚಿಕೆ : 5
ಸೆಪ್ಟೆಂಬರ್-ಅಕ್ಟೋಬರ್ 2019

ಅಮರ ಬಾಪು ಚಿಂತನ

ಸಲಹಾ ಸಮಿತಿ
ಡಾ॥ ವೂಡೇ ಪಿ. ಕೃಷ್ಣ
ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ
ಎಚ್. ಕೃಷ್ಣ

ವಿಶೇಷ ಸಂಚಿಕೆ

150 YEARS OF CELEBRATING THE MAHATMA

## ಸಂಪಾದಕೀಯ

ಸಂಪಾದಕೀಯ ನೆರವು
ಎನ್. ಗಾಯತ್ರಿದೇವಿ

ಉಪ ಸಂಪಾದಕರು
ಪ್ರಣವ
ಸುಮ ಚಂದ್ರಶೇಖರ್

ಜಾಹಿರಾತು ವ್ಯವಸ್ಥಾಪಕರು
ಪಿ.ಎಸ್. ಗುರುರಾಜ್

ಪ್ರತಿನಿಧಿ
ಚೆನ್ನು ಎಸ್. ಮಠದ್ (ದೆಹಲಿ)
ಎಂ.ಎಸ್. ಜಗದೀಶ (ಗುಲಬರ್ಗಾ)

ಕಾನೂನು ಸಲಹೆಗಾರರು
ವಿಜಯ್ ನಾರಾಯಣ್

ಲೆಕ್ಕ ಪರಿಶೋಧಕರು
ರಾಜಶೇಖರ ಐತಾಳ್

ಅಂಚೆ ನಿರ್ವಹಣೆ
ಕೆ.ದಕ್ಷಿಣಾಮೂರ್ತಿ

ಕೇಂದ್ರ ಕಛೇರಿ
ಅಮರ ಬಾಪು ಚಿಂತನ
ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ
ಬೆಂಗಳೂರು-560 001

**Editor - in - Chief**
**Jeerige Lokesh**

Advisory Committee
**Dr. Woodey P. Krishna**
**Prof. Mallepuram G. Venkatesha**
**H.Krishna**

Editorial Assistance
**N.Gayatri Devi**

Sub Editor
**Pranava**
**Suma Chandrashekar**

Advertisement Manager
**P.S. Gururaj**

Representative :
**Chennu S. Matad (Delhi)**
**M.S. Jagadeesh (Gulbarga)**

Legal Adviser : **Vijay Narayan**

Auditor : **Rajashekara Aithal**

Post-Incharge : **K.Dakshinamurthy**

# ಬಾಪೂ-ಬೆಳಕಿನ ಕಿರಣ

7ನೇ ವರ್ಷದ ಸಂಭ್ರಮ

**ಕಾ**ಠೇವಾಡ ಪೋರಬಂದರ ಸಂಸ್ಥಾನದ ಮೋಹನದಾಸ ಕರಮಚಂದ ಗಾಂಧಿ ಮಹಾತ್ಮ ಗಾಂಧಿಯಾದದ್ದು, ವಿಶ್ವದ ಸಾಧಕರ ಅಗ್ರಸಾಲಿನಲ್ಲಿ ನಿಂತದ್ದು ಭಾರತದ ಪುಣ್ಯ. ಪ್ರಪಂಚದ ಎಲ್ಲರೂ ನಿಬ್ಬೆರಗಾಗುವಂತೆ ಇನ್ನೊಬ್ಬರಿಗಾಗಿ ಬದುಕನ್ನು ಸವೆಸಿದ ಗಾಂಧಿ ಅವರು ನಮ್ಮಿಂದ ದೂರವಾಗುತ್ತಿದ್ದಾರೆಯೇ? ಎಂಬ ಅನುಮಾನಗಳು ಎಲ್ಲೆಡೆ ಕಾಣಿಸುತ್ತಿರುವಾಗ ಗಾಂಧಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವ ಅನಿವಾರ್ಯವೀಗ ಹೆಚ್ಚಾಗಿದೆ.




ಇಂದಿಗೆ 150 ವರ್ಷಗಳ ಹಿಂದೆ ಮೋಹನದಾಸ ಕರಮಚಂದ ಗಾಂಧಿ ಎಂಬ ಅಪರೂಪದ ಬೆಳಕೊಂದು ಗುಜರಾತಿನಲ್ಲಿ ಜನಿಸಿತು. ನಂತರ ಮಹಾತ್ಮಾ ಗಾಂಧಿ ಎಂದು ಹೆಸರಾದ ಇವರ ಬಗ್ಗೆ ಭಾರತದ ಹೊಸ ಪೀಳಿಗೆಯ ಯುವಕರಿಗೆ ಹೆಚ್ಚು ಗೊತ್ತಿಲ್ಲ. ಜಗತ್ತು ಮಾತ್ರ ಗಾಂಧೀಜಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿದೆ. ಇತ್ತೀಚೆಗೆ ನಮ್ಮ ಪ್ರಧಾನಿ ಅವರು ಅಮೆರಿಕೆಯ ಹೋದಾಗಲೂ ಗಾಂಧಿ ನಾಡಿನಿಂದ ಬಂದಿದ್ದೀರಿ. ನಿಮಗೆ ಸ್ವಾಗತ ಎಂದು ಬರಮಾಡಿಕೊಳ್ಳಲಾಯಿತು.

ನಮಗೆ ಇಂದು ಪೂರ್ಣದೃಷ್ಟಿ ಬೇಕಾಗಿದೆ. ಈ ಪೂರ್ಣದೃಷ್ಟಿ ವಿಶ್ವಮಾನವನ ಭೂಮಿಕೆಗೆ ಸೇರಿದ್ದು. ನಾವು ಮಹಾತ್ಮಾ ಗಾಂಧೀಜಿಯವರನ್ನು ಪೂರ್ಣದೃಷ್ಟಿಯಿಂದಲೇ ಕಾಣಬೇಕಾಗಿದೆ. ಪೂರ್ಣವು ಪೂರ್ಣವನ್ನು ಮಾತ್ರ ತಿಳಿಯಬಲ್ಲದು. ಅಪೂರ್ಣವು ಪೂರ್ಣವನ್ನು ತಿಳಿಯುವುದಾದರೂ ಹೇಗೆ..? ಈ ಬಗೆಯ ಪೂರ್ಣ ದೃಷ್ಟಿಯಿಂದ ಗಾಂಧೀಜಿಯವರನ್ನು ನಾವು ಸಮೀಪಿಸಬೇಕಾಗಿದೆ. ಈ ಪೂರ್ಣದೃಷ್ಟಿಯಲ್ಲಿ ಶ್ರೀಮಂತ ಬಡವ; ಮೇಲು-ಕೀಳು; ವಿದ್ಯಾವಂತ-ಅವಿದ್ಯಾವಂತ; ಬಲಾಢ್ಯ-ಬಲಹೀನ ಇವಾವುವೂ ಬರುವುದಿಲ್ಲ. ಆಗ ಸಮಭಾವ ಮತ್ತು ಸಮಯೋಗಗಳು ಜೀವನದ ಭದ್ರ ಬುನಾದಿಗಳಾಗುತ್ತವೆ.

ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆ ಮತ್ತು ಸಾರ್ವಭೌಮತ್ವ ಇವು ದೇಶದ ಭದ್ರ ಬುನಾದಿಗೆ ಅಡಿಪಾಯವೆಂದು ಗಾಂಧೀಜಿ ಪ್ರತಿಪಾದಿಸಿದ್ದರು. ಗಾಂಧೀಜಿಯವರ ಜೀವನ ಮತ್ತು ಸಂದೇಶ ದೇಶ-ಕಾಲಾತೀತವಾಗಿದ್ದು ಲೋಕಕ್ಕೆ ನಿರಂತರ ಸ್ಫೂರ್ತಿದಾಯಕವೂ, ಮಾರ್ಗದರ್ಶಕವೂ ಆಗಿದೆ. ಈ ಮಹಾಪುರುಷರು ಬಯಸಿದ, ಕುವೆಂಪು ಆಶಿಸಿದ ಈ ಸರ್ವಜನಾಂಗದ ಶಾಂತಿಯ ತೋಟವನ್ನು ಕಾಪಾಡಿಕೊಳ್ಳಲು ನಾವೀಗ ಸಂಕಲ್ಪ ಮಾಡಬೇಕಿದೆ. ಸಕಲ ಜೀವಾತ್ಮರಿಗೆ ಲೇಸನು ಬಯಸಿದ ಬಸವಣ್ಣನವರ ನಾಡಿದು. ಗಾಂಧಿ ಎಂಬ ಮಹಾಚೇತನ ನೀಡಿದ ಬೆಳಕು ಆರದಿರಲಿ ಎಂಬುದೇ ಈ ಹೊತ್ತಿನ ಸದಾಶಯ.

ಈ ಸಂಚಿಕೆ ಮೂಡಿಬರಲು ಕಾರಣರಾದ ಬರಹಗಾರರು, ಜಾಹಿರಾತುದಾರರು
ಮತ್ತು ಓದುಗರಿಗೆ ಬಾ-ಬಾಪೂ ೧೫೦ನೇ ಜಯಂತಿ ವರ್ಷಾಚರಣೆಯ
ಶುಭಾಶಯಗಳೊಂದಿಗೆ ಹೃತ್ಪೂರ್ವಕ ಧನ್ಯವಾದಗಳು

ಜೀರಿಗೆ ಲೋಕೇಶ್

# ಈ ಸಂಚಿಕೆಯಲ್ಲಿ...





07 ಶುಭೋದಯ(ಅಕ್ಟೋಬರ್ ಎರಡು) – ಸಿದ್ದಣ್ಣ ಮಸಳಿ
08 ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ – ಡಾ.ವೂಡೇ ಪಿ. ಕೃಷ್ಣ
11 ಭಾಗ್ಯವಿಧಾತನ ವರ್ತಮಾನದ ಹೆಜ್ಜೆ – ಜಿ.ಎಸ್.ಜಯದೇವ
15 75ರ ಸಂಭ್ರಮದಲ್ಲಿ ಗಾಂಧಿ ಸಾಹಿತ್ಯ ಸಂಘ – ಈಶ್ವರ ಜಾಲಹಳ್ಳಿ
16 ನೀಲನಭದ ಅರುಂಧತಿ – ಮಲ್ಲಿಕಾರ್ಜುನ ಹೆಗ್ಗಳಗಿ
19 ಗಾಂಧೀತತ್ವ ಪಾಲನೆಯೇ ಪರಿಹಾರ – ಜಿ.ಮಾದೇಗೌಡ
20 ಗಾಂಧಿವಾದಿ ತಗಡೂರು ಬನುಮಯ್ಯ – ವೇಮಗಲ್ ಸೋಮಶೇಖರ್
23 ಪ್ರಾರ್ಥನೆಯ ಬಗ್ಗೆ ಗಾಂಧೀಜಿ ಏನು ಹೇಳಿದ್ದಾರೆ ? – ಸಿದ್ದವನಹಳ್ಳಿ ಕೃಷ್ಣಶರ್ಮ
25 ಕರುನಾಡಲ್ಲಿ ಮಹಾತ್ಮನ ಹೆಜ್ಜೆ
26 ಸಂಗೀತದಂತೆ ಬದುಕಿದ ಗಾಂಧೀಜಿ – ಗೀತಾ ಸೀತಾರಾಮ್
28 ಗಾಂಧಿ ತಾತ–ಮೊಮ್ಮಗ ಕನೂ – ಲಿಂಗಣ್ಣ ಬಂಧುಕಾರ್
29 ಗಾಂಧೀಜಿ ಆರೋಗ್ಯ ಸಂಹಿತೆ – ಎನ್.ಲಕ್ಷ್ಮೀನಾರಾಯಣ
33 ಗಾಂಧಿ ಸಿನಿಮಾ – ಬಿ.ಎಂ.ಹನೀಫ್
36 ಸಹಬಾಳ್ವೆಯ ಅನ್ನ ಬಡಿಸಿದ ಗಾಂಧೀ ತಾತ – ಸದಾಶಿವ್ ಸೊರಟೂರು
38 ನೆಲೆಯೂರಿ ನಿಂತ 'ಮಹಾತ್ಮ'ರು – ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ
40 ಗಾಂಧಿ ಜಾಡು ಹಿಡಿದು... – ಡಾ.ಹೆಚ್.ಎಸ್.ಸುರೇಶ್
43 ಶಿಕ್ಷಣದ ಬಗ್ಗೆ ಗಾಂಧೀಜಿಯ ನಿಲುವು – ಸುಮ ಚಂದ್ರಶೇಖರ್
44 ಗಾಂಧೀ ಎಂಬ ಮಾಂತ್ರಿಕ... – ಡಾ॥ ಎಸ್. ರಾಮಲಿಂಗೇಶ್ವರ (ಸಿಸಿರಾ)


ಲೇಖನಗಳು ಆಯಾ ಲೇಖಕರ ಅಭಿಪ್ರಾಯಗಳು


48 *Impact of Peace and Non-Violence* - *Dr. Shubhangi Rathi*
53 *A Government is best which Governs the Least*
55 *Build the Character...*
57 *Fundamental Role in social change*
59 *Pursuit of Truth*
63 *Bapu and Ba's Affection*
64 *Great Freedom Fighters*
67 *We Need Gandhi's Philosophy*

# ಶುಭೋದಯ

## (ಅಕ್ಟೋಬರ್ ಎರಡು)

ಮುಂಜಾವು ಮುಗಿಲು ಹೊಗರೇರಿತು
ಆಕಾಶ ಮಂಟಪಕೆ ಕಿರಣ ತೋರಣ ಕಟ್ಟಿ
ಉದಯ ರವಿ ತೇಜಸ್ವಿ ಮೇಲೇರಿದ
ಸುತ್ತು ಭೂಮಂಡಲಕೆ ದಯೆದೋರಿದ.
ನಸುಕಿನಲ್ಲಿಯೆ ಎದ್ದು ಹಕ್ಕಿ ಹಾಡನು ಕಟ್ಟಿ
ಶಕುನ ಹೇಳುವ  ಕೊರವಿ ಹಾಡುತಿತ್ತು
ನಿದ್ದೆ ಮಂಪರು ಕವಿದು ಮಲಗಿದ್ದ ಜಗಕೆಲ್ಲ
ಉದಯರಾಗವ ಮಾಡಿ ಎಬ್ಬಿಸಿತ್ತು.
ಏಳೊ ಗೆಳೆಯ,
ಇದೊ ನಿನಗೆ ಶುಭೋದಯ
ನೆಲದ ನರನಾಡಿಯಲಿ ಸಂತೋಷದುದಯ!

ಈ ನಾಡ ಕಥೆಯಲ್ಲಿ ಇದು ಒಂದು ಹೊಸ ಹಗಲು
ಪುಣ್ಯ ಪ್ರವಾಹದುಗಮ.
ಜನಮನದ ಜೀವನದ ಸಂಜೀವನ
ಮಳೆ ಹೋಗಿ ಬೆಳೆ ಹೋಗಿ ಇರುವ ನೆಲ ಹಾಳಾಗಿ
ಭೂಮಿ ತಳಮಳಿಸುತಿತ್ತು
ಒಂದೊಂದೆ ಹನಿಗಾಗಿ

ಮಣ್ಣು ಕಣ ಬಿಕ್ಕುತಿತ್ತು.
ಆ ಹಿಮಗಿರಿಯೆ ಕರಗಿ ನೀರಾಗಿ
ಸಮತಳಕೆ ಇಳಿದು ಬಂತು
ಮನೆಮನೆಯ  ಹೊಸತಿಲಕೆ ಹರಿದು ಬಂತು.
ಅಲ್ಲಲ್ಲಿ ಕೂಡಿ ಕೊಳೆಯೇರಿ ಬಿದ್ದಿದ್ದ
ಕಸ ಕೊಳಚೆ ಇದರಲ್ಲಿ  ಕೊಚ್ಚಿ ಹೋಯ್ತು
ಅದರ  ಭವ್ಯತೆಗೆ
ಧೀರ ಗಂಭೀರತೆಗೆ
ಈ ಮನಸು ಮಾರು ಹೋಯ್ತು!

ಬೆಳಕಿಲ್ಲದೀ ಮನೆಗೆ ಬೆಳಕಾಗಿ ಬಂದನಿವ
ಚಿಕ್ಕೆಯಂಗಳದಿ ಚಂದ್ರಾಮ ಚೆಲುವ!
ದಳದಳವೇರಿ ಕಳೆಯೇರಿ
ಇರುಳ ಮಲ್ಲಿಗೆಯರಳು ಬೆಳುದಿಂಗಳು.
ಅವನೊಂದು ಕಣ್ಣಿನಲಿ ಆ ಪ್ರಶಾಂತ ಪ್ಯಾಸಿಫಿಕ
ಇನ್ನೊಂದು ತುಂಬಿತ್ತು ಅಟಲಾಂಟಿಕ
ಜನಸಮುದ್ರದ ಹರ್ಷ ಉಕ್ಕೇರಿ ನಿಂತಿತೋ
ಧವಳಗಿರಿ ಕೀರ್ತಿ ಕಳಸ
ನಮ್ಮ ಉದ್ಧಾರಕ್ಕೆ ದೇಹ ಸವೆಸಿದನಿವನು
ಸ್ಥಿತಪ್ರಜ್ಞ, ಓ ಪುಣ್ಯಪುರುಷ.
ದೀನ ದಲಿತರ ಎದೆಯ ಮಾನಸದಿ ವಿಹರಿಸುವ
ಶ್ವೇತ ಪದ್ಮಸ್ನೇಹಿ ರಾಜಹಂಸ
ಅವನ ಸಹವಾಸವೋ.....
ಅಸಿಧಾರಾವ್ರತ!
 ಹಿಂದಿನವರಿಗೂ ಅವನ ಒಂದೊಂದು ಹೆಜ್ಜೆಗಳು
ಸುವಿಶಾಲ ರಾಜಮಾರ್ಗ.
 ನಡುಹಗಲ ದೀವಟಿಗೆ ಹಿಡಿದು ನಡೆದವನಿವನು
ಕಣ್ಣಿನಲಿ ಕಂಡಿತ್ತು ಮುಂದೆ ಸ್ವರ್ಗ.

– ಸಿದ್ದಣ್ಣ ಮಸಳಿ



# ಮಹಾತ್ಮಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ

– ಡಾ.ವೂಡೇ ಪಿ. ಕೃಷ್ಣ



ಗಾಂಧೀಜಿಯವರನ್ನು ಮನುಕುಲದ ಸಕ್ರಿಯ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರೆಂದು ಗುರಿತಿಸಲಾಗಿದೆ. ಏಕೆಂದರೆ, ಈ ಲೌಕಿಕ ಜಗತ್ತಿನಲ್ಲಿದ್ದುಕೊಂಡೇ ಆಧ್ಯಾತ್ಮಿಕತೆಯನ್ನು ಅವರು ರೂಢಿಸಿಕೊಂಡಿದ್ದರು. ಅವರು ಸುತ್ತಮುತ್ತಲಿನ ಅನ್ಯಾಯ, ದ್ವೇಷ, ಕ್ಷುಲ್ಲಕತೆ, ಭಯ, ಹಿಂಸೆ ಇವುಗಳನ್ನೆಲ್ಲ ನ್ಯಾಯ, ಪ್ರೀತಿ, ಕರುಣೆ, ಸಮಚಿತ್ತ, ಧೈರ್ಯ ಮತ್ತು ಅಹಿಂಸೆಗಳ ಮೂಲಕವೇ ನಿವಾರಿಸಲು ಶ್ರಮಿಸಿದರು. ಗಾಂಧೀಜಿಯವರ ಬದುಕು, ಅವರ ಕಾಲದ ಉಳಿದೆಲ್ಲ ನಾಯಕರ ಬದುಕಿಗಿಂತ ಅತ್ಯಂತ ಪಾರದರ್ಶಕವಾಗಿತ್ತು. ಹೀಗಾಗಿಯೇ ಅವರು 'ನನ್ನ ಬದುಕೇ ನನ್ನ ಸಂದೇಶ' ಎಂದು ಘೋಷಿಸಿದರು.

ಗಾಂಧೀಜಿಯವರ ಆತ್ಮಕತೆ 'ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್' (ನನ್ನ ಸತ್ಯಾನ್ವೇಷಣೆ) 1927ರಲ್ಲಿ ಪ್ರಕಟವಾಯಿತಷ್ಟೆ. ಅವರ 1920ರವರೆಗಿನ ಬದುಕಿನ ಕಥನವನ್ನು ಅದು ಒಳಗೊಂಡಿದೆ. ಈ ಆತ್ಮಕತೆಯಲ್ಲಿ ಗಾಂಧೀಜಿಯವರು ತಮ್ಮ ಬಾಲ್ಯ ಮತ್ತು ಪ್ರಾಯದ ದಿನಗಳಲ್ಲಿ ಆಧ್ಯಾತ್ಮಿಕತೆಯು ಹೇಗೆ ಪ್ರಭಾವ ಬೀರಿತು ಎನ್ನುವುದನ್ನು ದೀರ್ಘವಾಗಿ ಹೇಳಿಕೊಂಡಿದ್ದಾರೆ. ಬಾಲ್ಯದಲ್ಲಿ ಸತ್ಯ ಹರಿಶ್ಚಂದ್ರನನ್ನು ಕುರಿತ ನಾಟಕವನ್ನು ನೋಡಿ, ಅದರಿಂದ ಪ್ರಭಾವಿತರಾದ ಗಾಂಧೀಜಿ, ಜೀವನದಲ್ಲಿ ಯಾವತ್ತಿಗೂ ಸುಳ್ಳು ಹೇಳಬಾರದೆಂದು ತೀರ್ಮಾನಿಸಿದರು. ಅಷ್ಟೇ ಅಲ್ಲ, ಅವರು ಅಲ್ಲಿಂದಾಚೆಗೆ ತಮ್ಮ ಕೊನೆಯುಸಿರು ಇರುವವರೆಗೂ ಸುಳ್ಳನ್ನಾಡಲಿಲ್ಲ. ಅವರ ಪಾಲಿಗೆ 'ಸತ್ಯವೇ ದೇವರು ಮತ್ತು ದೇವರೇ ಸತ್ಯ'ವಾಗಿತ್ತು. ಆಧ್ಯಾತ್ಮಿಕತೆಯ ದೃಷ್ಟಿಯಿಂದ ಹೇಳುವುದಾದರೆ, ಗಾಂಧೀಜಿಯವರು ತಮ್ಮ ತಾಯಿ-ತಂದೆ ಮತ್ತು ಸಂತ ಜೈನ ಕವಿ ಶ್ರೀಮದ್ ರಾಜಚಂದ್ರ ಅವರಿಂದ ಪ್ರಭಾವಿತರಾಗಿದ್ದರು. ಅಂದಹಾಗೆ, ಇದು ಶ್ರೀಮದ್ ರಾಜಚಂದ್ರ ಅವರ 150ನೇ ಜನ್ಮದಿನಾಚರಣೆಯ ವರ್ಷವಾಗಿದೆ. ಇಂಥ ಗಾಂಧೀಜಿಯವರು ಭಗವದ್ಗೀತೆ, ಬೈಬಲ್, ಲಿಯೋ ಟಾಲ್ಸ್ಟಾಯ್ ಅವರ 'ಕಿಂಗ್ಡಂ ಆಫ್ ಗಾಡ್ ಈಸ್ ವಿತಿನ್ ಯು,' ಗ್ರಂಥಗಳನ್ನು ಓದಿದ್ದರು. ಅಲ್ಲದೆ, ಥೋರೋನ 'ಸಿವಿಲ್ ಡಿಸ್‌ಒಬಿಡಿಯನ್ಸ್' ಮತ್ತು ರಸ್ಕಿನ್ ಬಾಂಡ್‌ನ 'ಅನ್ ಟು ದಿಸ್ ಲಾಸ್ಟ್' ಕೃತಿಗಳಿಂದಲೂ ಅವರು ಅಪಾರ ಪ್ರಭಾವಕ್ಕೊಳಗಾಗಿದ್ದರು.

**ರಾಜಕಾರಣದ ನೆಲೆ–ಬೆಲೆ**

ಗಾಂಧೀಜಿಯವರು 'ರಾಜಕಾರಣವನ್ನು ಆಧ್ಯಾತ್ಮೀಕರಿಸಿದ ಸಂತ' ಎಂಬ ಅನನ್ಯವಾದ ಗೌರವಕ್ಕೆ ಪಾತ್ರರಾಗಿದ್ದಾರೆ, ನಿಜ. ಇದರ ಬುನಾದಿ, ಅವರ ದಕ್ಷಿಣ ಆಫ್ರಿಕಾದ ದಿನಗಳಲ್ಲೇ ಇದೆ. ಏಕೆಂದರೆ,

**ಭಾರತಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳು ಕಳೆದಿವೆ. ಮಹಾತ್ಮ ಗಾಂಧೀಜಿ ಅವರ 'ಹಿಂದ್ ಸ್ವರಾಜ್' (1909) ಪ್ರಕಟವಾಗಿ ಇಲ್ಲಿಗೆ ಒಂದುನೂರ ಹತ್ತು ವರ್ಷಗಳು ಸಂದುತ್ತಿವೆ. ಸ್ವಾತಂತ್ರ್ಯಪೂರ್ವ ಭಾರತ ಮತ್ತು ಸ್ವಾತಂತ್ರ್ಯೋತ್ತರ ಭಾರತ ಇವುಗಳ ನಡುವಣ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಔದ್ಯೋಗಿಕ ನೆಲೆಗಳ ಬಗೆಗೆ ಅನೇಕರು ಚರ್ಚಿಸಿದ್ದಾರೆ. ಈಗಲೂ ಚರ್ಚಿಸುತ್ತಿದ್ದಾರೆ. ಅವುಗಳು ಬಹುತೇಕವಾಗಿ ಪಕ್ಷಪಕ್ಷಗಳ ಧೋರಣೆಯೋ ಸೈದ್ಧಾಂತಿಕ ಹಿನ್ನೆಲೆಯೋ ವಸಾಹತುಶಾಹಿ ಮನಃಸ್ಥಿತಿಗಳಿಂದಲೋ ಇರುವುದುಂಟು! ಶುದ್ಧವಾದ ಸತ್ಯಸಿದ್ಧಾಂತ ಅಥವಾ ಗಾಂಧೀಜಿ ಕಂಡ ಕನಸಿನ ಭಾರತವನ್ನು ಕುರಿತು ಪೂರ್ಣ ದೃಷ್ಟಿಯಿಂದ ಮಾತನಾಡುವುದು ಈಗಂತೂ ತುಂಬಾ ಅವಶ್ಯವಿದೆ! ಕುವೆಂಪು ಅವರು ಪೂರ್ಣದೃಷ್ಟಿ, ಸಮನ್ವಯ ಮತ್ತು ಅನಿಕೇತ ಪ್ರಜ್ಞೆಯನ್ನು ತಮ್ಮ ಕೃತಿಗಳಲ್ಲಿ ಸಾರಿದರು. ಅವು ಕವಿಸಹಜ ಮಾತಿನಿಂದ ರೂಪಿತಗೊಂಡಿದ್ದವು. ಈ ಮಾತುಗಳನ್ನು ಆಧ್ಯಾತ್ಮೀಕರಣ ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಿದ್ದಾರೆ.**

ಅವರು ಆ ದೇಶದಲ್ಲಿದ್ದಾಗಲೇ ಮೊದಲಿಗೆ ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಟವನ್ನು ನಡೆಸಿದ್ದರು. ಡರ್ಬಾನ್ನಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗಾಂಧೀಜಿಯವರನ್ನು ಅಲ್ಲಿಯ ಬಿಳಿಯನೊಬ್ಬ 'ನೀನೊಬ್ಬ ಕರಿಯ, ನಿನಗಿಲ್ಲಿ ಜಾಗವಿಲ್ಲ,' ಎಂದು ಬೈದು, ಹೊರದಬ್ಬಿದ್ದನು. ಆ ಒಂದು ಘಟನೆಯು, ಗಾಂಧೀಜಿಯವರು ತಮ್ಮ ಜೀವಮಾನದುದ್ದಕ್ಕೂ ಅನ್ಯಾಯದ ವಿರುದ್ಧ ಸೆಟೆದು ನಿಲ್ಲಲು ನಾಂದಿ ಹಾಡಿತು. ಇದು ತನ್ನಷ್ಟಕ್ಕೆ ತಾನೇ ಒಂದು ಬಹುದೊಡ್ಡ ಆಧ್ಯಾತ್ಮಿಕ ಪರಿವರ್ತನೆಯಾಯಿತು. ಗಾಂಧೀಜಿಯವರು 'ಸತ್ಯ' ಮತ್ತು 'ಅಹಿಂಸೆ'ಗಳ ದೀಕ್ಷೆ ತೆಗೆದುಕೊಂಡಿದ್ದು ಕೂಡ ದಕ್ಷಿಣ ಆಫ್ರಿಕಾದಲ್ಲಿಯೇ! ಈ ಬಗ್ಗೆ ಅವರು "ಈ ಎರಡೂ ಆದರ್ಶಗಳು ಜಗತ್ತಿನಲ್ಲಿರುವ ಗಿರಿಪಂಕ್ತಿಗಳಷ್ಟೇ ಪುರಾತನವಾದವು. ನಾನೇನಿದ್ದರೂ ಈ ಆದರ್ಶಗಳನ್ನು ನನ್ನ ಬದುಕು ಮತ್ತು ಕ್ರಿಯೆಯಲ್ಲಿ ಅನುಸರಿಸಲು ಪ್ರಯತ್ನಿಸುತ್ತಿದ್ದೇನಷ್ಟೆ" ಎಂದು ಹೇಳುತ್ತಿದ್ದರು.

1909ರಲ್ಲಿ ಗಾಂಧೀಜಿಯವರು ತಮ್ಮ ಕೃತಿಯಾದ 'ಹಿಂದ್ ಸ್ವರಾಜ್' ಅನ್ನು ಪ್ರಕಟಿಸಿದರು. ಇದಾದ ಆರು ವರ್ಷಗಳ ನಂತರ, ಅಂದರೆ 1915ರಲ್ಲಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ತಾಯ್ನಾಡಿಗೆ ಬಂದವರೇ, ತಮ್ಮ ರಾಜಕೀಯ ಮಾರ್ಗದರ್ಶಕರಾದ ಶ್ರೀ ಗೋಪಾಲಕೃಷ್ಣ ಗೋಖಲೆಯವರ ಸಲಹೆಯ ಮೇರೆಗೆ ಇಡೀ ದೇಶವನ್ನು ಸುತ್ತಿದರು. ಈ ಮೂಲಕ ಅವರು ತಮ್ಮನ್ನು ತಾವು ಶ್ರೀಸಾಮಾನ್ಯನೊಂದಿಗೂ ಆತನ ಕಷ್ಟ-ನಷ್ಟಗಳೊಂದಿಗೂ ಗುರುತಿಸಿಕೊಂಡರು. "ನೀನು ಜನರ ಬಳಿಗೆ ಹೋಗು,



ಅವರೊಡನೆ ಬದುಕು, ಅವರನ್ನು ಅರ್ಥ ಮಾಡಿಕೊ ಮತ್ತು ಅವರಿಂದ ಕಲಿ," ಎನ್ನುವುದು ಗೋಖಲೆಯವರು ಗಾಂಧೀಜಿಗೆ ಹೇಳಿದ ಸಾಮಾಜಿಕ ಪಾಠವಾಗಿತ್ತು. ಅಲ್ಲದೆ, ಭಾರತಕ್ಕೆ ಬಂದಿಳಿದ ಗಾಂಧೀಜಿಗೆ ಅವರು "ನೀನು ಒಂದುವರ್ಷ ಮೌನವಾಗಿರಬೇಕು," ಎಂದು ಹೇಳಿದ್ದರು. ಗೋಖಲೆಯವರ ಮಾತಿಗೆ ಬೆಲೆ ಕೊಟ್ಟು ಇಡೀ ಭಾರತದಾದ್ಯಂತ ಕೈಗೊಂಡ ಈ ಪಯಣವೇ ಅದುವರೆಗೂ 'ಬ್ಯಾರಿಸ್ಟರ್'ಆಗಿದ್ದ ಗಾಂಧೀಜಿಯವರನ್ನು 'ಬಡವರ ಸೇವಕ'ನನ್ನಾಗಿ ಪರಿವರ್ತಿಸಿತು.



ಅನಿಬೆಸೆಂಟ್ ಅವರು ಏರ್ಪಡಿಸಿದ್ದ ಒಂದು ರಾಜಕೀಯ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಗಾಂಧೀಜಿ, ಅಲ್ಲಿ ಆತ್ಮವಿಮರ್ಶೆ, ಸಮೂಹ ಶಿಕ್ಷಣ, ದುರಾಸೆಯ ನಿಗ್ರಹ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ದೇವರಲ್ಲಿ ಇಡಬೇಕಾದ ನಂಬಿಕೆ ಇವುಗಳನ್ನು ಪ್ರತಿಪಾದಿಸಿ, ಮನುಷ್ಯನೊಬ್ಬನ ಯಶಸ್ಸಿಗೆ ಇದೇ ಸರಿಯಾದ ಹಾದಿ ಎಂದು ಸಾರಿದ್ದರು. ಅವರ 'ಆತ್ಮವಿಮರ್ಶೆ'ಯ ಈ ಕಲ್ಪನೆಯೇ, ಅನಂತರದ ದಿನಗಳಲ್ಲಿ ಅವರು ಕೈಗೊಂಡ ಉಪವಾಸ ಸತ್ಯಾಗ್ರಹಗಳಿಗೆ ಬುನಾದಿಯಾಯಿತು. ಸಾಮಾನ್ಯವಾಗಿ, ಸಂತರೆಂದರೆ ನಾವು ಪವಿತ್ರಾತ್ಮರೆಂದೂ ಅವರ ಸಾಧನೆಗಳು ಅಗೋಚರವೆಂದೂ ನಂಬಿಕೊಂಡಿದ್ದೇವೆ. ಅಂದರೆ, ಅದನ್ನೇನಿದ್ದರೂ ಪ್ರೀತಿ, ನ್ಯಾಯ, ಕರುಣೆ ಇತ್ಯಾದಿಗಳ ಮೂಲಕ ನಾನು ಗ್ರಹಿಸಬಹುದೆನ್ನುವುದು



ಇದರ ತಾತ್ಪರ್ಯ. ಹಾಗೆಯೇ, ರಾಜಕಾರಣವೆಂದರೆ ಅದು ಅಧಿಕಾರಕ್ಕಾಗಿನ ಕಚ್ಚಾಟ ಎಂದುಕೊಂಡಿದ್ದೇವೆ. ಇದೇನೇ ಇರಲಿ, ಆ್ಯನಿಬೆಸೆಂಟ್ ಅವರು ಏರ್ಪಡಿಸಿದ್ದ ಆ ಅಧಿವೇಶನದಲ್ಲಿ ಗಾಂಧೀಜಿಯವರು ರಾಜಕಾರಣಿಗಿಂತ ಹೆಚ್ಚಾಗಿ ಸಂತನಂತೆಯೇ ಮಾತನಾಡಿದರು. ನಿಜ ಗಾಂಧೀಜಿಯವರು ರಾಜಕಾರಣದಲ್ಲಿದ್ದರೂ ಸಂತನಂತೆಯೇ ಇದ್ದರು.

**ಆಧ್ಯಾತ್ಮೀಕರಣ**

ಗಾಂಧೀಜಿಯವರು 'ನನ್ನ ದೃಷ್ಟಿಯಲ್ಲಿ ರಾಜಕಾರಣವೆಂದರೆ, ಆಧ್ಯಾತ್ಮಿಕ ಪ್ರತಿಪಾದನೆಯೇ ಆಗಿದೆ' ಎಂದು ಘೋಷಿಸಿದ್ದರು. ಬಹಳ ಉನ್ನತ ಮಟ್ಟದ ರಾಜಕಾರಣಿಯಾಗಿದ್ದ ಅವರು, ಸಾರ್ವಜನಿಕ ಜೀವನವನ್ನು ಆಧ್ಯಾತ್ಮೀಕರಿಸಿದರಲ್ಲದೆ, ಅದನ್ನು ಹಲವು ಆಯಾಮಗಳಿಂದ ಮೌಲ್ಯಗಳಿಂದ ಸಮೃದ್ಧಗೊಳಿಸಿದರು. ಅವರ ಪಾಲಿಗೆ ನಾವು ಮಾಡುವ ಕೆಲಸದಲ್ಲೂ ಅದನ್ನು ಮಾಡುವ ವಿಧಾನದಲ್ಲೂ ಶುದ್ಧತೆ ಇರಬೇಕಾದದ್ದು ಮುಖ್ಯವಾಗಿತ್ತು. ಇದನ್ನು ಸ್ವತಃ ತಾವೇ ಮಾಡಿ ತೋರಿಸಬೇಕೆಂಬುದು ಅವರ ನಂಬಿಕೆಯಾಗಿತ್ತು. ಹೀಗಾಗಿ, ಅವರು "ನೀವು ಈ ಕ್ಷಣದ ಬಗ್ಗೆ ಮಾತ್ರ ಚಿಂತಿಸಿ; ದೃಢವಾಗಿ ಪ್ರಯತ್ನಿಸಿ; ಎಂದಿಗೂ ಪ್ರಯತ್ನವನ್ನು ಕೈಬಿಡಬೇಡಿ; ತಪ್ಪು ಮಾಡಿದವರನ್ನು ಕ್ಷಮಿಸಿ, ಮುಂದಡಿ ಇಡಿ; ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳಿ" ಎನ್ನುವುದೆಲ್ಲ ಅವರ ಮಾತುಗಳೇ ಆಗಿವೆ. ಇಷ್ಟೇ ಅಲ್ಲ, ಅವರು "ಈ ಜಗತ್ತಿನಲ್ಲಿ ಯಾವ ಬದಲಾವಣೆ ಆಗಬೇಕೆಂದು ನಾವು ಬಯಸುತ್ತೀರೋ ಆ ಬದಲಾವಣೆ ಸ್ವತಃ

ನಿಮ್ಮಲ್ಲೇ ಮೊದಲು ಬರಲಿ," ಎಂದು ಹೇಳುತ್ತಿದ್ದರು. ತಮ್ಮ ಕಲ್ಪನೆಯ ಹೊಸ ಸಮಾಜದಲ್ಲಿ ಅವರು ಹೊಸ ಬಗೆಯ ನೈತಿಕತೆಯಿಂದ ಕೂಡಿದ ಮನುಷ್ಯನನ್ನು ಕಾಣಬೇಕೆಂಬುದೇ ಅವರ ಇಡೀ ಜೀವಮಾನದ ಹೋರಾಟವಾಗಿತ್ತು. ಇದನ್ನು ಸಾಧಿಸಲು ಅವರು ಸ್ವ-ಇಚ್ಛೆಯಿಂದ ಸರಳತೆ ಮತ್ತು ಬಡತನಗಳನ್ನು ಅಪ್ಪಿಕೊಂಡರು! ಅಲ್ಲದೆ, 'ಆಶ್ರಮವಾಸಿ'ಯಂತೆ ಅವರು ಬದುಕತೊಡಗಿದರು. ಅವರ ನಡೆ-ನುಡಿಗಳಲ್ಲಿ ಕಿಂಚಿತ್ತೂ ವ್ಯತ್ಯಾಸವಿರಲಿಲ್ಲ. ಅವರಿಗೆ 'ಬಹುದೊಡ್ಡ ನಾಯಕ'ನೆನ್ನುವ ಮನ್ನಣೆಯನ್ನು ತಂದುಕೊಟ್ಟಿದ್ದೇ ಅವರ ವ್ಯಕ್ತಿತ್ವದಲ್ಲಿದ್ದ ಈ ಗುಣವೆಂಬುದನ್ನು ನಾವು ಗಮನಿಸಬೇಕು!

ನಮ್ಮ ದೇಶಕ್ಕೆ ಯಾವ ಬಗೆಯ ಸ್ವಾತಂತ್ರ್ಯ ಬೇಕು ಎನ್ನುವ ಬಗ್ಗೆ ಗಾಂಧೀಜಿಯವರಿಗೆ ಅತ್ಯಂತ ಸ್ಪಷ್ಟವಾದ ಕಲ್ಪನೆ ಇತ್ತು. ಅವರ ದೃಷ್ಟಿಯಲ್ಲಿ, ದೇಶಕ್ಕೆ ಬರೀ ರಾಜಕೀಯ ಸ್ವಾತಂತ್ರ್ಯವಷ್ಟೇ ಸಾಕಾಗಿರಲಿಲ್ಲ. ರಾಜಕೀಯ ಸ್ವಾತಂತ್ರ್ಯವು ಆರ್ಥಿಕ ಪ್ರಗತಿಯ ಜತೆಜತೆಯಲ್ಲಿ ಸಾಗಬೇಕು ಎನ್ನುವುದು ಅವರ ನಿಲುವಾಗಿತ್ತು. ಹೀಗಾಗಿಯೇ ಅವರು, 'ಧರ್ಮದರ್ಶಿತ್ವ'ದಲ್ಲಿ ನಂಬಿಕೆ ಇಟ್ಟಿದ್ದರು. ಶ್ರೀಮಂತರು ತಮ್ಮ ಸಂಪತ್ತಿನ ಧರ್ಮದರ್ಶಿಗಳಾಗಬೇಕು ಎಂದು ಅವರು ಹೇಳುತ್ತಿದ್ದರು. ಅವರ ಈ ಕರೆಗೆ ಓಗೊಟ್ಟು ಬಿರ್ಲಾಗಳು, ಬಜಾಜ್ ವಂಶಸ್ಥರು, ಫಿರೋದಿಯಾಗಳು ತಮ್ಮ ಔದ್ಯಮಿಕ ಚಟುವಟಿಕೆಗಳಲ್ಲಿ ಈ 'ಧರ್ಮದರ್ಶಿತ್ವ'ದ ಪರಿಕಲ್ಪನೆಯನ್ನು ಅಳವಡಿಸಿಕೊಂಡರು. ಅನಂತರ ತಮ್ಮ ಸಂಪತ್ತಿನ ಗಮನಾರ್ಹ ಭಾಗವನ್ನು ದೇಶಕ್ಕೆ ಕಾಣಿಕೆಯಾಗಿ ಸಮರ್ಪಿಸಿದರು. ಯಾವುದೇ ಒಂದು ನೀತಿ ಅಥವಾ ತೀರ್ಮಾನವನ್ನು ಸರಿಯೋ, ತಪ್ಪೋ ಎಂದು ಅಳೆಯಲು ಗಾಂಧೀಜಿ ಒಂದು ಅದ್ಭುತ ತಂತ್ರವನ್ನು ಅನುಸರಿಸುತ್ತಿದ್ದರು. ಇದರ ಅನುಸಾರವಾಗಿ ಅವರು "ನೀವು ಯಾವುದೇ ಒಬ್ಬ ಬಡವನನ್ನು ನೋಡಿದ ಕ್ಷಣದಲ್ಲಿ, ನೀವಿಡುವ ಒಂದು ಹೆಜ್ಜೆಯಿಂದ ಅವನಿಗೇನಾದರೂ ಉಪಯೋಗ-ವಾಗುತ್ತದೆಯೇ?" ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ ಎಂದು ಕರೆಕೊಟ್ಟರು. ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆಯು 'ಬಡವರ ಸ್ವರಾಜ್ಯ'ವಾಗಿತ್ತು. ಈ ಬಗ್ಗೆ ಅವರು "ನನ್ನ ತಾತ್ವಿಕತೆ ತುಂಬಾ ಸರಳ. ನಮ್ಮ ದೇಶದಲ್ಲಿ ಬ್ರಿಟಿಷರು ಯಾವ ಆದೇಶವನ್ನು ಹೊರಡಿಸಲು ನಾನು ಬಿಡುವುದಿಲ್ಲ," ಎಂದು ಹೇಳುತ್ತಿದ್ದರು. ಬದುಕಿನ ಅಗತ್ಯಗಳಿಗೆ ಸಂಬಂಧಿಸಿದಂತೆ ಸಮತೋಲನವನ್ನು ಸಾಧಿಸುವುದು ಅವರ ಈ ತಾತ್ವಿಕತೆಯ ಕೇಂದ್ರವಾಗಿತ್ತು.

ಗಾಂಧೀಜಿಯವರ ಈ ಆಧ್ಯಾತ್ಮೀಕರಣ-ಗೊಂಡ ರಾಜಕಾರಣವು ದೂರಗಾಮಿ-ಯಾಗಿದ್ದು, ನಮ್ಮ ದೇಶದ ಎಲ್ಲೆಕಟ್ಟುಗಳನ್ನು ಮೀರಿ, ಜಗತ್ತಿನಾದ್ಯಂತ ಪಸರಿಸುತ್ತಿದೆ. 2010ರಲ್ಲಿ ಮುಂಬೈನ ಗಾಂಧಿ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮಾ, "ಗಾಂಧೀಜಿ ಕೇವಲ ಭಾರತಕ್ಕೆ ಮಾತ್ರ ನಾಯಕರಲ್ಲ, ಅವರು ಇಡೀ ವಿಶ್ವದ ನಾಯಕರು," ಎಂದು ಬರೆದಿದ್ದರು. 'ಟೈಮ್ಸ್' ಪತ್ರಿಕೆಯು 1999 ರಲ್ಲಿ ತಾನು ಪ್ರಕಟಿಸಿದ್ದ ಲೇಖನವೊಂದರಲ್ಲಿ "ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ದಲಾಯಿ ಲಾಮಾ, ಮಾರ್ಟಿನ್ ಲೂತರ್ ಕಿಂಗ್, ನೆಲ್ಸನ್ ಮಂಡೇಲಾ ಮುಂತಾದವರೆಲ್ಲ ಗಾಂಧೀಜಿ-ಯವರು ಪ್ರತಿಪಾದಿಸುತ್ತಿದ್ದ ಅಹಿಂಸಾ ತತ್ತ್ವದ ಆಧ್ಯಾತ್ಮಿಕ ವಾರಸುದಾರರು," ಎಂದು ಬಣ್ಣಿಸಿತ್ತು. ಇಂಥ ಮಹಾತ್ಮ ಗಾಂಧೀಜಿಯವರ ಜನ್ಮದಿನವಾದ ಅಕ್ಟೋಬರ್ 2ನೇ ತಾರೀಖನ್ನು ವಿಶ್ವಸಂಸ್ಥೆಯು 'ಅಂತಾರಾಷ್ಟ್ರೀಯ ಅಹಿಂಸಾ ದಿನ'ವೆಂದು ಘೋಷಿಸಿದೆ. ತಮ್ಮ ಬದುಕಿನ ರೀತಿನೀತಿಗಳಿಗೆ ಇದಕ್ಕಿಂತ ಹೆಚ್ಚಿನ ಮನ್ನಣೆ ಇನ್ನೇನು ಬೇಕು ಹೇಳಿ?.



**ಗಾಂಧೀಜಿಯವರು ಹಲವು ಮತಧರ್ಮಗಳ ಸೌಹಾರ್ದದಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. ಹೀಗಾಗಿ, ಅವರು ಸಕಲರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಿದ್ದರು. ಅವರ ಪ್ರಕಾರ, ಕೋಮುಗಲಭೆಗಳು ಹೇಡಿಗಳು ಮಾಡುವ ಕೆಲಸವಾಗಿತ್ತು. ಅಲ್ಲದೆ, ಯಾವ ಧರ್ಮದಲ್ಲೂ ಗೂಂಡಾಗಿರಿಗೆ ಆಸ್ಪದವಿಲ್ಲ ಎಂದು ಹೇಳುತ್ತಿದ್ದ ಅವರು, ಪ್ರತೀ ಧರ್ಮವನ್ನೂ ಗೌರವಿಸಬೇಕೆಂಬ ನಂಬಿಕೆಯನ್ನು ರೂಢಿಸಿಕೊಂಡಿದ್ದರು. ಅವರ ಪ್ರಕಾರ, ಮತಧರ್ಮಗಳ ಹೆಸರಿನ ಸಂಕುಚಿತ ವಾದಕ್ಕಿಂತ ದೇಶವನ್ನು ಪ್ರೀತಿಸುವ ರಾಷ್ಟ್ರೀಯತೆ ಮುಖ್ಯವಾಗಿತ್ತು. ಹೀಗಾಗಿ ಅವರು, "ಮೊದಲಿಗೆ ನಾವೆಲ್ಲರೂ ಭಾರತೀಯರು; ಆಮೇಲಷ್ಟೆ ಹಿಂದೂಗಳು, ಮುಸ್ಲಿಮರು," ಎಂದು ಪ್ರತಿಪಾದಿಸುತ್ತಿದ್ದರು. ಅವರು, ಅಲ್ಪಸಂಖ್ಯಾತರು ಕೂಡ ಸುರಕ್ಷಿತವಾಗಿ ಬದುಕುವಂಥ ಸಮಾನ ಪೌರತ್ವದ ಕಲ್ಪನೆಯನ್ನು ನಮಗೆ ನೀಡಿದ್ದಾರೆ. ಗಾಂಧೀಜಿಯವರು ನಡೆಸುತ್ತಿದ್ದ ಪ್ರತಿಯೊಂದು ರಾಜಕೀಯ ಸಭೆಯಲ್ಲೂ ಆಶ್ರಮದ ಭಜನೆ ನಡೆಯುತ್ತಿತ್ತು. ಈ ಭಜನೆಗಳು 'ಸಬ್ ಕೋ ಸನ್ಮತಿ ದೇ ಭಗವಾನ್,' ಎನ್ನುವ ಉದಾತ್ತ ಆಲೋಚನೆಯಿಂದ ಕೂಡಿರುತ್ತಿದ್ದವು.**

**ಸತ್ಯ ಮತ್ತು ಅಹಿಂಸೆಗೆ ಗಾಂಧಿ ಮಹಾತ್ಮ ಒಬ್ಬ ರೂಪದರ್ಶಿ. ಆದರೆ, ರೂಪದರ್ಶಿಯನ್ನು ಆರಾಧಿಸುವುದರಿಂದ ಇಲ್ಲವೆ ದೈವತ್ವಕ್ಕೆ ಏರಿಸುವುದರಿಂದ ಸತ್ಯ ಹಾಗೂ ಅಹಿಂಸೆಗೆ ಮಾನ್ಯತೆ ಸಿಕ್ಕುವುದಿಲ್ಲ. ಆರಾಧನೆ ಬೇರೆ– ಆಸ್ವಾದನೆ ಬೇರೆ. ಹೊಸ ಮಾರ್ಗವನ್ನು ನಿರೀಕ್ಷಿಸುತ್ತಿರುವ ಭಾರತಕ್ಕೆ ಈಗ ಬೇಕಾಗಿರುವುದು ಗಾಂಧಿ ಮಹಾತ್ಮರು ಹಾಕಿಕೊಟ್ಟ ಸತ್ಯ–ಅಹಿಂಸೆಯ ಮಾರ್ಗದಲ್ಲಿ ಹೆಜ್ಜೆ ಹಾಕುವ ಉಪಾಯಗಳನ್ನು ಹೇಳಿಕೊಡುವ ಮಾರ್ಗದರ್ಶಿ. ಹೊಸತಲೆಮಾರಿನ ಜನರಲ್ಲಿ ಗಾಂಧಿ ಮೌಲ್ಯಗಳನ್ನು ಹಾಗೂ ಅವುಗಳ ಮಹತ್ವವನ್ನು ಬಿತ್ತಿ ದೇಶದ ಅಭ್ಯುದಯದ ಬೆಳೆ ತೆಗೆಯುವ ನಿಸ್ವಾರ್ಥ ನಾಯಕರು ಈಗಿನ ಅಗತ್ಯ. ರಾಷ್ಟ್ರಪಿತ, ಭಾರತ ಭಾಗ್ಯವಿಧಾತ ಮೋಹನ ದಾಸ ಕರಮಚಂದ ಗಾಂಧಿಯವರ 150ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಇಂತಹ ನಿಸ್ವಾರ್ಥ ಮನೋಧರ್ಮದ ನೇತಾರರು ಭಾರತೀಯರ ಮನಸ್ಸುಗಳನ್ನು ಜೋಡಿಸುವ ಕಾಯಕಕ್ಕೆ ಮುಂದಾಗುವುದಾದರೆ ನಿಜಕ್ಕೂ ಪವಿತ್ರ ಭರತ ಭೂಮಿ ಪುಣ್ಯಭೂಮಿ ಎಂಬ ಮಾತಿಗೆ ಸಾರ್ಥಕ್ಯದ ಬೆಲೆ.**



# ಭಾಗ್ಯವಿಧಾತನ ವರ್ತಮಾನದ ಹೆಜ್ಜೆ

– ಜಿ.ಎಸ್.ಜಯದೇವ

**ನ**ಮ್ಮ ಆಶ್ರಮದಲ್ಲಿ ಧ್ಯಾನಸ್ಥ ಗಾಂಧಿಯ ಪ್ರತಿಮೆಯೊಂದಿದೆ. ನಮ್ಮೊಡನೆ ಸ್ವಯಂ ಸೇವಕಿಯಾಗಿ ಕೆಲಸ ಮಾಡುತ್ತಿದ್ದ ಜರ್ಮನ್ ತರುಣಿಯೊಬ್ಬಳು 'ಈ ಗಾಂಧಿ ಪ್ರತಿಮೆಯನ್ನು ಏಕಿಲ್ಲಿ ಇರಿಸಿದ್ದೀರಿ?' ಎಂದು ಕೇಳಿದಳು. ಇಂಥದೊಂದು ಪ್ರಶ್ನೆ ಎದುರಾಗಬಹುದೆಂಬ ಊಹೆಯಿಲ್ಲದ ನಾನು ಗಲಿಬಿಲಿಗೊಂಡೆ. ಆದರೂ ಯೋಚಿಸಿ ಹೇಳಿದೆ–'ಗಾಂಧಿ ಅನೇಕ ಒಳಿತುಗಳ ಮೂರ್ತರೂಪ; ನಮ್ಮ ಸಮಾಜದಲ್ಲಿ, ನಮ್ಮ ನಡುವೆ ಒಳಿತುಗಳು ಗೆಲ್ಲಲಿ ಎಂಬಾಸೆಯಿದೆ. ಹಾಗಾಗಿ ಗಾಂಧಿಯನ್ನು ಇಲ್ಲಿ ಪ್ರತಿಷ್ಠಾಪಿಸಿದ್ದೇವೆ.'

ಇಂದು ಗಾಂಧಿ ಬಹು ಚರ್ಚಿತ ವಿಷಯ. ಬೇಕು ಎಂದಾಗಲಿ ಬೇಡವೆಂದಾಗಲಿ ಅಭಿಪ್ರಾಯವೇನೇ ಇರಲಿ ಗಾಂಧಿಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಗಾಂಧಿ ಇಂದು ನೀತಿಬೋಧನೆಗೆ ನಿಮಿತ್ತ ಮಾತ್ರ ಎಂದು ಭಾವಿಸುವಂತಿಲ್ಲ. ಆಧುನಿಕ ಮನುಷ್ಯ ವಸ್ತು ಸಮೃದ್ಧಿಯ ಮೂಲಕ ಸಂತೋಷ ಸಂಪಾದಿಸುವುದಕ್ಕಿಂತ ಅಂತರಂಗದ ಬಡತನ ಸಂಪಾದಿಸಿದ್ದು, ಮನುಷ್ಯನಿಗಿಂತ ಮನೆ, ಮಠ, ಕಾರು ಇತ್ಯಾದಿಗಳೇ ಮುಖ್ಯವಾಗುವ ಮೂಲಕ ಆತ ಎರಡನೇ ಸ್ಥಾನಕ್ಕಿಳಿದಿದ್ದಾನೆ. ಆಧುನಿಕ ಬದುಕು ಮನುಷ್ಯ ಸಂಬಂಧಗಳನ್ನು ಹಾಳು ಮಾಡಿದೆ. ಕುಟುಂಬಗಳಲ್ಲಿ ಪರಸ್ಪರ ನಂಬಿಕೆ, ಅನ್ಯೋನ್ಯತೆ ಪ್ರೀತಿ–ವಾತ್ಸಲ್ಯಗಳು ಕಾಣೆಯಾಗುತ್ತಿವೆ. ವಿವಾಹ ವಿಚ್ಛೇದನಗಳೂ ಹೆಚ್ಚುತ್ತಿವೆ. ಬೀದಿಮಕ್ಕಳ ಮತ್ತು ವೃದ್ಧಾಶ್ರಮಗಳ ಸಂಖ್ಯೆಯೂ ಹೆಚ್ಚುತ್ತಿವೆ. ದೃಢಕಾಯ ಯುವಕರು ನಗರಗಳಿಗೆ ವಲಸೆ ಹೋಗುತ್ತಿರುವುದರಿಂದ ವೃದ್ಧರು, ಮಕ್ಕಳು ಮತ್ತು ಹೆಂಗಸರಿಂದ ಹಳ್ಳಿಗಳು ಬಣಗುಟ್ಟುತ್ತಿವೆ. ಹೆಚ್ಚುತ್ತಿರುವ ಜನಸಂಖ್ಯೆಯ ಜೊತೆಗೆ ಐಶಾರಾಮಿ ಬದುಕಿನ ದುರಾಸೆ ಪರಿಸರವನ್ನು ಕೆಡಿಸಿದೆ.

ಕೇರಳ–ಕೊಡಗುಗಳ ದುರಂತಕ್ಕೂ ಮನುಷ್ಯನ ಇಂದಿನ ಆಕ್ರಮಣಕಾರಿ ಬದುಕಿನ ಶೈಲಿಗೂ ಸಂಬಂಧವಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದ್ದರೂ ಎಚ್ಚೆತ್ತಂತೆ ಕಾಣುತ್ತಿಲ್ಲ. ಇವೆಲ್ಲಾ ಸರಣಿ ಅವಘಡಗಳಿಗೆ ಒಂದು ಮೂಲ ಕಾರಣವಿದೆ ಎಂಬುದನ್ನು ಗುರುತಿಸಬೇಕು.

ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲಷ್ಟು ಸಂಪತ್ತು ನಮ್ಮ ಭೂಮಿಯಲ್ಲಿದೆ, ದುರಾಸೆಯನ್ನಲ್ಲ ಎಂದು ಗಾಂಧೀಜಿ ಹೇಳಿದ್ದರು. ಅಲ್ಲದೇ ಆರುಮುಕ್ಕಾಲು ಲಕ್ಷ ಹಳ್ಳಿಗಳಿರುವ ಭಾರತ ಹಳ್ಳಿಗಳ ದೇಶ. ಭಾರತದ ಹಳ್ಳಿಗಳು ನಾಶವಾದರೆ ದೇಶವೂ ನಾಶವಾದಂತೆ, ಅದು ಇಂಡಿಯಾ ದೇಶವಾಗಿ ಉಳಿಯಲಾರದಲ್ಲದೇ ಇಡೀ ಪ್ರಪಂಚಕ್ಕೆ ಕೊಡಬಹುದಾಗಿದ್ದ ಕೊಡುಗೆಯೂ ಇಲ್ಲವಾಗುತ್ತದೆ ಎಂದಿದ್ದರು. ಅಷ್ಟೇ ಅಲ್ಲ, ನನ್ನ ಖಾದಿ ಮನಸ್ಸು ಹೇಳುತ್ತದೆ ನಗರಗಳು ಹಳ್ಳಿಗಳನ್ನು ಸಲಹಬೇಕು, ಅವುಗಳ ಅಧೀನದಲ್ಲಿರಬೇಕು. ಹಳ್ಳಿಗಳ ಶೋಷಣೆ ಒಂದು ವ್ಯವಸ್ಥಿತ ಕ್ರೌರ್ಯ ಎಂದಿದ್ದರು. ಇಂದಿನ ಅಭಿವೃದ್ಧಿ ಮಾದರಿಗಳ ಹಳ್ಳಿಗಳಿಂದ ಬಹಳ ದೂರ ಸರಿದಿವೆ. ದೇಶದ 80 ಕೋಟಿ ಶ್ರೀಸಾಮಾನ್ಯರು ಬಡತನದ ಬೇಗೆಯಿಂದ ನರಳುತ್ತಿರುವುದು ಹಣದ ಕೊರತೆಯಿಂದಲ್ಲ. ಹಳ್ಳಿಗಳ ಉತ್ಪಾದನಾ ಸಾಮರ್ಥ್ಯಕ್ಕೆ ಬೆಲೆ ಸಿಗದಂಥ ಪರಿಸ್ಥಿತಿಯನ್ನು ನಗರಕೇಂದ್ರಿತ ಅಭಿವೃದ್ಧಿ ಸಾಧಿಸಿದೆ.

**ಆಧುನಿಕತೆ ಎಂಬ ರೋಗಕ್ಕೆ ಗಾಂಧೀಜಿ ಕಂಡುಕೊಂಡ ಈ ನೆಲಮೂಲದ ಉತ್ತರ ಸ್ವಯಂಪ್ರೇರಣೆಯಿಂದ ಆತ್ಮಶುದ್ಧಿ ಮಾಡಿಕೊಳ್ಳುವುದು. ಅವರ ಪ್ರಕಾರ ಭಾರತ ಬ್ರಿಟಿಷರ ಗುಲಾಮಗಿರಿಗೊಳಗಾಗಿದ್ದಕ್ಕೆ ಮುಖ್ಯ ಕಾರಣ ಭಾರತೀಯರು ಬ್ರಿಟಿಷರ ವಸ್ತುಗಳಿಗೆ ಮಾರುಹೋಗಿದ್ದು. ಅಂತರಂಗದಲ್ಲಿ ಮನೆಮಾಡುವ ಆಸೆ-ಆಮಿಷಗಳು ಬಹಿರಂಗದ ಸಾಂಸ್ಕೃತಿಕ ಗುಲಾಮಗಿರಿಗೆ ಕಾರಣವಾಗುತ್ತವೆ. ಅಂತರಂಗದ ಪರಿಸರವನ್ನು ಬದಲಿಸಿಕೊಳ್ಳುವ ಮೂಲಕ ಹೊರಗಿನ ಪರಿಸರ ಪರಿಸ್ಥಿತಿಗಳನ್ನು ಬದಲಿಸಿಕೊಳ್ಳುವ ಮಾರ್ಗವನ್ನು ಗಾಂಧೀಜಿ ಕಂಡುಕೊಂಡರು. ಹಾಗಾಗಿ ನೀನು ಬಯಸುವ ಬದಲಾವಣೆ ನೀನೇ ಆಗು ಎಂದಿದ್ದು ಈ ಕಾರಣಕ್ಕಾಗಿ ಸ್ವಯಂ ಪ್ರೇರಣೆಯಿಂದ ಆತ್ಮಶುದ್ಧಿ ಕೈಗೊಳ್ಳುವ ಜನಸಮುದಾಯ ಗುಲಾಮಗಿರಿಗೊಳಗಾಗದೆ ತನ್ನತನ ಉಳಿಸಿಕೊಳ್ಳಬಲ್ಲದು. ತನ್ನ ಸಂಸ್ಕೃತಿಗನುಗುಣವಾಗಿ ಅಭಿವೃದ್ಧಿಯನ್ನು ರೂಪಿಸಿಕೊಳ್ಳಬಲ್ಲದು.**

ನಗರಗಳ ವಿಕಾರ ಬೆಳವಣಿಗೆಯ ಜೊತೆಜೊತೆಗೇ ರೈತರ ಆತ್ಮಹತ್ಯೆ ಹೆಚ್ಚಿರುವುದು ಕಾಕತಾಳೀಯವೇನಲ್ಲ; ಇಷ್ಟಾಗಿ ನಗರಗಳಲ್ಲಿ ವಾಸಿಸುವ ಜನ ನೆಮ್ಮದಿಯಿಂದ ಇದ್ದಾರೆಯೇ? ಸಂತೋಷ ನೆಮ್ಮದಿ ಲಭಿಸಿವೆಯೆ? ಎಂಬ ಪ್ರಶ್ನೆಗೆ ಉತ್ತರ ಇಲ್ಲ ಎಂಬುದೇ ಆಗಿದೆ. ಹಾಗಾದರೆ ಈ ಅಭಿವೃದ್ಧಿ, ಆರ್ಥಿಕ ಬೆಳವಣಿಗೆ, ವಿದೇಶೀ ಹೂಡಿಕೆ, ತಂತ್ರಜ್ಞಾನದ ಪ್ರಗತಿ ಇವೆಲ್ಲದರಿಂದ ನಾವು ಸಾಧಿಸಿದ್ದೇನು? ಸದಾ ಭಯ, ಸಂಶಯ, ಆತಂಕಗಳಲ್ಲಿ ಬದುಕುವ ನಗರಜೀವನ ಅಥವಾ ಕಡುಬಡತನದಲ್ಲಿ ಘನತೆ ಗೌರವವಿಲ್ಲದೆ ಕೀಳರಿಮೆಯಲ್ಲಿ ಬದುಕು ನೂಕಬೇಕಾದ ಹಳ್ಳಿಯ ಜೀವನ.

ಮನುಷ್ಯ ದೇಹ ಸೌಕರ್ಯಗಳಿಗೆ ದಾಸನಾಗಿರುವುದೇ ಇವೆಲ್ಲ ದುಷ್ಪರಿಣಾಮ-ಗಳಿಗೆ ಕಾರಣ. ಈ ಕುರಿತು ಬಹಳ ಹಿಂದೆಯೇ ಗಾಂಧೀಜಿಯವರು ಇದೊಂದು ಯೂರೋಪಿಯನ್ನರ ಚಾಳಿ. ಇದನ್ನು ಅನುಸರಿಸುವ ಅಗತ್ಯವಿಲ್ಲ ಎಂದು ಎಚ್ಚರಿಸಿದ್ದರು. ಸುಖಲೋಲುಪತೆಗಾಗಿ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲು ಯಂತ್ರ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿ-ಕೊಂಡಿದ್ದೇವೆ. ಈ ಯಂತ್ರಗಳು, ತಂತ್ರಜ್ಞಾನಗಳು ಕ್ರಮೇಣ ಬಂಡವಾಳ-ಶಾಹಿಗಳ ಕೈವಶವಾಗಿ ಆರ್ಥಿಕ ಅಸಮತೋಲನಕ್ಕೆ ಕಾರಣವಾಗುತ್ತದೆ. ಇದೆಲ್ಲದರ ಪರಿಣಾಮ ಮನುಷ್ಯನಿಗಾಗಿ ಅಭಿವೃದ್ಧಿ ಎನ್ನುವುದಕ್ಕಿಂತ ಅಭಿವೃದ್ಧಿಗಾಗಿ ಮನುಷ್ಯ ಸಿದ್ಧನಾಗಬೇಕು ಎಂಬಂಥ ಪರಿಸ್ಥಿತಿ ಉಂಟಾಗಿದೆ. ಮನುಷ್ಯನನ್ನು ಸದಾ ಎರಡನೆಯ ಸ್ಥಾನದಲ್ಲಿಡುವ ಒಂದು ವಿಕೃತ ಆದ್ಯತೆಯನ್ನು ನಾವು ಸೃಷ್ಟಿಕೊಂಡಿದ್ದೇವೆ. ಮನುಷ್ಯನಿಗಾಗಿ ಯಂತ್ರ ಎಂಬುದಕ್ಕೆ ಬದಲಾಗಿ ಈಗ ಯಂತ್ರಗಳಿಗಾಗಿ ಮನುಷ್ಯ, ಮನುಷ್ಯಗಾಗಿ ಆರ್ಥಿಕತೆ ಎಂಬುದಕ್ಕಿಂತ ಆರ್ಥಿಕತೆಗಾಗಿ ಮನುಷ್ಯ - ಹೀಗೆ ಎಲ್ಲವೂ ತಿರುಗುಮುರುಗಾಗಿ ಬದಲಾದಂತಿದೆ. ಬಹುಶಃ ಈ ಜಾಡ್ಯ ಧರ್ಮಕ್ಕೂ ವ್ಯಾಪಿಸಿ ಮನುಷ್ಯನಿಗಾಗಿ ಧರ್ಮ ಎಂಬುದಕ್ಕೆ ಬಲದಾಗಿ ಪಟ್ಟ ಭದ್ರ ಹಿತಾಸಕ್ತಿಗಳು ರೂಪಿಸುವ ಧರ್ಮಕ್ಕಾಗಿ ಅಮಾಯಕ ಮನುಷ್ಯ ಎಂಬ ಪರಿಸ್ಥಿತಿ ಉಂಟಾಗಿದೆ. ಇದು ಮನುಷ್ಯ ತನಗೆ ತಾನೇ ಮಾಡಿಕೊಳ್ಳುತ್ತಿರುವ ದ್ರೋಹ.

ಈ ಬಗೆಯ ಅದಲುಬದಲುಗಳಿಗೆ ಪರಿಹಾರಾರ್ಥವಾಗಿ ಗಾಂಧಿ ಚಿಂತನೆಗಳ ಕುರಿತು ಪ್ರಪಂಚದಾದ್ಯಂತ ಚರ್ಚೆಗಳು ಪ್ರಾರಂಭವಾಗಿವೆ. ಮನುಷ್ಯ ಶಾಂತಿಯಿಂದ, ನೆಮ್ಮದಿಯಿಂದ ಬದುಕಬೇಕೆಂದರೆ ಅವನು ಹಳ್ಳಿಗಳಲ್ಲಿ ವಾಸಿಸಬೇಕು, ನಗರಗಳಲ್ಲಿ ಅಲ್ಲ; ಅವನು ಗುಡಿಸಿನಲ್ಲಿ ವಾಸಿಸಬೇಕು, ಮಹಲುಗಳಲ್ಲಿ ಅಲ್ಲ. ನಗರ ಜೀವನದಲ್ಲಿ ಕ್ರೌರ್ಯ-ಹಿಂಸೆಗಳು ಅನಿವಾರ್ಯ-ವಾಗುತ್ತವೆ. ಎಂಬುದನ್ನು ಗಾಂಧೀಜಿ ಹೇಳಿದ್ದರು. ಇಂತಹ ಒಂದು ಸರಳ ಜೀವನ ಸಂತೋಷದಾಯಕವಾಗಿಯೂ, ಸಾರ್ಥಕ ಜೀವನವಾಗಿಯೂ ರೂಪುಗೊಳ್ಳುವುದು ಹೇಗೆ? ಆಧ್ಯಾತ್ಮಿಕ ತಳಹದಿಯಿಂದಲ್ಲದೆ ಇದು ಸಾಧ್ಯವಿಲ್ಲ ಎಂಬುದು ಗಾಂಧೀಜಿಯ ಕಾಣ್ಕೆ.





ಗಾಂಧೀಜಿಯವರ ಈ ಮಾತುಗಳನ್ನು ಗಮನಿಸಿ 'ಭಾರತದ ನಿರ್ದಿಷ್ಟ ಕಾರ್ಯವು ಉಳಿದ ದೇಶಗಳಿಗಿಂತಲೂ ಭಿನ್ನವಾಗಿದೆ ಎಂಬುದು ನನ್ನ ಎಣಿಕೆ. ಜಗತ್ತಿನ ಧಾರ್ಮಿಕ ಸಾರ್ವಭೌಮತ್ವಕ್ಕಾಗಿ ಭಾರತವು ಅಣಿಗೊಳಿಸಲ್ಪಟ್ಟಿದೆ. ಈ ಮಾತುಗಳನ್ನು ಹೇಳುತ್ತಲೇ ಗಾಂಧೀಜಿ ಸ್ಪಷ್ಟಪಡಿಸುವ ವಿಷಯವೇನೆಂದರೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಹೀಗೆ ಎಲ್ಲಾ ಧರ್ಮಿಯರೂ ಸಹಬಾಳ್ವೆ ನಡೆಸುವುದೇ ಆದರ್ಶಗ್ರಾಮ. ಈ ರಾಷ್ಟ್ರವು ಸ್ವಯಂಪ್ರೇರಣೆಯಿಂದ ಕೈಗೊಂಡಿರುವ ಆತ್ಮಶುದ್ಧಿಯ ವಿಧಾನವು ಅಸದೃಶವಾಗಿದೆ. ಈ ದೇಶವು ಯೂರೋಪಿನ ಅಂಧಾನುಕರಣೆ ಮಾಡಬಾರದು ಎನ್ನುವ ಗಾಂಧೀಜಿ ಪಶ್ಚಿಮದ ಈ ಮಹಾಪ್ರವಾಹವನ್ನು ನಾನು ತಡೆಯಲಾರೆನೆಂಬ ಆಲಸ್ಯ, ಅಸಹಾಯಕತೆಗಳ ಉದ್ಗಾರವನ್ನು ಭಾರತವು ಎಂದೂ ತೆಗೆಯಕೂಡದು ಎಂದಿದ್ದಾರೆ.

ಆಧುನಿಕ ಬದುಕಿನ ಸಂದರ್ಭದಲ್ಲಿ ಆತ್ಮಶುದ್ಧಿಗಿಂತ ಬುದ್ಧಿವಂತಿಕೆ, ಚಾಕಚಕ್ಯತೆ ಮತ್ತು ಸಂದರ್ಭಕ್ಕೆ ತಕ್ಕಂತೆ ಬದಲಾಗುವ ಜಾಣ್ಮೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಕಾನೂನಿನನ್ವಯ ಸಮಾನತೆಯ ಆಶಯವನ್ನು ಪ್ರತಿಪಾದಿಸಿದರೂ ಜೀವನವೆಂಬುದು ಹಾವು–ಏಣಿ ಆಟದ ಹಾಗೆ ಏರುವುದಕ್ಕೂ–ಇಳಿಯುವುದಕ್ಕೂ ಅರ್ಥಮಾಡಿಕೊಳ್ಳಬಹುದಾದ ತಾರ್ಕಿಕ ಕಾರಣಗಳೇ ಕಾಣುವುದಿಲ್ಲ. ಸರಳ ಸುಂದರವಾಗಿರಬೇಕಾದ ಬದುಕು ಕ್ಲಿಷ್ಟಕರವೂ ಯಾತನಾಮಯವೂ ಆಗಿಕೂತಿದೆ. ಎಲ್ಲಾ ವಲಯಗಳಲ್ಲೂ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು ಅದೃಷ್ಟವನ್ನವಲಂಬಿಸಿದಂತೆ ಕಾಣುತ್ತಿದೆ. ಶ್ರಮಕ್ಕೆ ತಕ್ಕ ಪ್ರತಿಫಲ ನೇರವಾಗಿ ಸಿಗಬಹುದಾದ ವ್ಯವಸ್ಥೆಯಲ್ಲಿ ಗಾಂಧೀಜಿಗೆ ಒಲವಿತ್ತು ಅತಿಯಾದ ಯಂತ್ರಾವಲಂಬನೆಯಿಂದಾಗಿ ಉತ್ಪಾದಕ–ಬಳಕೆದಾರರ ನಡುವೆ ಇಂದು ಯಾವ ಸಂಬಂಧವೂ ಇಲ್ಲ. ಹಾಗಾಗಿ ಉತ್ಪಾದಿಸಿದ ವಸ್ತುವಿನ ಹಿಂದಿರುವ ಮಾನವ ಶ್ರಮವನ್ನು ಬಳಕೆದಾರ ಗೌರವಿಸಬೇಕಾಗಿಲ್ಲ. ಈ ಭಾವನಾ ಅನ್ಯೋನ್ಯತೆಯ ಕೊರತೆಯೇ ಕೊಳ್ಳುಬಾಕ ಸಂಸ್ಕೃತಿಗೆ ಕಾರಣವೆಂದು ಕಾಣುತ್ತದೆ. ಇದರ ಪರಿಣಾಮ ಪ್ರಕೃತಿ ಸಂಪನ್ಮೂಲಗಳನ್ನು ನಾವು ಬೇಜವಾಬ್ದಾರಿಯಿಂದ ಕೊಳ್ಳೆ ಹೊಡೆಯುತ್ತ ಪರಿಸರ ದುರಂತಕ್ಕೆ ದಾರಿಮಾಡಿದ್ದೇವೆ.

ಈ ಪರಿಸ್ಥಿತಿಯಲ್ಲಿ ನಮ್ಮ ಜೀವನ ಶೈಲಿಯನ್ನು ಮರುಪರೀಕ್ಷೆಗೊಳಪಡಿಸಬೇಕು. ಹೆಚ್ಚು ಉತ್ಪಾದನೆ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ, ಈ ಹೆಚ್ಚೆಚ್ಚು ಎಂಬುದಕ್ಕೆ ಕೊನೆಯಿಲ್ಲ ಎಂಬುದೀಗ ತಿಳಿಯುತ್ತಿದೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಮಾತನ್ನೂ ಗಮನಿಸಬೇಕು–ನೀವು ಕಂಡು ಹಿಡಿದ ಒಂದು ಯಂತ್ರ ಇಪ್ಪತ್ತು ಜನರನ್ನು ಶ್ರೀಮಂತಗೊಳಿಸಬಹುದು. ಆದರದು ಇಪ್ಪತ್ತು ಸಾವಿರ ಜನರನ್ನು ಬಡತನಕ್ಕೆ ನೂಕುತ್ತದೆ. ಖಾದಿ–ಕೈಮಗ್ಗವಾಗಲಿ ಅಥವಾ ಇನ್ನಿತರ ಯಾವುದೇ ಕ್ಷೇತ್ರವನ್ನೇ ತೆಗೆದುಕೊಳ್ಳಿ ಈ ಮಾತು ಎಷ್ಟು ಸತ್ಯ ಎಂದು ತಿಳಿಯುತ್ತದೆಯಲ್ಲವೆ? ಆಧ್ಯಾತ್ಮಿಕ ತಳಹದಿಯ ಗಾಂಧಿ ಮಾರ್ಗ ಬಿಟ್ಟು ಹೆಚ್ಚು ಪರ್ಯಾಯಗಳಿಲ್ಲ. ಪರಿಸರ ವಿಕೋಪಗಳು ಮನುಕುಲವನ್ನು ನಾಶ ಮಾಡುವ ಮೊದಲು ಜಾಗೃತರಾಗೋಣ.

**ಕೃಪೆ : ಸಂಯುಕ್ತ ಕರ್ನಾಟಕ**



## ರಾಷ್ಟ್ರಪಿತನ ಅಮೃತವಾಣಿ



**ಅಹಿಂಸೆ :** ಅಹಿಂಸೆ ನನ್ನ ದೇವರು. ಸತ್ಯ ನನ್ನ ದೇವರು. ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ. "ನನ್ನ ಮೂಲಕವೇ ಅದರ ಸಿದ್ಧಿ" ಎಂದು ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ "ನನ್ನ ಮೂಲಕವೇ ಅದರ ಸಿದ್ಧಿ"

**ಅತೃಪ್ತಿ :** ಆರೋಗ್ಯಕರವಾದ ಅತೃಪ್ತಿ ಪ್ರಗತಿಗೆ ಪೀಠಿಕೆ.

**ಅನ್ನ :** ಆರೋಗ್ಯ ದೃಢಕಾಯದ ಮನುಷ್ಯನೊಬ್ಬ ಅವನು ಅನ್ನಕ್ಕಾಗಿ ಪ್ರಾಮಾಣಿಕವಾದ ಯಾವ ರೀತಿಯಲ್ಲೂ ದುಡಿಯದಿದ್ದಾಗ ಅವನಿಗೆ ಉಚಿತವಾಗಿ ಊಟ ಹಾಕುವುದನ್ನು ನನ್ನ ಅಹಿಂಸೆ ಸಹಿಸುವುದಿಲ್ಲ.

**ಅರ್ಥಶಾಸ್ತ್ರ :** ವ್ಯಕ್ತಿಯ ಅಥವಾ ದೇಶದ ನೈತಿಕ ಹಿತಕ್ಕೆ ಅಪಾಯಕರವಾದ ಅರ್ಥಶಾಸ್ತ್ರ ಅನೀತಿಯುತವಾದದ್ದು. ಆದ್ದರಿಂದ ಅದು ಪಾಪಯುಕ್ತ. ಒಂದು ದೇಶ ಇನ್ನೊಂದು ದೇಶವನ್ನು ಕಬಳಿಸಲು ಅಪ್ಪಣೆ ಮಾಡುವ ಅರ್ಥಶಾಸ್ತ್ರ ಅನೈತಿಕವಾದದ್ದು.

**ಅಸ್ತೇಯ :** ಒಂದು ಬಗೆಯಿಂದ ನಾವು ಕಳ್ಳರೇ ಸರಿ ಎಂದು ನಾನು ಹೇಳಿದರೆ ತಪ್ಪಲ್ಲ ನನಗೆ ತಾತ್ಕಾಲಿಕವಾಗಿ ಬೇಡವಾಗಿರುವ ವಸ್ತುವನ್ನು ದೊರಕಿಸಿಕೊಂಡಾಗ ನಾನು ಅದನ್ನು ಇನ್ನಾರಿಂದಲಾದರೂ ಕದ್ದಂತೆಯೇ ಸರಿ. ಪ್ರತಿಯೊಬ್ಬನೂ ತನಗೆ ಬೇಕಾದಷ್ಟನ್ನು ಮಾತ್ರ ಕೊಂಡು ಎಳ್ಳಷ್ಟು ಹೆಚ್ಚಿನದನ್ನು ಕೊಳ್ಳದೆ ಹೋದರೆ ದಾರಿದ್ರ್ಯವೆಂಬುದು ಜಗತ್ತಿನಲ್ಲಿ ಇಲ್ಲದಂತಾಗುವುದು. ಯಾವನೊಬ್ಬನೂ ಉಪವಾಸ ಸಾಯುವ ಪ್ರಸಂಗವೂ ಬಾರದು.

**ಅಹಂಭಾವ :** ನಾನು ಇದನ್ನು ಮಾಡುತ್ತಿರುವೆ' ಎಂಬ ಅಹಂಭಾವಕ್ಕೆ ವಶರಾಗಬೇಡಿ ಅಹಂಬಾವ ಭರಿತ ಸೇವೆ ಬೆಲೆಯಿಲ್ಲದಂತಾಗುತ್ತದೆ. ನಾವು ನಮ್ಮ ಅಹಂಕಾರವನ್ನು ಪೂರ್ಣವಾಗಿ ಹೋಗಲಾಡಿಸಿಕೊಳ್ಳುವವರೆಗೆ ನಮ್ಮಲ್ಲಿಯ ಕೆಡಕುಗಳನ್ನು ನಾವು ಗೆಲ್ಲಲಾರೆವು.

**ಅವಿಶ್ವಾಸ :** ಮಾನವ ಸ್ವಭಾವದಲ್ಲಿ ಅವಿಶ್ವಾಸ ತೋರುವುದು ನನ್ನಿಂದಾಗದು, ನಾವು ಸ್ನೇಹಪೂರ್ಣ ಮತ್ತು ಉದಾತ್ತರೀತಿಯಿಂದ ವರ್ತಿಸಿದರೆ ಇತರರೂ ಆ ರೀತಿಯಾಗಿಯೇ ವರ್ತಿಸುವರೆಂಬಲ್ಲಿ ಸಂಶಯವಿಲ್ಲ.

**ಕೃಪೆ : ವಿಶ್ವಮಾನ್ಯ ಗಾಂಧೀಜಿ –ಸಿ.ಎನ್.ಕೃಷ್ಣಮೂರ್ತಿ**


ಕರ್ನಾಟಕ
ವಿದ್ಯುತ್
ಕ್ಷೇತ್ರದಲ್ಲೇ
ಅನೇಕ
ಪ್ರಥಮಗಳು
ಕವಿಪ್ರನಿನಿಯ ಸಾಧನೆಗಳು
• ಸ್ಥಾಪಿತ ಉತ್ಪಾದನಾ ಸಾಮರ್ಥ್ಯ – 28217 ಮೆಗಾ ವ್ಯಾಟ್‌ಗಳು
• ಕವಿಪ್ರನಿನಿಯು ಗರಿಷ್ಠ ಬೇಡಿಕೆಯಾದ 12881 ಮೆಗಾ ವ್ಯಾಟ್ ವಿದ್ಯುತ್ತನ್ನು ಸಮರ್ಥವಾಗಿ ಪೂರೈಸಿದೆ.
• ಕವಿಪ್ರನಿನಿಯು 66ಕೆ.ವಿ. ಹಾಗೂ ಹೆಚ್ಚು ವೋಲ್ಟೇಜಿನ ಒಟ್ಟು 1549 ವಿದ್ಯುತ್ ಉಪ–ಕೇಂದ್ರಗಳನ್ನು ನಿರ್ವಹಿಸುತ್ತಿದೆ.
• ದೇಶದಲ್ಲೇ ಪ್ರಪ್ರಥಮವಾಗಿ ರಾಜ್ಯಾದ್ಯಂತ ಸಂಪೂರ್ಣ ಸ್ಕಾಡಾ ವ್ಯವಸ್ಥೆಯನ್ನುಪೂರ್ಣಗೊಳಿಸಲಾಗಿದೆ.
• ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟು 167 ಉಪ–ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
• ಪ್ರಸರಣ ಜಾಲದ ಬಲವರ್ಧನೆಗಾಗಿ ಕಳೆದ ಐದು ವರ್ಷಗಳಲ್ಲಿ ರೂ. 6700 ಕೋಟಿ ಹೂಡಿಕೆ
• 200.31 ಮಿ.ಯೂ. ನಿತ್ಯ ಬಳಕೆಯಾಗಿರುತ್ತದೆ.
• ಪ್ರಸರಣ ನಷ್ಟ 2017–18 : 3.22%
ಕವಿಪ್ರನಿನಿಯ ಧ್ಯೇಯೋದ್ದೇಶಗಳು
• ಪ್ರಸರಣ ಮತ್ತು ವಿತರಣೆಯಲ್ಲಿ ಅತ್ಯುತ್ತಮ ವಿಧಾನಗಳನ್ನು ಪ್ರೋತ್ಸಾಹಿಸುವುದು.
• ಅದರ ಎಲ್ಲಾ ತಾಂತ್ರಿಕ ಸೌಲಭ್ಯಗಳ ಅತ್ಯುತ್ತಮ ಗುಣಮಟ್ಟ ನಿರ್ವಹಣೆಯನ್ನು ದೃಢೀಕರಿಸುವುದು.
• ಗ್ರಾಹಕರ ಸೇವೆಯಲ್ಲಿ ಅತ್ಯುತ್ತಮ ಗುಣಮಟ್ಟಕ್ಕೆ ಆದ್ಯತೆ ನೀಡುವುದು.
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ಕಾವೇರಿ ಭವನ, ಮೊದಲನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು–560 009.
ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521
website : www.kptcl.com




# 75ರ ಸಂಭ್ರಮದಲ್ಲಿ ಗಾಂಧಿ ಸಾಹಿತ್ಯ ಸಂಘ

– ಈಶ್ವರ ಜಾಲಹಳ್ಳಿ

**ಗಾಂಧಿ ತತ್ವ ಪ್ರಚಾರ, ಸಾಹಿತ್ಯ ಪ್ರಕಟಣೆ, ಸಂಗೀತ, ಶಿಕ್ಷಣ, ಆರೋಗ್ಯ ಹೀಗೆ ಅನೇಕ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಗಾಂಧಿ ಸಾಹಿತ್ಯ ಸಂಘವು 75 ವಸಂತಗಳನ್ನು ಪೂರೈಸಿದೆ.**

**ಬೆಂ**ಗಳೂರಿನ ಹಳೆಯ ಸಂಘಗಳಲ್ಲಿ ಗಾಂಧಿ ಸಾಹಿತ್ಯ ಸಂಘವೂ ಒಂದು. ಮಲ್ಲೇಶ್ವರಂನ 8ನೇ ಅಡ್ಡರಸ್ತೆಯಲ್ಲಿರುವ ಗಾಂಧಿ ಸಾಹಿತ್ಯ ಸಂಗಕ್ಕೆ ಇದೀಗ 75ನೇ ವಸಂತಗಳ ಸಂಭ್ರಮ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧಿವಾದಿ ಸಿದ್ದವನಹಳ್ಳಿ ಕೃಷ್ಣಶರ್ಮರು ಈ ಸಂಘಕ್ಕೆ ಚಾಲನೆ ನೀಡಿದರು. ಇವರ ಕಾರ್ಯಕ್ಕೆ ಜಿ.ಪಿ.ರಾಜರತ್ನಂ, ಎಂ.ಎ ಕೃಷ್ಣಸ್ವಾಮಿ ಸೇರಿದಂತೆ ಅನೇಕ ಗಾಂಧಿವಾದಿಗಳು ಸಹಕರಿಸಿದರು.

ಆಂಗ್ಲರ ಆಡಳಿತವಿದ್ದ ಅಂದಿನ ಕಾಲದಲ್ಲಿ ಜನರು ಒಂದೆಡೆ ಸೇರಿ ಸಭೆ, ಸಮಾರಂಭ ಮಾಡುವಂತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಗಾಂಧೀಜಿ ಆದರ್ಶಗಳನ್ನು ಜಾರಿಗೆ ತರಲು ಹವಣಿಸುತ್ತಿದ್ದ ಗಾಂಧಿವಾದಿಗಳ ಗುಂಪೊಂದು 'ಗಾಂಧಿ ಸಾಹಿತ್ಯ ಸಂಘ' ಆರಂಭಿಸಲು ನಿರ್ಧರಿಸಿತು.

ಗಾಂಧಿವಾದಿಗಳ ಮನೆಯಲ್ಲಿ 25 ಗ್ರಂಥಗಳ ಸಂಗ್ರಹದೊಂದಿಗೆ 1948ರಲ್ಲಿ ಪ್ರಾರಂಭಗೊಂಡ ಸಂಘ ನಂತರ ಮಲ್ಲೇಶ್ವರಂ 8ನೇ ಅಡ್ಡರಸ್ತೆ ಕಟ್ಟಡದಲ್ಲಿ ತನ್ನ ಕಾರ್ಯ ಚಟುವಟಿಕೆ ಆರಂಭಿಸಿದ್ದು, ಪ್ರಸ್ತುತ 13,000 ಗ್ರಂಥಗಳ ಸಂಗ್ರಹ ಸಂಘದಲ್ಲಿದೆ.

ಯುವಕರಿಗೆ ಮಾರ್ಗದರ್ಶನ, ಗಾಂಧಿ ತತ್ವ, ವಿಚಾರಗಳ ಪ್ರಚಾರ, ರಾಷ್ಟ್ರೀಯತೆಯ ಪ್ರೇರಣೆ, ಸಾಹಿತ್ಯ ಸಂಸ್ಕೃತಿ ಶಿಕ್ಷಣ, ಆರೋಗ್ಯ ಚಿಂತನೆಗಳಿಗೆ ಪ್ರೋತ್ಸಾಹ ನೀಡುತ್ತಲೇ ಸಂಘ 75ರ ಹೊಸ್ತಿಲು ತಲುಪಿದೆ.

ಗಾಂಧಿವಾದಿಗಳ ಕುಟುಂಬವೇ ಆದ ಸಂಘದ ವೈಶಿಷ್ಟ್ಯವೆಂದರೆ ಸಂಘದ ಆರಂಭದಿಂದ ಪ್ರತಿ ವರ್ಷ ಗಾಂಧಿ ಜಯಂತಿ ಆಚರಣೆ ನಡೆದು ಗಾಂಧೀಜಿಗೆ ಪ್ರಿಯವಾಗಿದ್ದ ಕಡಲೆಕಾಯಿ ವಿತರಣೆ ನಡೆಯುತ್ತದೆ. ಅದು ಇಂದಿಗೂ ಚಾಲ್ತಿಯಲ್ಲಿದ್ದು, ರಾಜ್ಯದ ಇನ್ನೂರಕ್ಕೂ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಿದ್ದು ಸಂಘದ ಮತ್ತೊಂದು ಹೆಗ್ಗಳಿಕೆಯಾಗಿದೆ.

**ಸಂಘದ ಚಟುವಟಿಕೆಗಳು :** ಪುಸ್ತಕ ಪ್ರಕಟಣೆ, ಗಮಕ ಶಿಕ್ಷಣ, ಆರೋಗ್ಯ ವಿಷಯಗಳ ಉಪನ್ಯಾಸ ಕಾರ್ಯಕ್ರಮಗಳನ್ನು ಸಂಘ ಆಯೋಜಿಸುತ್ತದೆ. ರಾಜಾಜಿ, ಪಿ.ಕೋದಂಡರಾವ್, ಜೆ.ಪಿ., ಡಿ.ವಿ.ಜಿ., ದ.ರಾ.ಬೇಂದ್ರೆ, ವಿ.ಸೀ, ಜಿ.ಪಿ.ರಾಜರತ್ನಂ ಮೊದಲಾದ ದಿಗ್ಗಜರು ಸಂಘದ ವೇದಿಕೆಯಲ್ಲಿ ಉಪನ್ಯಾಸ ನೀಡಿದ್ದಾರೆ. ಇಂದಿಗೂ ವಿದ್ವಾಂಸರಿಂದ ಪ್ರತಿ ತಿಂಗಳು ಉಪನ್ಯಾಸ ಗಮಕ ಕಾರ್ಯಕ್ರಮಗಳನ್ನು ಸಂಘ ನಡೆಸಿಕೊಂಡು ಬರುತ್ತಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಧಿ ಚಿಂತನೆ ಕುರಿತ ಸ್ಪರ್ಧೆಗಳನ್ನು ನಡೆಸುತ್ತಿದೆ. ಪ್ರಕೃತಿ ಚಿಕಿತ್ಸಾ ಕೇಂದ್ರ ಗಾಂಧಿ ಸಾಹಿತ್ಯ ಸಂಘದ 2ನೇ ಮಹಡಿಯಲ್ಲಿ ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು 1969ರಲ್ಲಿ ತೆರೆಯಲಾಗಿದ್ದು, ಆರು ದಶಕಗಳಿಂದ ಪ್ರಕೃತಿ ಚಿಕಿತ್ಸೆ ಮತ್ತು ಯೋಗ, ಧ್ಯಾನ, ಶಿಕ್ಷಣ ನೀಡುವ ಕಾರ್ಯ ಮಾಡುತ್ತಿದೆ. ಕೇಂದ್ರದಲ್ಲಿ ಯೋಗಾಸನ ತರಗತಿಗಳು, ಆರೋಗ್ಯ ಸಮಸ್ಯೆಗಳಿಗೆ ನುರಿತ ವೈದ್ಯರಿಂದ ಸಲಹೆ ಚಿಕಿತ್ಸೆ ಔಷಧೋಪಚಾರಗಳನ್ನು ಕಡಿಮೆ ವೆಚ್ಚದಲ್ಲಿ ನೀಡಲಾಗುತ್ತದೆ.

ಸಂಘದ ಆವರಣದಲ್ಲಿ ಕಳೆದ 60 ವರ್ಷಗಳಿಂದ ಬೆಂಗಳೂರು ಎಜುಕೇಷನ್ ಸೊಸೈಟಿ ಶಾಲೆಯೊಂದನ್ನು ನಡೆಸುತ್ತಿದೆ. ಸಾವಿರಾರು ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ. ಈ ಶಾಲೆಯ ಸ್ಥಾಪನೆಗೆ ಕೃಷ್ಣಶರ್ಮರು ಸಕ್ರಿಯ ಪಾತ್ರ ವಹಿಸಿದ್ದರು. ಅಲ್ಲದೆ ಡಾ.ಹೊ.ಶ್ರೀನಿವಾಸಯ್ಯರವರ ಮಾರ್ಗ–ದರ್ಶನದಲ್ಲಿ ಶಾಲೆಯಲ್ಲಿ ಗಾಂಧಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಗಾಂಧಿ ವಿಚಾರ ತಿಳಿಸುವ ಕಾರ್ಯ ಮಾಡುತ್ತಿದೆ. ಸಂಘದ ದತ್ತಿ ನಿಧಿಯಿಂದ ಶಾಲೆಗಳಿಗೆ ಗಾಂಧಿ ಸಾಹಿತ್ಯ ವಿತರಿಸುವ ಕಾರ್ಯ ಮಾಡುತ್ತಾ ಬಂದಿದ್ದು ಇದೀಗ ಅಮೃತ ಮಹೋತ್ಸವದ ಸಂಭ್ರಮದಲ್ಲಿದೆ.

**ಗಾಂಧಿ ಸಂದೇಶ**

"ನಿಶ್ಚಲವಾದ ಮನಸ್ಸುಳ್ಳ ಒಂದು ಸಣ್ಣ ಗುಂಪು ಅಚಲವಾದ ನಂಬಿಕೆಗಳೊಂದಿಗೆ ನಿರ್ದಿಷ್ಟ ಗುರಿ ತಲುಪಲು ಪ್ರೇರಣೆಗೊಂಡರೆ ಒಂದು ಇತಿಹಾಸ ನಿರ್ಮಿತಿಯನ್ನೇ ಬದಲಾಯಿಸಬಹುದು."

– ಮಹಾತ್ಮ ಗಾಂಧಿ

# ನೀಲನಭದ ಅರುಂಧತಿ

**ಜಗತ್ಪ್ರಸಿದ್ಧ ಮಹಾಪುರುಷನ ಪತ್ನಿ, ನಾಲ್ಕು ಗಂಡುಮಕ್ಕಳ ತಾಯಿ, ಅಂತರ್ ಧರ್ಮೀಯ ಸೊಸೆಯಂದಿರ ಅತ್ತೆ, 13 ಮೊಮ್ಮಕ್ಕಳ ಅಜ್ಜಿಯಾಗಿ ಬಾ ನಡೆದ ಹಾದಿಯ ಪ್ರತಿಕ್ಷಣವೂ ಅಗ್ನಿ ಪರೀಕ್ಷೆಯೇ. ಅವರ ಸಹನೆ, ವಿಶಾಲ ಮನಸ್ಸು ಹಾಗೂ ಅಪರಿಮಿತ ತ್ಯಾಗ ಅಚ್ಚರಿ ಮೂಡಿಸುತ್ತದೆ. ಅವರಿಲ್ಲದ ಗಾಂಧೀಜಿ ಹೋರಾಟದ ಕಲ್ಪನೆಯೇ ಅಸಾಧ್ಯ.**

– ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ



ದಕ್ಷಿಣ ಆಫ್ರಿಕಾದಲ್ಲಿ ಆಡಳಿತ ನಡೆಸುತ್ತಿದ್ದ ಬ್ರಿಟಿಷ್ ಸರಕಾರ 1913ರಲ್ಲಿ ಮಹಿಳೆಯರ ಗೌರವಕ್ಕೆ ಧಕ್ಕೆಯಾಗುವಂತಹ ವಿಚಿತ್ರ ಶಾಸನ ಜಾರಿಮಾಡಿತು. ಸಾಂಪ್ರದಾಯಿಕ ಮದುವೆಗಳಿಗೆ ಮಾನ್ಯತೆ ಇಲ್ಲ, ನೋಂದಣಿಯಾದ ಮದುವೆಗಳಷ್ಟೇ ಕಾನೂನುಬದ್ಧವೆಂದು ಶಾಸನದಲ್ಲಿ ಪ್ರಕಟಿಸಲಾಯಿತು. ಆಫ್ರಿಕಾದಲ್ಲಾಗ ನೆಲೆಸಿದ್ದ ಭಾರತೀಯ ವಿವಾಹಿತ ಮಹಿಳೆಯರು ಈ ಕಾನೂನುನನ್ವಯ ಅಧಿಕೃತ ಪತ್ನಿ ಎನಿಸಿಕೊಳ್ಳದೆ ಉಪಪತ್ನಿಯೆಂಬಂತೆ ಅರ್ಥೈಸಲಾಯಿತು. ಆಗ ಆಫ್ರಿಕಾದಲ್ಲಿ ಗಾಂಧೀಜಿಯವರೊಂದಿಗಿದ್ದ ಅವರ ಪತ್ನಿ ಕಸ್ತೂರಿ ಬಾರವರ ಮನಸನ್ನು ಈ ಕಾನೂನು ಕೆರಳಿಸಿತು. ಸ್ವಯಂ ಪ್ರೇರಣೆಯಿಂದ 14 ಭಾರತೀಯ ಮಹಿಳೆಯರನ್ನು ಸಂಘಟಿಸಿ ಬಹಿರಂಗವಾಗಿ ಪ್ರತಿಭಟಿಸಿ ಸತ್ಯಾಗ್ರಹ ಮಾಡಿದರು. ಅಲ್ಲಿಯ ಸರಕಾರ ಬಾ ಅವರಿಗೆ 3 ತಿಂಗಳ ಜೈಲು ವಾಸ ನೀಡಿದರು.

ಪತ್ನಿಯ ಹೋರಾಟಕ್ಕೆ ಗಾಂಧೀಜಿ–ಯವರು ಅರ್ಧಮನಸ್ಸಿನಿಂದ ಒಪ್ಪಿದ್ದರು. ಜೈಲಿನ ಕಷ್ಟಗಳನ್ನಾಕೆ ಸಹಿಸಿಕೊಳ್ಳಲಾಗದೆಂಬ ಅನುಮಾನವನ್ನು ಬಾ ಅವರಿಗೂ ಹೇಳಿದ್ದರು. ಜೈಲಿನಲ್ಲಿ ಅಪೌಷ್ಠಿಕ ಆಹಾರ. ದುರ್ಗಂಧದಿಂದ ಆರೋಗ್ಯ ಕ್ಷೀಣಿಸಿತು. ಕೆಲ ದಿನಗಳ ನಂತರ ಸರಕಾರಕ್ಕೆ ತಪ್ಪಿನ ಅರಿವಾಗಿ ಕಾನೂನು ರದ್ದು ಪಡಿಸಿತು. ಬಾ ಅವರ ಬಿಡುಗಡೆಯಾಯಿತು.

ಮಹಿಳೆಯರನ್ನು ಅಪಮಾನಿಸಿದ ಕಾನೂನಿನ ವಿರುದ್ಧ ವಿದೇಶಿ ನೆಲದಲ್ಲಿ ಹೋರಾಡಿ ಶಿಕ್ಷೆ ಅನುಭವಿಸಿದ ಜಗತ್ತಿನ ಮೊದಲ ಮಹಿಳೆ ಕಸ್ತೂರಬಾ ಆಗಿರಬಹುದು. ಅವರು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ 5 ಬಾರಿ ಜೈಲಿಗೆ ಹೋಗಿದ್ದಾರೆ. ಕೊನೆಯುಸಿರೆಳೆದ ಆಗಾಖಾನ ಜೈಲು ಕಾಂಪೌಂಡ್ ಒಳಗೇ ಅಂತ್ಯಕ್ರಿಯೆ ನಡೆಯಿತು.

ಗಾಂಧಿಯವರಂತೆ ಬಾ –ಅವರಿಗೂ ಇದು 150ನೇ ಜನ್ಮವರ್ಷ. 1.4.1869ರಂದು ಹುಟ್ಟಿದ ಬಾ ಗಾಂಧೀಜಿಯವರಿಗಿಂತ 6 ತಿಂಗಳು ದೊಡ್ಡವರು. ಹುಟ್ಟಿದ್ದು ಪೋರಬಂದರಿನಲ್ಲಿ. ತಂದೆ ಗೋಪಾಲದಾಸ, ತಾಯಿ ಬ್ರಜಕುಂವರ. ಆರು ವರ್ಷದವರಿದ್ದಾಗಲೆ ಕರಮಚಂದ ಗಾಂಧಿಯವರ ಕೊನೆಯ ಪುತ್ರ ಮೋಹನನೊಂದಿಗೆ ಮದುವೆ ನಿಶ್ಚಯಿಸಲಾಯಿತು. ಮೂರು ವರ್ಷದ ನಂತರ ಮೋಹನ ಮ್ಯಾಟ್ರಿಕ ಪರೀಕ್ಷೆ ಪಾಸಾದರು.



**ಅಜ್ಜಿಯ ನೆನಪು**

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ನಾಯಕರಾಗಿದ್ದ ಗಾಂಧೀಜಿ–ಯವರ ಆರೈಕೆ, ಊಟೋಪಚಾರ, ಸಮಯಪಾಲನೆ ಮುಂತಾದ ಕೆಲಸ ಕಾರ್ಯಗಳನ್ನು ಬಾ ಸ್ವತಃ ಮಾಡುತ್ತಿದ್ದರು. ಉಪವಾಸ ಸತ್ಯಾಗ್ರಹ, ಪ್ರವಾಸ, ಲೇಖನ ಬರಹ, ಹೋರಾಟ, ಜೊತೆಗೆ ಬ್ಲಡ್ ಪ್ರಷರ್ ಮಧ್ಯೆಯೂ ತಾತ ಕ್ರಿಯಾಶೀಲರಾಗಿ ಲವಲವಿಕೆಯಿಂದಿರುವುದಕ್ಕೆ ಅಜ್ಜಿಯ ಆರೈಕೆಯೇ ಕಾರಣವೆಂದು ಗಾಂಧೀಜಿ–ಯವರ ಮೊಮ್ಮಗಳು ಸುಮಿತ್ರಾ ಗಾಂಧಿ ಕುಲಕರ್ಣಿ ತಮ್ಮ 'ಮೇರೇ ಪಿತಾಮಹ' ಕೃತಿಯಲ್ಲಿ ದಾಖಲಿಸಿದ್ದಾರೆ.

ಗಾಂಧೀಜಿಯವರ ಮಕ್ಕಳೆಲ್ಲರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದು, ಜೈಲು ಶಿಕ್ಷೆ ಅನುಭವಿಸಿದ್ದಾರೆ. ಆಗೆಲ್ಲಾ ಸೊಸೆಯಂದಿರು ಮೊಮ್ಮಕ್ಕಳು ಕಸ್ತೂರ್ ಬಾರಲ್ಲಿ ಆಶ್ರಯ ಪಡೆಯುತ್ತಿದ್ದರು. ಎಲ್ಲರಿಗೂ ಅವರ ಬಗ್ಗೆ ಅಪಾರ ಪ್ರೀತಿ–ಗೌರವವಿತ್ತು. ಹಿರಿಯ ಪುತ್ರ ಹರಿಲಾಲ್‌ಗೆ ತಂದೆಯ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ತಾಯಿಯೆಂದರೆ ಪೂಜ್ಯ ಭಾವನೆಯಿತ್ತು. ಎಲ್ಲರೂ ಗಾಂಧೀಜಿಕಿ ಜೈ ಎಂದರೆ ಹರಿಲಾಲ್ ತಾಯಿಗೆ ಜೈ ಎನ್ನುತ್ತಿದ್ದರು.

**ಹಾಸ್ಯಪ್ರಜ್ಞೆ**

ಗಾಂಧೀಜಿ–ಬಾರವರಿಗಿದ್ದ ಹಾಸ್ಯಪ್ರಜ್ಞೆಯೇ ಅವರ ಒತ್ತಡದ ಬದುಕನ್ನು ಗಟ್ಟಿ–ಯಾಗಿಸಿದ ದಿವ್ಯೌಷಧಿ. 'ನನ್ನ ಚಿತ್ತವೃತ್ತಿಯಲ್ಲಿ ಹಾಸ್ಯವಿಲ್ಲದಿದ್ದರೆ ಎಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ' ಎಂದು ಗಾಂಧೀಜಿ ಆಗಾಗ ಹೇಳುತ್ತಿದ್ದರು. ಬದುಕಿನ ದೀರ್ಘ ಪಯಣದಲ್ಲಿ ಬಾಪೂಜಿ ಬಾ ಅವರಿಗೆ 187 ಪತ್ರಗಳನ್ನು ಬರೆದಿದ್ದಾರೆ. ಇವೆನ್ನೆಲ್ಲಾ ಪುತ್ರ ಮಣಿಲಾಲ್ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಪತ್ರಗಳಲ್ಲಿರುವ ಪ್ರೀತಿ, ವಿಶ್ವಾಸ ಚಿಂತನೆ, ಅನುರಾಗ, ಕರ್ತವ್ಯಪರತೆ, ಸಲಹೆಗಳು ಅಮೂಲ್ಯವಾದವು. ಇಬ್ಬರ ನಡುವಣ ಸಮರ್ಪಣಾ ಭಾವಕ್ಕೆ ಪತ್ರಗಳಲ್ಲಿಯ ಮಾತುಗಳು ಸಾಕ್ಷಿಯಾಗಿವೆ.

**ಬ್ರಹ್ಮಚರ್ಯದ ಕಠಿಣವ್ರತ**

**ಗಾಂಧೀಜಿ ಸಾರ್ವಜನಿಕ ಸೇವೆಯಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿದ ಮೇಲೆ ಬ್ರಹ್ಮಚರ್ಯ ಪಾಲನೆಯ ನಿರ್ಣಯ ಕೈಗೊಂಡು ಪತ್ನಿಗೂ ಹೇಳಿದರು. ಗಾಂಧೀಜಿ ಕಠಿಣವೆಂದು ಭಾವಿಸಿದ್ದನ್ನು ಬಾ ಸರಳವಾಗಿ ಸ್ವೀಕರಿಸಿಬಿಟ್ಟರು. ಈ ಸಾಧನಾ ಮಾರ್ಗದಲ್ಲಿ ಪತ್ನಿಯೆಂದೂ ಮುಜುಗರ ಮಾಡಲಿಲ್ಲವೆಂದು ಬಾಪೂಜಿ ತಮ್ಮ ಆತ್ಮಕಥೆಯಲ್ಲಿ ಬರೆದುಕೊಂಡಿದ್ದಾರೆ.**

**ಸ್ವಸ್ಥ ಚಿತ್ತದಿಂದ ಎಲ್ಲವನ್ನೂ ಸಹಜಗತಿಯಲ್ಲಿ ನಡೆಯಲು ಬಿಟ್ಟು ಯಾವಾಗಲೂ ಶಾಂತಚಿತ್ತರಾಗಿ ದೃಢವಾಗಿ ಇರುತ್ತಿದ್ದರು. ಆದ್ದರಿಂದಲೇ ಅವರನ್ನು ಎಲ್ಲರೂ 'ನೀಲನಭದ ಅರುಂಧತಿ' ಎಂದು ಗೌರವಿಸುತ್ತಿದ್ದರು.**

**ಬಾರ್ಡೋಲಿ ಸತ್ಯಾಗ್ರಹ**

ಸರ್ದಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ನಡೆದ ಬಾರ್ಡೋಲಿ ರೈತಚಳುವಳಿಯಲ್ಲಿ ಭಾಗವಹಿಸಿದ್ದ 10 ಸಾವಿರಕ್ಕೂ ಹೆಚ್ಚು ರೈತರ ಕುಟುಂಬದ ಮಹಿಳೆಯರಲ್ಲಿ ಆತ್ಮವಿಶ್ವಾಸ ತುಂಬುವ ಹೊಣೆಗಾರಿಕೆ ಬಾ ಅವರದಾಗಿತ್ತು. ಸುಡುಬಿಸಿಲಿನಲ್ಲಿ ಹಳ್ಳಿ–ಹಳ್ಳಿ ಅಲೆದು ಮಹಿಳೆಯರನ್ನು ಸಂಘಟಿಸಿ ಸತ್ಯಾಗ್ರಹದ ಯಶಸ್ಸಿಗೆ ಕಾರಣರಾದರೆಂದು ಸರ್ದಾರ ಪಟೇಲ ಕೃತಜ್ಞತೆಯಿಂದ ತಮ್ಮ ಲೇಖನದಲ್ಲಿ ಸ್ಮರಿಸಿದ್ದಾರೆ.

ತಾನು ತೀರಿಕೊಂಡಮೇಲೆ ಪಾರ್ಥಿವ ಶರೀರಕ್ಕೆ ಗಾಂಧೀಜಿ ನೂತ ನೂಲಿನಿಂದ ತಯಾರಿಸಿದ ಸೀರೆಯನ್ನೇ ಹೊದಿಸಬೇಕೆಂದು ಅಪೇಕ್ಷೆ ಅವರದಾಗಿತ್ತು. ಅನಾರೋಗ್ಯ–ದಿಂದಾಗಿ ಬಾ ಆಘಾಖಾನ ಜೈಲಿನಲ್ಲಿ ಫೆಬ್ರವರಿ 22, 1944ರಲ್ಲಿ ಕೊನೆಯುಸಿರೆಳೆದರು. ಗಾಂಧೀಜಿ ನೂತ ನೀಲಿನಿಂದ ತಯಾರಿಸಿದ ಸೀರೆಯನ್ನೇ ಹೊದಿಸಲಾಯಿತು. ಕೌತುಕದ ಸಂಗತಿಯೆಂದರೆ ಅವರ ನಿಧನದ ಒಂದು ವರ್ಷ ಮೊದಲು ಗಾಂಧೀಜಿ ಆಘಾಖಾನ ಜೈಲಿನಲ್ಲಿ 21 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದ್ದರು. ದೇಹ ಕ್ಷೀಣಿಸಿತ್ತು. ಗಾಂಧೀಜಿ ಸತ್ಯಾಗ್ರಹದಲ್ಲಿ ನಿಧನರಾಗಬಹುದೆಂದು ಭಾವಿಸಿ ಆಗಿನ ಬ್ರಿಟಿಷ್ ಸರಕಾರದ ಅಧಿಕಾರಿಗಳು ಗಾಂಧೀಜಿ ಅಂತ್ಯಕ್ರಿಯೆಗೆ ಗಂಧದ ಕಟ್ಟಿಗೆ ತರಿಸಿ ಜೈಲಿನಲ್ಲಿ ಸಂಗ್ರಹಿಸಿಟ್ಟಿದ್ದರು. ಇದೇ ಗಂಧದ ಕಟ್ಟಿಗೆಯನ್ನು ಬಾ ಅವರ ಅಂತ್ಯಕ್ರಿಯೆಗೆ ಬಳಸಲಾಯಿತು.

ಬಾ ಬದುಕಿನುದ್ದಕ್ಕೂ ಆಸ್ತಿ–ಒಡವೆಗಳನ್ನು ಕೇಳಲಿಲ್ಲ.ಅತ್ಯಂತ ಸರಳ ಶುಭ್ರ ಬದುಕು ಬಾಳಿದರು. ಮಕ್ಕಳು, ಮೊಮ್ಮಕ್ಕಳಿಗೆ ರಾಷ್ಟ್ರಭಕ್ತಿಯ ಪಾಠ ಹೇಳಿದರು. ಗಾಂಧೀಜಿ ರಾಷ್ಟ್ರಪಿತ–ರಾಗಿರುವಂತೆ ಬಾ ಅವರು ರಾಷ್ಟ್ರಮಾತೆಯೇ ಆಗಿದ್ದರು.

**ಕೃಪೆ : ಸಂಯುಕ್ತ ಕರ್ನಾಟಕ**




ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಬೆಂಗಳೂರು ಮಹಾನಗರದ ಜನತೆಗೆ ಶುದ್ಧ ಕುಡಿಯುವ ನೀರು ಪೂರೈಸುವುದು ಜಲಮಂಡಳಿಯ ಧ್ಯೇಯವಾಗಿದೆ. ನಗರ ಬೆಳೆದಂತೆ ಎಲ್ಲಾ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವಲ್ಲಿ ಹಂತ ಹಂತವಾಗಿ ನೂತನ ಯೋಜನೆಗಳನ್ನು ರೂಪಿಸುವ ಮೂಲಕ ನಿಭಾಯಿಸಲಾಗುತ್ತಿದೆ.
ನೀರೇ ಬದುಕು–ನೀರೇ ಉಸಿರು. ನೀರು ಪ್ರಕೃತಿಯ ಅಮೂಲ್ಯ ಕೊಡುಗೆ. ಅದನ್ನು ವ್ಯರ್ಥ ಮಾಡದೆ ಮಿತವಾಗಿ ಹಾಗೂ ಸರಿಯಾಗಿ ಬಳಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಬನ್ನಿ, ನೀರನ್ನು ಮಿತವಾಗಿ ಬಳಸಿ ನಾಳೆಗಾಗಿ ಉಳಿಸೋಣ.
ನಮ್ಮ ಮನೆ
ನಮ್ಮ ನೀರು
ನಮ್ಮ ಭವಿಷ್ಯ
ಎಲ್ಲವೂ ನಮ್ಮ
ಕೈಯಲ್ಲಿದೆ
ವಾಷಿಂಗ್ ಮೆಷಿನ್ ಫುಲ್ ಲೋಡ್‌ನಲ್ಲಿ ಮಾತ್ರ ಬಳಸಿ.
ಸ್ನಾನ ಮಾಡುವಾಗ ಶವರನ್ನು ಮಿತವಾಗಿ ಉಪಯೋಗಿಸಿ. ಸೋಪ್ ಬಳಸುವ ವೇಳೆ ಶವರನ್ನು ನಿಲ್ಲಿಸಿ.
ಹಣ್ಣು /ತರಕಾರಿಗಳನ್ನು ನಲ್ಲಿಯಲ್ಲಿ ತೊಳೆಯುವ ಬದಲು ತುಂಬಿಟ್ಟ ನೀರಿನ ಪಾತ್ರೆಯಲ್ಲಿ ತೊಳೆಯಿರಿ.
ಗಿಡಗಳಿಗೆ ನೀರುಣಿಸಲು ಪೈಪಿಗೆ ಪ್ರತಿಯಾಗಿ ಕ್ಯಾನ್ ಬಳಸಿ.
ಕಾರು ತೊಳೆಯಲು ಪೈಪ್ ಬಳಸುವ ಬದಲು ಬಕೆಟ್ ನೀರಿನಲ್ಲಿ ತೊಳೆಯಿರಿ.
ಸೋರುವ ನಲ್ಲಿ/ಕೊಳವೆಗಳನ್ನು ತಕ್ಷಣವೇ ಬದಲಿಸಿ. ನೀರು ವ್ಯರ್ಥವಾಗುವುದನ್ನು ತಪ್ಪಿಸಿ.
ವಾಷಿಂಗ್ ಮೆಷಿನ್‌ಗೆ ಬಳಸಿದ ನೀರನ್ನು ನೆಲ ತೊಳೆಯಲು ಬಳಸಿ.
ನೀರನ್ನು ಉಳಿಸಿ
ಬೆಂಗಳೂರು ಉಳಿಸಿ...
ಇಂದಿನಿಂದಲೇ
ನಿಮ್ಮ ಶೌಚಾಲಯಕ್ಕೆ ಡ್ಯುಯಲ್ ಫ್ಲಶ್ ವ್ಯವಸ್ಥೆ ಅಳವಡಿಸಿ. ಅರ್ಧ ಫ್ಲಶ್ ಮಾಡಿ.

# ಗಾಂಧೀತತ್ವ ಪಾಲನೆಯೇ ಪರಿಹಾರ

– ಜಿ.ಮಾದೇಗೌಡ



ಗಾಂಧೀಜಿ ಹುಟ್ಟಿನಿಂದ ಮಹಾತ್ಮಾ ಆಗಿರಲಿಲ್ಲ. ಸಾಮಾನ್ಯರಿಗೆ ಇರುವಂಥ ಎಲ್ಲ ದುಶ್ಚಟಗಳು ಅವರಿಗೂ ಇದ್ದವು. ಕುಡಿಯುವುದು, ತಿನ್ನುವುದು, ಸಿಗರೇಟ್ ಸೇದುವುದು, ಸುಳ್ಳು ಹೇಳುವುದು ಮುಂತಾದ ದುಶ್ಚಟಗಳು ಗಾಂಧೀಜಿಗೂ ಇದ್ದವು. ಆದರೆ ಅದು ತಪ್ಪು ಎಂದು ತಿಳಿದ ಮೇಲೆ ಅವರು ತಮ್ಮ ನಡವಳಿಕೆಯನ್ನು ಬದಲಿಸಿಕೊಂಡು ದೇಶಕ್ಕಾಗಿ ಹೋರಾಡಿ, ಸಾಕಷ್ಟು ತ್ಯಾಗ ಮಾಡಿ ಮಹಾತ್ಮಾ ಆದರು.

ಗಾಂಧೀಜಿ ಕಾನೂನು ಕಲಿಯುವುದಕ್ಕಾಗಿ ಇಂಗ್ಲೆಂಡಿಗೆ ಹೋಗಿದ್ದಾಗ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಹಲವು ನಾಯಕರು ಹೋರಾಟ ನಡೆಸಿದ್ದರು. ದಾದಾಬಾಯಿ ನವರೋಜಿ, ಗೋಪಾಲ್ ಕೃಷ್ಣ ಗೋಖಲೆ, ಅಬ್ದುಲ್ ಕಲಾಂ ಆಝಾದ್, ಬಾಲಗಂಗಾಧರ್ ತಿಲಕ್, ಸುಭಾಷಚಂದ್ರ ಬೋಸ್, ಸರದಾರ್ ವಲ್ಲಭ್ ಭಾಯಿ ಪಟೇಲ್, ಮಹಮ್ಮದ ಆಲಿ ಜಿನ್ನಾ ಹಾಗೂ ಡಾ.ಬಾಬು ರಾಜೇಂದ್ರ ಪ್ರಸಾದ್ ಮುಂತಾದವರು ಬ್ರಿಟಿಷರ ವಿರುದ್ಧ ಹೋರಾಟ ಮಾಡುತ್ತಿದ್ದರು. ಆದರೆ ಈ ನಾಯಕರ ಮಾತಿಗೆ ಜನ ಅಷ್ಟಾಗಿ ಸ್ಪಂದಿಸಿರಲಿಲ್ಲ. ಯಾಕೆಂದರೆ ಬ್ರಿಟಿಷರ ಬಳಿ ಬಂದೂಕು, ಗುಂಡುಗಳು, ದೊಣ್ಣೆ ಮುಂತಾದ ಅಸ್ತ್ರಗಳು ಇದ್ದವು. ಇವುಗಳಿಂದ ಬ್ರಿಟಿಷರು ಹೊಡೆಯುತ್ತಾರೆ ಎಂದು ಜನ ಹೆದರಿ ಈ ನಾಯಕರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಂದಿಸುತ್ತಿರಲಿಲ್ಲ.

ಕಾನೂನು ಓದಲು ಇಂಗ್ಲೆಂಡಿಗೆ ಹೋಗಿದ್ದ ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಕೆಲವರ್ಷ ಇದ್ದು ಭಾರತಕ್ಕೆ 1914–15ರಲ್ಲಿ ವಾಪಸು ಬಂದ ಮೇಲೆ ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಹೋರಾಟ ಆರಂಭಿಸಿದರು. ಯಾರೂ ಕಂದಾಯ ಕೊಡಬಾರದು. ಬಸ್ಸು, ರೈಲುಗಳಲ್ಲಿ ಟಿಕೆಟ್ ತೆಗೆದುಕೊಳ್ಳಬಾರದು ಎಂಬ ಅಸಹಕಾರ ಚಳವಳಿ ಶುರು ಮಾಡಿದರು. ಆಗ ನಾನು ವಿದ್ಯಾರ್ಥಿಯಾಗಿದ್ದೆ. ನನಗೆ ಗಾಂಧಿಯೂ ಗೊತ್ತಿರಲಿಲ್ಲ, ಕಾಂಗ್ರೆಸ್ಸೂ ಗೊತ್ತಿರಲಿಲ್ಲ. ಆಗ ನಮ್ಮಲ್ಲಿ ಸಿದ್ಧರಾಮಯ್ಯ ಎಂಬ ಒಬ್ಬ ನಾಯಕರಿದ್ದರು. ರಾಜ್ಯದಲ್ಲಿ ಯಶೋಧಮ್ಮ, ದಾಸಪ್ಪ ಮುಂತಾದ ನಾಯಕರಿದ್ದರು. ಹುಡುಗರಾಗಿದ್ದ ನಾವು ವಿದ್ಯಾರ್ಥಿ ಕಾಂಗ್ರೆಸ್ ನಲ್ಲಿ ಸೇರಿಕೊಂಡು ಸಭೆ, ಸಮ್ಮೇಳನ ಮಾಡುತ್ತಿದ್ದೆವು. ಭಾರತಕ್ಕೆ ಜೈ ಕಾಂಗ್ರೆಸ್ ಗೆ ಜೈ ಎಂದು ಜೈಕಾರ ಹಾಕುತ್ತಿದ್ದೆವು. ವಿದ್ಯಾರ್ಥಿ ಕಾಂಗ್ರೆಸ್ ಬಹಳ ಗಟ್ಟಿಯಾಗಿತ್ತು. ವಿದ್ಯಾರ್ಥಿ ಕಾಂಗ್ರೆಸಿನಿಂದ ನಾವು ಧ್ವಜ ಸತ್ಯಾಗ್ರಹ ಮಾಡಿದೆವು. ಅದು ಈಗಲೂ ಶಿವಪುರ ಧ್ವಜ ಸತ್ಯಾಗ್ರಹ ಎಂದೇ ಹೆಸರುವಾಸಿ. ಆಗ ನಮ್ಮನ್ನು ಜೈಲಿಗೆ ಹಾಕಿದರು. ಕಾಂಗ್ರೆಸ್ ನಾಯಕರು ಸೇರಿ ಹುಡುಗರನ್ನು ಬಿಡಿ ಎಂದು ಬಿಡಿಸಿದರು.

ಗಾಂಧೀಜಿ ಅಹಿಂಸಾತ್ಮಕವಾಗಿ ಚಳವಳಿ ಮಾಡಿದ್ದರಿಂದಲೇ ಬ್ರಿಟಿಷರು ದೇಶ ಬಿಟ್ಟು ಹೋಗಬೇಕಾಯಿತು. ಹಾಗಾಗಿ ನಮಗೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಬಂತು. ಮೊದಲು ಜಮೀನುದಾರರಿಗೆ ಮಾತ್ರ ಮತದಾನದ ಹಕ್ಕು ಇತ್ತು. ಎಲ್ಲ ಜನಸಾಮಾನ್ಯರಿಗೂ ಮತದಾನದ ಹಕ್ಕು ಇರಲಿಲ್ಲ. ಗಾಂಧೀಜಿಯಿಂದ ಅದೂ ಸಿಕ್ಕಿತು. ಗಾಂಧೀಜಿಯಿಂದ ಪ್ರೇರಿತರಾದ ಡಾ.ಅಂಬೇಡ್ಕರ್ ಸಂವಿಧಾನ ರಚಿಸಿದ ಪರಿಣಾಮ ನಮಗೆ ಎಲ್ಲ ಹಕ್ಕುಗಳು ಸಿಕ್ಕಿವೆ. ಸಮಾಜದಲ್ಲಿ ಸ್ವಲ್ಪ ಸಮಾನತೆ ಕೂಡ ಬಂದಿದೆ. ಗಾಂಧೀಜಿ ರಾಮರಾಜ್ಯದ ಕನಸು ಕಂಡಿದ್ದರು. ಆದರೆ ಈಗಿರುವುದು ರಾವಣರಾಜ್ಯ ಎನ್ನುವಂತಾಗಿದೆ. ರಾಜ್ಯಾಂಗದಲ್ಲಿರುವ ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗ ಮೂರೂ ಅಂಗಗಳು ಕೆಟ್ಟಿವೆ. ಗಾಂಧೀಜಿ ಸ್ವಾವಲಂಬನೆಯನ್ನು ಬೋಧಿಸಿದರು. ಆಗ ಅವರ ಕೆಲಸಗಳನ್ನು ಅವರೇ ಮಾಡಿಕೊಳ್ಳುತ್ತಿದ್ದರು. ನೇಕಾರ, ಕುಂಬಾರ, ಕಮ್ಮಾರ ಮುಂತಾದ ಕಸುಬುದಾರರಿದ್ದರು. ದೇಶಕ್ಕೆ ಬೇಕಾಗಿದ್ದನ್ನು ನಾವೇ ತಯಾರಿಸಿಕೊಳ್ಳಬಹುದಿತ್ತು. ಈಗ ನಮ್ಮ ರೈತರು ತರಕಾರಿ ಖರೀದಿಗೆ ನಗರಕ್ಕೆ ಹೋಗುವಂತಾಗಿದೆ. ಇದಕ್ಕೆ ಕಾರಣ ಈಗಿನ ಸರಕಾರಗಳು. ಜನರಿಗೆ ದುಡಿಯಲು ಉದ್ಯೋಗ ಕೊಡುವುದನ್ನು ಬಿಟ್ಟು ಅಕ್ಕಿ, ಬೇಳೆ ಕುಳಿತು ತಿನ್ನಲು ಬೇಕಾದ ಎಲ್ಲವನ್ನೂ ಕೊಡುತ್ತಿವೆ. ಇದರಿಂದಾಗಿ ಜನ ಸೋಂಬೇರಿಯಾಗಲು ಅವಕಾಶವಾಗಿದೆ. ಈ ವ್ಯವಸ್ಥೆ ಹೋಗಬೇಕು. ಸರಕಾರಗಳು ಜನರಿಗೆ ದುಡಿದು ತಿನ್ನುವುದನ್ನು ಕಲಿಸಬೇಕು.

**ಇಂದು ನಾವೆಲ್ಲಾ ಗಾಂಧಿ ತತ್ವಗಳನ್ನು ಗಾಳಿಗೆ ತೂರಿದ್ದೇವೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಸುಳ್ಳು, ಮೋಸ, ವಂಚನೆ ನಡೀತಿವೆ. ವಿಧಾನಸಭೆ, ಸಂಸತ್ತು ಇವೆಲ್ಲಾ ನಾಮಕಾವಾಸ್ತೆ ಇವೆ. ಇದು ಪ್ರಜಾಪ್ರಭುತ್ವವೇ ಅಲ್ಲ. ಎಲ್ಲರಿಗೂ ಶಾಸಕರಾಗಬೇಕು, ಮಂತ್ರಿಗಳಾಗಬೇಕು ಅನ್ನೋ ಆಸೆ. ಇದನ್ನೆಲ್ಲಾ ನೋಡಿದರೆ ಯಾಕಪ್ಪಾ ದೇಶಕ್ಕೆ ಸ್ವಾತಂತ್ರ್ಯ ಬಂತು ಎಂದೆನಿಸುತ್ತದೆ.**

ಈಗಿರುವ ಕೆಟ್ಟ ವ್ಯವಸ್ಥೆಹೋಗಬೇಕಾದರೆ ಜನರೇ ಸರಿಯಾಗಬೇಕು. ಮೊದಲು ಜನರು ನೀತಿವಂತರಾಗಬೇಕು. ಚುನಾವಣೆಯಲ್ಲಿ ಮತದಾನದ ಹಕ್ಕು ಚಲಾಯಿಸುವ ಮತದಾರ ಸರಿಯಾದರೆ ಪರಿಸ್ಥಿತಿ ತಾನೇ ಸರಿಯಾಗಲಿದೆ. ನಾನು ಗಾಂಧೀಜಿಯನ್ನು ನೋಡಿಲ್ಲ. ಆದರೆ ಈಗಲೂ ಗಾಂಧೀತತ್ವ ಪಾಲನೆ ಮಾಡುತ್ತಿರುವೆ. ಜನರೂ ಗಾಂಧೀತತ್ವವನ್ನು ಅಳವಡಿಸಿಕೊಂಡರೆ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂಬುದು ನನ್ನ ನಂಬಿಕೆ.

**ಕೃಪೆ : ಸಮಾಜಮುಖಿ**



# ಗಾಂಧಿವಾದಿ ತಗಡೂರು ಬನುಮಯ್ಯ

– ವೇಮಗಲ್ ಸೋಮಶೇಖರ್

ಡಿಸೆಂಬರ್ 14, 1930ರ ಭಾನುವಾರದಂದು ಬೆಂಗಳೂರಿನ ಎಸ್.ಕೆ.ವೆಂಕಟರಂಗಯ್ಯಂಗಾರ್ (ಅಡ್ವಕೇಟ್) ಅವರು ಮತ್ತು ಡಬ್ಲ್ಯು.ಹೆಚ್.ಹನುಮಂತಪ್ಪನವರು, ಮೈಸೂರಿನ ಧರ್ಮಪ್ರಕಾಶ ಡಿ.ಬನುಮಯ್ಯನವರ ಕೂಡ ತಗಡೂರಿಗೆ ಭೇಟಿ ನೀಡಿದರು. ತಗಡೂರು ರಾಮಚಂದ್ರರಾಯರು 1930ರಲ್ಲಿ ಮಹಾಜನರ ಸಹಾಯದಿಂದ ಸ್ಥಾಪಿಸಿದ್ದ ಖಾದಿ ಕೇಂದ್ರವನ್ನು ಕಂಡ ಅವರು ಸಂತೋಷಪಟ್ಟರು. ಆಗ ರಾಮಚಂದ್ರರಾಯರು ತಮ್ಮ ಖಾದಿ ಸಂಸ್ಥೆಗೆ ಉದಾರ ಸಹಾಯ ಮಾಡಬೇಕೆಂದು ಸಾಹುಕಾರ್ ಡಿ.ಬನುಮಯ್ಯನವರಲ್ಲಿ ಪ್ರಾರ್ಥಿಸಿಕೊಂಡರು.

ಆಗ ಬನುಮಯ್ಯನವರು ಮಾತನಾಡುತ್ತಾ "ನಾನು ಬೆತ್ತಲೆ ಬಂದೆನಿಲ್ಲಿಗೆ. ಬೆತ್ತಲೆ ಹೋಗುವೆನಲ್ಲಿಗೆ. ಈ ಮಧ್ಯೆ ಗಳಿಸಿದ ಐಶ್ವರ್ಯ, ಮಹಡಿ ಮನೆಗಳು, ಮೋಟಾರುಗಳು, ಬಂಧು ಬಾಂಧವರು, ಪತಿಸುತರು ಯಾರೂ ನಮ್ಮ ಕೂಡ ಬರುವುದಿಲ್ಲ. ಇವೆಲ್ಲವೂ ಈ ದೇಶದಲ್ಲಿಯೇ ಸಂಪಾದಿಸಿದ್ದು. ಇವೆಲ್ಲವನ್ನು ಈ ದೇಶದ ಹಿತಕ್ಕಾಗಿಯೇ ಉಪಯೋಗಿಸಬೇಕಾದ್ದು. ನಮ್ಮ ದೇಶದ ಬಡಜನರ ಬಡಕೈಗಾರಿಕೆಯುನ್ನು ಪುನರುದ್ಧಾರ ಮಾಡುವುದು ನನ್ನ ಕರ್ತವ್ಯ" ಎನ್ನುತ್ತಾ ಐದುನೂರು ರೂಪಾಯಿಗಳನ್ನು ಖಾದಿ ಸಂಸ್ಥೆಗಾಗಿ ನೀಡಿದರು.

"ಈ ಹಣವನ್ನು ತಗಡೂರು ಖಾದಿ ಸಂಸ್ಥೆಯು ಮೂಲಧನವನ್ನಾಗಿಯೇ ಉಪಯೋಗಿಸಬೇಕು. ಇತರ ಯಾವ ವಿಧವಾದ ಬಾಬುಗಳಿಗೂ ಉಪಯೋಗಿಸಕೂಡದು. ಬಡವರು ಬದುಕಲಿ, ಅವರ ಕೈಗಾರಿಕೆಗಳು ಬೆಳೆಯಲಿ. ಅವರ ಹಸಿವು



ಇಂಗಲಿ. ದೇಶಕ್ಕೆ ಕಲ್ಯಾಣವಾಗಲಿ" ಎಂದರು. ನಂತರ ತಗಡೂರು ರಾಮಚಂದ್ರರಾಯರು "ಮೈಸೂರು ಸಂಸ್ಥಾನದ ಶ್ರೀಮಂತರುಗಳೇ, ಬೆಂಗಳೂರಿನ ಶ್ರೀಮಂತರುಗಳೇ, ರಾಷ್ಟ್ರ ಮುಖಂಡರುಗಳೇ ಧರ್ಮಪ್ರಕಾಶ ಡಿ.ಬನುಮಯ್ಯನವರ ಉದಾರತನವನ್ನು ಕೇಳಿರಿ. ಮುಂದೆ ಬನ್ನಿರಿ. ಖಾದಿ ಕಾರ್ಯಕ್ಕೆ ಬೆಂಬಲ ಕೊಡಿ ಬನುಮಯ್ಯನವರು ಮೈಸೂರು ಪ್ರಾಂತ್ಯದಲ್ಲಿ ಕೈರಾಟೆ, ಕೈಮಗ್ಗ ಪುನರುದ್ಧಾರ ಮಾಡಲು ಹಾಗೂ ಪ್ರಚಾರಕ್ಕಾಗಿ 1926ರಲ್ಲೇ ನಾಲ್ಕು ನೂರು ರೂಪಾಯಿಗಳನ್ನು ಕೊಟ್ಟರು.

ಈ ಪುಣ್ಯಾತ್ಮರ ಆ ಉದಾರ ಸಹಾಯದಿಂದಲೇ ನಮ್ಮ ಪ್ರಾಂತ್ಯದಲ್ಲಿ ಈ ಕೈಗಾರಿಕೆಯನ್ನು ನಾನು ಬಲಪಡಿಸಿದೆ. ಈಚೆಗೆ ಮೈಸೂರಿನಲ್ಲಿ ಬನುಮಯ್ಯನವರು ಐದು ನೂರು ರೂಪಾಯಿಗಳಿಗೆ ಖಾದಿ ಟೋಪಿಗಳನ್ನು ಹೊಲಿಸಿ ಯುವಕರಿಗೆ ದಾನ ಮಾಡಿರುವರು. ಮಹಾತ್ಮ ಗಾಂಧಿಯವರು 1927ರ ಜುಲೈನಲ್ಲಿ ಮೈಸೂರಿಗೆ ದಯಮಾಡಿಸಿದ್ದಾಗ ಎರಡು ಸಾವಿರ ರೂಪಾಯಿಗಳನ್ನು ಈ ಕೈಗಾರಿಕೆಯ ಅಭಿವೃದ್ಧಿಗಾಗಿ ಕೊಟ್ಟರು. ಮೈಸೂರಿನಲ್ಲಿ ತಮ್ಮ ಸ್ಕೂಲಿನ ಕಾಂಪೌಂಡಿನ ಉತ್ತರ ದಿಕ್ಕಿನಲ್ಲಿ ಒಂದು ಕಟ್ಟಡವನ್ನು ಕಟ್ಟಿಸಿ ಅಲ್ಲಿ 'ಖಾದಿ ಸಂಘ' ವನ್ನು ಸ್ಥಾಪಿಸಿ ರಾಟೆ ಪ್ರಚಾರ ಕಾರ್ಯವನ್ನು ಮಾಡುತ್ತಿರುವರು" ಎಂದು ತಿಳಿಸಿದರು.

ಡಿ.ಬನುಮಯ್ಯನವರು ಅಧಿಕಾರ ಹಾಗೂ ಆಡಳಿತ ಗದ್ದುಗೆಗೆ ಎಂದೂ ಆಸೆಪಡದವರು. ಸದಾ ದೇಶಪ್ರೇಮ, ನಗರದ ಬಗ್ಗೆ ಕಾಳಜಿ, ಮಾನವೀಯತೆಯ ಅಗತ್ಯವನ್ನು ತಮ್ಮ ವಿದ್ಯಾ ಸಂಸ್ಥೆಯ ಮೂಲಕ ಮೈಸೂರು ನಗರದಲ್ಲಿ ಸಾರಿದರು. ಗಾಂಧಿಯವರ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಹರಿಜನ ಸೇವಾಕಾರ್ಯಕ್ಕೂ, ಖಾದಿಕಾರ್ಯಕ್ಕೂ ಧನಸಹಾಯ ಮಾಡಿದರು. ಪೇಟ ಧರಿಸುತ್ತಿದ್ದ ಇವರು ಸತತ ಖಾದಿಧಾರಿಗಳಾಗಿ ಗಾಂಧಿ ಟೋಪಿಯನ್ನು ಧರಿಸಲು ಪ್ರಾರಂಭಿಸಿದರು. ಮೈಸೂರಿನಲ್ಲಿ ಸ್ವದೇಶಿ ವಸ್ತು ಪ್ರದರ್ಶನ ವರ್ಷಕ್ಕೊಮ್ಮೆ ನಡೆಯುವ ವ್ಯವಸ್ಥೆ ಮಾಡಿದರು. ಅನೇಕ ಬಡ ವಿದ್ಯಾರ್ಥಿಗಳಿಗೆ ಪೋಷಕರಾಗಿದ್ದರು. ಕಾನೂನುಭಂಗ ಚಳುವಳಿಯಿಂದ ನೊಂದವರ ಸಹಾಯಕ್ಕಾಗಿ ಹಲವು ವರ್ಷ ತಿಂಗಳಿಗೆ 200ರೂಪಾಯಿ ನೀಡುತ್ತಿದ್ದ ದೊಡ್ಡ ವ್ಯಕ್ತಿ ಬನುಮಯ್ಯನವರು.

**ಆಧಾರ: ವಿಶ್ವಕರ್ನಾಟಕ,**
**ಕನ್ನಡ ವಾರಪತ್ರಿಕೆ,**
**ಸಂ: ತೀ.ತಾ. ಶರ್ಮ.**
**4–1–1931**





**ಎಲ್ಲಕ್ಕಿಂತ ಹೆಚ್ಚಾಗಿ ನಮ್ರತೆ ಮತ್ತು ಋಜು ಮಾರ್ಗಗಳು ವಿದ್ಯಾರ್ಥಿಯ ಮುಖ್ಯ ಗುಣಗಳು. ಜ್ಞಾನಪೂರ್ವಕವಾಗಿ, ವಿನೀತರಾಗಿ ಕಟ್ಟಕಡೆಯವರೊಡನೆ ಸಮರಸವಾಗಿ ನಿಲ್ಲುವುದೇ ಶ್ರೇಷ್ಠರಲ್ಲಿರಬೇಕಾದ ಶ್ರೇಷ್ಠತೆ. ಭಾರತೀಯ ಸಂಸ್ಕೃತಿಯಲ್ಲಿ ಹೇಳಿರುವ ಸಂಯಮ ಪೂರ್ಣ ಸಂನ್ಯಾಸಿಯಂತೆಯೇ ವಿದ್ಯಾರ್ಜನೆ ಮಾಡುವ ವಿದ್ಯಾರ್ಥಿಯೂ ನಿಯಮಬದ್ಧನಾಗಿರಬೇಕು. ಕಠಿಣ ಶಿಸ್ತಿನಿಂದ ಬ್ರಹ್ಮಚಾರಿಯಾಗಿ ನಡೆದುಕೊಳ್ಳಬೇಕು. ತನ್ನ ಶಕ್ತಿಗಳು ಹ್ರಾಸವಾಗದಂತೆ ಆತ್ಮಸಂಯಮದ ದಾರಿಯಲ್ಲಿ ಆದರ್ಶಪ್ರಾಯನಾಗಬೇಕು.**

**– ಗಾಂಧೀಜಿ**


KSIC
Mysore Silk
heritage weaves
100% PURE SILK SINCE 1912
GI - 11
Mysore Silk
100
CERT
KSIC Mysore Silk
a Mark of Karnataka's Heritage
0% Instalment scheme available for employees of Govt. Departments, Public Sector Undertakings and Banks.
KARNATAKA SILK INDUSTRIES CORPORATION LTD.
(A Government of Karnataka Enterprise)
Ph. +91 80 25586550, 25586402, 25586399 e-mail : sales@ksicsilk.com or info@ksicsilk.com
For online sales visit website : www.ksicsilk.com
Smt. Neela Manjunath, IAS
Managing Director, KSIC
OUR SHOWROOMS AT - BENGALURU: M.G Road-Jubilee Showroom, Leo Shopping Complex Ph: 080-25582118 | FKCCI Building, K.G.Road, Ph:080-22262077 | Malleshwaram-JyothiPlazaPh:080-23465619 | Basaveshwara Nagar-Veena Complex Ph: 080-23220578 | Jayanagar-Benaka Complex, 4th block Ph: 080-26631405 | Gandhi Bazaar- BSR Arcade Ph: 080-26604097 | Basavanagudi-Om Shree Plaza Ph: 080-26603344 / Sree Sai Arcade Ph: 080-43533503 | MYSURU: Silk Factory Premises Ph: 0821-2480801 | Indiranagar-ZooMainRoadPh:0821-2445504/ZooComplexPh:0821-2445502 | K.R.Circle-Visveshwaraiah Bhavan Ph:0821-2422658 | Mayura YatrinivasPh:0821-2420713 | MysoreGarudaMall-MakkajiChowk Ph: 0821-2430155 | CHANNAPATNA: Spun Silk Mills Premises Ph: 080-27252328 | DAVANAGERE: Davangere Mahanagara Palike Complex Ph: 0819-2253060 | CHENNAI: No.3, Venkatanarayana Road, T.Nagar Ph: 044-24331106 | HYDERABAD: No. 12, Elephant House, Ameerpet Road Ph:040-23411092

ಸ್ಥಾಪನೆ : 1964

# ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಮಲ್ಲೇಶ್ವರಂ, ಬೆಂಗಳೂರು-55**

**ಶಾಖೆಗಳು:** ಮಲ್ಲೇಶ್ವರಂ, ಪಶ್ಚಿಮ ಕಾರ್ಡ್ ರಸ್ತೆ, ಗೋವಿಂದರಾಜನಗರ,
ಅಮರಜ್ಯೋತಿನಗರ, ಸಹಕಾರನಗರ, ಹೆಸರಘಟ್ಟ ರಸ್ತೆ, ಸುಂಕದಕಟ್ಟೆ,
ಫೊ : 23341972, 23442648, 23449450
Email-jcbankltdblr@gmail.com www.jcbank.in

| ಠೇವಣಿಗಳ ಮೇಲಿನ ಬಡ್ಡಿ ದರ 01.12.2017ರಿಂದ | | | ಬ್ಯಾಂಕಿನ ಹಣಕಾಸಿನ ಸ್ಥಿತಿ ದಿ 30.06.2019 ರಲ್ಲಿದ್ದಂತೆ | |
|---|---|---|---|---|
| ವಿವರ | ಸಾಮಾನ್ಯ ವರ್ಗ | ಹಿರಿಯ ನಾಗರೀಕರಿಗೆ | | ರೂ.ಕೋಟಿಗಳಲ್ಲಿ |
| 31 ದಿನಗಳಿಂದ 90 ದಿನಗಳು | 4.00% | 4.50% | ಪಾವತಿಯಾದ ಷೇರು ಬಂಡವಾಳ | 34.24 |
| 91 ದಿನಗಳಿಂದ 180 ದಿನಗಳು | 5.00% | 5.50% | ನಿಧಿಗಳು | 45.53 |
| 181 ದಿನಗಳಿಂದ 460 ದಿನಗಳು | 7.00% | 7.50% | ಠೇವಣಿಗಳು | 1012.91 |
| 461 ದಿನಗಳಿಂದ 3 ವರ್ಷಗಳು | 8.50% | 9.00% | ಹೂಡಿಕೆಗಳು | 424.63 |
| 3 ವರ್ಷಗಳ ಮೇಲ್ಪಟ್ಟು 5 ವರ್ಷಗಳು | 8.00% | 8.00% | ಸಾಲ ಮತ್ತು ಮುಂಗಡಗಳು | 615.99 |
| ಉಳಿತಾಯ ಖಾತೆ | 3.50% | | ದುಡಿಯುವ ಬಂಡವಾಳ | 1104.96 |
| ಲಾಭಾಂಶ ಘೋಷಣೆ 2017-18 | 15% | | ಸಿ.ಆರ್.ಎ.ಆರ್ | 11.12% |
| | | | ನಿವ್ವಳ ಲಾಭ 2018-19 | 6.94 |

## ಬ್ಯಾಂಕಿನಲ್ಲಿ ದೊರೆಯುವ ಸೌಲಭ್ಯಗಳು

- ಬ್ಯಾಂಕಿನ ಎಲ್ಲಾ ಶಾಖೆಗಳು ಗಣಕೀಕೃತಗೊಂಡಿದ್ದು, ಕೋರ್ ಬ್ಯಾಂಕಿಂಗ್, ಆರ್‌ಟಿಜಿಎಸ್/ನೆಫ್ಟ್ ಹಾಗೂ ಭದ್ರತಾ ಕಪಾಟುಗಳ, ಇ-ಕಾಮರ್ಸ್ ವ್ಯವಹಾರಗಳು ಹಾಗೂ ಎ.ಟಿ.ಎಂ. ಸೌಲಭ್ಯವಿರುತ್ತದೆ.
- ರೂ.1.00 ಲಕ್ಷದವರೆಗಿನ ಠೇವಣಿಗಳು ಡಿ.ಐ.ಸಿ.ಜಿ.ಸಿ ಮುಂಬಯಿ ಇವರಿಂದ ವಿಮೆ ಮಾಡಿಸಲ್ಪಟ್ಟಿವೆ.
- ಚಿನ್ನಾಭರಣ ಸಾಲ ಸೌಲಭ್ಯವಿರುತ್ತದೆ.



## ಆಡಳಿತ ಮಂಡಲಿ

ಶ್ರೀ ವಿಜಯಕುಮಾರ್ ಸಿ.ಜಿ.
ಅಧ್ಯಕ್ಷರು

ಶ್ರೀ ವಿಜಯಸಾರಥಿ ಎಂ.ಎಸ್.
ಉಪಾಧ್ಯಕ್ಷರು

| | | |
|---|---|---|
| ಶ್ರೀ ಮರಿಗೌಡ ಸಿ.ಎಲ್ | ಶ್ರೀ ಗಂಗಾಧರ್ ಎಲ್ | ಶ್ರೀ ಎಂ.ಟಿ. ನಾಗರಾಜ್ |
| ಶ್ರೀ ಅರವಿಂದ್.ಬಿ | ಶ್ರೀ ನರಸಿಂಹಯ್ಯ.ಬಿ.ಹೆಚ್ | ಶ್ರೀ ರವಿಚಂದ್ರ |
| ಶ್ರೀ ರುದ್ರೇಗೌಡ | ಶ್ರೀ ನಾರಾಯಣರೆಡ್ಡಿ ಐ | ಶ್ರೀ ಟಿ.ಲಕ್ಷ್ಮೀ ನಾರಾಯಣ |
| ಶ್ರೀ ಪುಟ್ಟಸ್ವಾಮಿ.ಕೆ | ಶ್ರೀ ಗೋವಿಂದ.ಟಿ | ಶ್ರೀಮತಿ ಜಯಲಕ್ಷ್ಮಿ.ಸಿ.ಜಿ |
| ಶ್ರೀ ಜಯರಾಮೇಗೌಡ.ಎಂ | ಶ್ರೀ ರಮೇಶ್.ಪಿ.ಎಸ್ | ಶ್ರೀಮತಿ ಲತಾ.ಎಸ್.ಎನ್ |

ವೃತ್ತಿಪರ ನಿರ್ದೇಶಕರು: ಶ್ರೀ ಡಿ.ದೇವರಾಜ್, ಶ್ರೀ ಕೆ.ಎಸ್. ಚಂದ್ರಶೇಖರ್

ಶ್ರೀ ಜಿ. ಕೃಷ್ಣಪ್ಪ
ಮುಖ್ಯ ಕಾರ್ಯನಿರ್ವಹಣಾಧಿಕಾರಿ



# ಪ್ರಾರ್ಥನೆಯ ಬಗ್ಗೆ ಗಾಂಧೀಜಿ ಏನು ಹೇಳಿದ್ದಾರೆ?

**ಆ**ಶ್ರಮದಲ್ಲಿ ಪ್ರಾರ್ಥನೆ ಎರಡು ಸಲ ನಡೆಯುತ್ತದೆ. ಮುಂಜಾನೆ 4.30ಕ್ಕೆ ಒಮ್ಮೆ, ಸಂಜೆ 7 ಕ್ಕೆ ಒಮ್ಮೆ. ಆಶ್ರಮದ ಅಂಗಳದಲ್ಲಿ ಎಲ್ಲರೂ ಸೇರುತ್ತಾರೆ. ಹೊರಗಿನವರೂ ಪ್ರಾರ್ಥನೆಯಲ್ಲಿ ಸೇರಬಹುದು. ಅನೇಕರು ಸೇರುವುದೂ ಉಂಟು. ಚಾಪೆಗಳ ಮೇಲೆ ಎಲ್ಲರೂ ಗುಂಪಾಗಿ ಕುಳಿತರೆ ಗಾಂಧೀಜಿ ಬೆನ್ನ ಹಲಗೆಗೆ ಆತುಕೊಂಡು ನಡುವೆ ಕೂತುಕೊಳ್ಳುತ್ತಾರೆ. ಆಶ್ರಮವಾಸಿಗಳಲ್ಲಿ ಯಾರಾದರೊಬ್ಬರು ಪ್ರಾರ್ಥನೆಯನ್ನು ಮೊದಲು ಹೇಳಿ ಉಳಿದವರೆಲ್ಲ ಅವರನ್ನನುಸರಿಸಿ ಹೇಳುತ್ತಾರೆ. ಶ್ಲೋಕ, ಗೀತೆ, ಭಜನೆ, ಗೀತಾ– ಹೀಗೆ ನಾಲ್ಕು ಪ್ರಕಾರವಾಗಿ ನಡೆಯುತ್ತದೆ. ಗೀತೆಯಲ್ಲಿ ಹನ್ನೆರಡನೆಯ ಅಧ್ಯಾಯ ಎಲ್ಲಕ್ಕಿಂತ ತೀರ ಚಿಕ್ಕದು. ಅದರಲ್ಲಿ ಭಕ್ತನ ಲಕ್ಷಣಗಳು ಹೇಳಲ್ಪಟ್ಟಿವೆ. ಗಾಂಧೀಜಿಗೆ ಆ ಅಧ್ಯಾಯ ಬಹಳ ಪ್ರಿಯವಾದುದು. ಎರಡನೆ ಅಧ್ಯಾಯದ ತುದಿಯಲ್ಲಿ ಸ್ಥಿತಪ್ರಜ್ಞನ ಲಕ್ಷಣಗಳು ವರ್ಣಿತವಾಗಿವೆ. ಸ್ಥಿತಪ್ರಜ್ಞ ಎಂದರೆ ಯಾರು. ಅವನ ರೀತಿ ಹೇಗೆ ಎಂದು ಅರ್ಜುನ ಕೇಳುತ್ತಾನೆ. ಅದಕ್ಕೆ ಭಗವಾನ್ ಕೃಷ್ಣ ಉತ್ತರ ಕೊಡುತ್ತ ಮನುಷ್ಯನ ಧ್ಯೇಯವೇನೆಂಬುದನ್ನು ಅದಕ್ಕೆ ಸಾಧನ ಮಾರ್ಗವೇನೆಂಬುದನ್ನು ಹೇಳುತ್ತಾನೆ. ಸದಾಕಾಲಕ್ಕೂ ಸಾಧಕ ಜೀವಕ್ಕೆ ಅದು ಕೈದೀವಿಗೆಯಂತೆ ಬೆಳಗುತ್ತಿರುತ್ತದೆ. ಆಶ್ರಮದ ದಿನದ ಪ್ರಾರ್ಥನೆಯಲ್ಲಿ ಈ ಅಧ್ಯಾಯಕ್ಕೆ ಬಹಳ ಮಹತ್ವವಿದೆ. ದಿನವೂ ಮಾನವನ ಜೀವನದ ಶ್ರೇಷ್ಠ ಆದರ್ಶವನ್ನು ಅದು ಸ್ಪಷ್ಟವಾಗಿ, ಸ್ಥೂಲವಾಗಿ ಅರ್ಥವಾಗು–ವಂತೆ ಚಿತ್ರಿಸಿ ಕಣ್ಣ ಮುಂದೆ ನಿಲ್ಲಿಸುತ್ತದೆ. ಗೀತೆಯ ಬಗ್ಗೆ ಗಾಂಧೀಜಿಗೆ ಇರುವ ಅಪಾರ ವಿಶ್ವಾಸಕ್ಕೆ ಇದೊಂದು ಗುರುತು. ಇದಲ್ಲದೆ ರಾಮಧುನ್ ರಘುಪತಿ ರಾಜಾರಾಮ ಎಂದು ಹೆಸರಾದ ರಾಮ ಭಜನೆ ಕೂಡಾ ಪ್ರಾರ್ಥನೆಯಲ್ಲಿ ಮುಖ್ಯವಾದುದು. ಏಕಕಂಠದಿಂದ ಎಲ್ಲರೂ ರಾಮಭಜನೆ ಹಾಡುತ್ತಿರುವಾಗ ಮನಸ್ಸಿಗೆ ಒಂದು ಬಗೆಯ ಅಪೂರ್ವ ಆನಂದವಾಗುತ್ತದೆ.

ಅನೇಕ ಕಡೆ ನಾವು ನೋಡುವ ಶನಿವಾರ ರಾಮ ಭಜನೆಗಳಲ್ಲಿ ಕಾಣುವ ಹುಚ್ಚು ಪ್ರಲಾಪ ಇಲ್ಲಿ ಕಾಣ ಬರುವುದಿಲ್ಲ. ತಾಳ ಕುಟ್ಟಿ ಮನಸ್ಸನ್ನು ರೊಚ್ಚಿಗೆಬ್ಬಿಸುವುದಿಲ್ಲ. ಶಾಂತವಾಗಿ ಸಮಾಧಾನವಾಗಿ ಆ ಎರಡು ಪದಗಳನ್ನೂ ಮೆಲುಕು ಹಾಕುತ್ತಾರೆ. ಉಳಿದ ಕೀರ್ತನೆಗಳೂ ಬಹು ಗಂಭೀರವಾದವು. ಗುಜರಾತ ರಾಜಪುತಾನಗಳಲ್ಲಿ ಆಗಿ ಹೋದ ಭಕ್ತ ಶ್ರೇಷ್ಠರ ಪದಾವಗಳಿಂದ ಸಂಗ್ರಹಿಸಿದವು. ವೈಷ್ಣವ ಜನತೋ ತೇನೆ ಕಹಿಯೆ ಎಂಬ ಹಾಡೂ ಮೇರಿ ಲಜ್ ಎಂಬ ತುಲಸಿದಾಸರ ಗೀತವೂ ಗಾಂಧೀಜಿಯ ಕರ್ನಾಟಕ ಪ್ರವಾಸದಲ್ಲಿ ಮೈಸೂರು ವಾಸದಲ್ಲಿ ಎಲ್ಲರಿಗೆ ಪರಿಚಿತವಾಗಿವೆ. ಮೇಲೆ ನೀಲಾಕಾಶ,

ಅಸಂಖ್ಯ ತಾರಾಗಣ. ಕೆಳಗೆ ಅಕೃತ್ರಿಮಳಾದ ನೆಲದಾಯಿ ಮೂರೂ ಸಂಜೆಯ ನಸುಕು. ಮಾನವ ಲೋಕದ ಆತ್ಮ ಸರಸ್ಸು ಭಗವಾನನ ಪೀಠದ ಕಡೆಗೆ–ಆಕಾಶದ ಕಡೆಗೆ–ಚಿಮ್ಮುತ್ತಿದೆಯೋ ಎನಿಸುತ್ತದೆ. ಈ ಭಜನೆಯ ಧ್ವನಿ ಮೇಲೇರುತ್ತಿದ್ದರೆ.

ಗಾಂಧೀಜಿ ಪ್ರಾರ್ಥನೆಯಲ್ಲಿ ಮಾತಾಡುವುದಿಲ್ಲ. ಸಬರಮತಿಯಲ್ಲಿದ್ದಾಗ ಪ್ರಾರ್ಥನೆಯಾದ ಕೂಡಲೇ ಅವರ ಪ್ರವಚನವಾಗುತ್ತಿತ್ತು. ಸೇವಾ ಗ್ರಾಮದಲ್ಲಿ ಈಗ ಈ ರೂಢಿಯಿಲ್ಲ. ನಿಜವಾಗಿ ನೋಡಿದರೆ ಸೇವಾಗ್ರಾಮ ಆಶ್ರಮಕ್ಕೂ ಸಬರಮತಿಗೂ ಬಹಳ ವ್ಯತ್ಯಾಸವಿದೆ. ಅದು ಒಂದು ಶಿಕ್ಷಣ ಸಂಸ್ಥೆ. ಸತ್ಯಾಗ್ರಹ ಸಿದ್ಧಾಂತವನ್ನು ಆಶ್ರಮವಾಸಿಗಳಿಗೆ ಕಲಿಸುವ ಹೊಣೆಯನ್ನು ಗಾಂಧೀಜಿ ಹೊರುತ್ತಿದ್ದರು. ಅಲ್ಲಿದ್ದವರು ಶಿಕ್ಷಣ ಪಡೆಯುತ್ತಿದ್ದ ಶಿಷ್ಯ ವೃಂದ. ಇದು ಅವರ ಪರ್ಣಶಾಲೆ. ಅವರಿಗೆ ಅನಿವಾರ್ಯವಾಗಿ ಬೇಕಾದ ನಾಲ್ಕೆಂಟು ಜನಮಾತ್ರ ಇಲ್ಲಿ ಇದ್ದಾರೆ. ಪ್ರಾರ್ಥನೆಯಲ್ಲಿ ಎಲ್ಲರ ನಡುವೆ ಕೂತರೂ ಗಾಂಧೀಜಿ ಮೌನವಾಗಿರುತ್ತಾರೆ. ಎಲ್ಲರೊಡನೆ ಶ್ಲೋಕಾದಿಗಳನ್ನು ಹೇಳುವುದಿಲ್ಲ. ಅವರು ಅಲ್ಲಿರುವುದೇ ಪ್ರಾರ್ಥನೆಗೆ ಹರಿದು ಶ್ರುತಿ ಕೊಡುತ್ತದೆ. ಅದನ್ನು ಒಂದು ಮಟ್ಟಕ್ಕೆ ತರುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಈ ರೀತಿಯಾದ ಸಾಮೂಹಿಕ ಪ್ರಾರ್ಥನೆ ಬಹಳ ಕಡಿಮೆ. ಉತ್ತರ ದೇಶದಲ್ಲಿ ಭಕ್ತಿಮಾರ್ಗದ ಬೇರೆ ಬೇರೆ ಪಂಥಗಳು ಸಾಮೂಹಿಕ ಭಜನೆ, ಕರ್ನಾಟಕದಲ್ಲಿ ಅಲ್ಲಲ್ಲಿ ಜಯವಿಠಲ ಕುಣಿತಗಳು ಕಾಣುತ್ತವೆ. ಆದರೂ ಅದನ್ನು ಸಂಸ್ಕೃತಿಯ ಒಂದು ಭಾಗವೆನ್ನಲು ಬರುವಂತಿಲ್ಲ. ಅಲ್ಲದೆ ಆ ಕುಣಿತಕ್ಕೂ ಈ ಪ್ರಾರ್ಥನೆಗೂ ಬುಡದಲ್ಲೇ ಬೇಧವಿದೆ. ಈ ತರದ ಸಾಮೂಹಿಕ ಪ್ರಾರ್ಥನೆ ಕ್ರಿಸ್ತಾನರಲ್ಲಿ, ಮಹಮ್ಮದೀಯರಲ್ಲಿ ಉಂಟು. ಮಹಮ್ಮದೀ–ಯರ ಪ್ರಾರ್ಥನೆಯಲ್ಲಿ ಮುಲ್ಲಾ ಒಬ್ಬನೇ ಘೋಷಿಸುವನು. ಉಳಿದವರು ಸಿಪಾಯಿಗಳಂತೆ ನಮಾಜು ಮಾಡುತ್ತಾರೆ. ಅದರಲ್ಲಿ ಒಂದು ಶಿಸ್ತು ಇದೆ. ಕ್ರಿಸ್ತಾನರ ಸಾಮೂಹಿಕ ಪ್ರಾರ್ಥನೆ ಹೆಚ್ಚು ಆನಂದಮಯ. ಗಾಂಧೀಜಿಗೆ ಇಂಗ್ಲೆಂಡಿನಲ್ಲಿ, ದಕ್ಷಿಣ ಆಫ್ರಿಕಾದಲ್ಲಿ ಈಶಾಯಿಗಳ ಸಹವಾಸ ಸ್ನೇಹಗಳು ಲಭಿಸಿದವು. ಅವರ ಅಂತರಂಗದ ಗೆಳೆಯರಲ್ಲಿ ಅನೇಕರು ಈ ಸಾಯಿಗಳು. ಈ ಸಹವಾಸದ ಪರಿಣಾಮದಿಂದ ಗಾಂಧೀಜಿಯ ಸಾಮೂಹಿಕ ಪ್ರಾರ್ಥನೆ ಬಂದಿರಬಹುದೆಂದು ಅನಿಸುತ್ತದೆ. ಅಂತೂ ಅವರ ಜೀವನದಲ್ಲಿ ಈ ಪ್ರಾರ್ಥನೆಗೆ ಬಹಳ ದಿನಗಳಿಂದ ಒಂದು ಮಹತ್ವದ ಸ್ಥಾನ ಬಂದಿದೆ. ಸಾಮೂಹಿಕ ಪ್ರಾರ್ಥನೆಯ ಪದ್ಧತಿ ನಮ್ಮಲ್ಲಿ ಹರಡಲಿ ಎಂದು ಅವರ ಬಯಕೆ. ಅದಕ್ಕಾಗಿಯೇ ಬಹಿರಂಗವಾಗಿ ಪ್ರಾರ್ಥನಾ ಸಭೆಗಳನ್ನು ಅವರು ನಡೆಸುವುದು. ಸಂಜೆಗೆ ತಿರುಗಾಡಿ ಬಂದ ಕೂಡಲೇ ಪ್ರಾರ್ಥನೆ. ಪ್ರಾರ್ಥನೆ ಮುಗಿದ ಮೇಲೆ ಆಶ್ರಮದ ಮೇಲ್ವಿಚಾರಣೆ. ಯಾರು ಎಷ್ಟು ಎಷ್ಟು ಕೆಲಸ ಮಾಡಿದರು? ನೂಲುವುದು, ತೋಡುವ ಕೆಲಸ ಎಷ್ಟು ನಡೆಯಿತು? ಆಶ್ರಮದಲ್ಲಿ ಎಲ್ಲರೂ ಆರೋಗ್ಯವೇ? ಎಲ್ಲಾ ಸಣ್ಣ ಪುಟ್ಟ ಮಾತುಗಳನ್ನೂ ವಿಚಾರಿಸುತ್ತಾರೆ. ಆಶ್ರಮವಾಸಿಗಳಲ್ಲಿ ಯಾರಾದರೂ ಬೇನೆ ಬಿದ್ದರೆ ಗಾಂಧೀಜಿಗೆ ಬಹಳ ಚಿಂತೆ. ತಾವೇ ಉಪಚಾರಕ್ಕೆ ನಿಲ್ಲುತ್ತಾರೆ. ಪ್ರಾರ್ಥನೆಯ ತರುವಾಯ ರೋಗಿಗಳ ಬಳಿ ಹೋಗಿ ಕುಳಿತು ಅವರನ್ನು ಉಲ್ಲಾಸಗೊಳಿಸುತ್ತಾರೆ. ಗಾಂಧೀಜಿ ಸ್ವಲ್ಪ ವಾದ್ಯವನ್ನೂ ಬಲ್ಲರು. ಮರಪಂಡಿತರಂತೆ ಅರೆವೈದ್ಯರ ಜಾತಿ ಒಂದಿದೆ. ಆ ಗುಂಪಿಗೆ ಸೇರಿದವನು ನಾನು ಎಂದು ಅವರು ಹೇಳುತ್ತಾರೆ. ಮೊದಮೊದಲು ಅವರ ವೈದ್ಯಶಾಸ್ತ್ರ ಪ್ರಯೋಗಗಳು ಅವರ ಸುತ್ತಲಿನ ಜನರಿಗೆ ಹೆದರಿಕೆ, ಬೇಸರ ಉಂಟು ಮಾಡುವಷ್ಟು ವಿಚಿತ್ರವಾಗಿದ್ದವು. ಅವರ ಮಣ್ಣಿನ ಚಿಕಿತ್ಸೆ–ಮುಂತಾದವುಗಳ ಬಗ್ಗೆ ಕಥೆಗಳೇ ಇವೆ. ಆದರೆ ಈಗ ಆ ಪ್ರಯೋಗಗಳಿಗೆ ಬೇಕಾದ ವಿರಾಮವಾಗಲಿ ಉತ್ಸಾಹವಾಗಲಿ ಎರಡೂ ಇಲ್ಲ. ಆಶ್ರಮದಲ್ಲಿ ಸಣ್ಣದೊಂದು ಔಷಧಾಲಯವಿದೆ. ಡಾ.ಸುಶೀಲಾ ನಾಯರ್ ಅದನ್ನು ನೋಡಿಕೊಳ್ಳುತ್ತಾರೆ. ಇಷ್ಟೆಲ್ಲಾ ಆಗುವ ಹೊತ್ತಿಗೆ 9 ಘಂಟೆ. ಅದು ಗಾಂಧೀಜಿ ಮಲಗುವ ಹೊತ್ತು. ಗಾಂಧೀಜಿ ರಾತ್ರಿ ಬೇಗನೆ ಮಲಗುತ್ತಾರೆ. 30–40 ವರ್ಷಗಳಿಂದ ಅವರಿಗೆ ಈ ರೂಢಿ ಇದೆ. ಬೆಳಗ್ಗೆ ಬೇಗನೆ ಏಳುತ್ತಾರೆ. ಗಾಂಧೀಜಿಯ ಮೇಲ್ವಿಚಾರಣೆಗೆ ಒಳಪಟ್ಟು ಎಲ್ಲಾ ಸಂಸ್ಥೆಗಳಲ್ಲೂ ಇದೊಂದು ನಿಯಮವಾಗಿದೆ. ಅರುಣೋದಯಕ್ಕೆ ಮೊದಲೇ ಏಳುವುದು ಅವರಿಗೆ ಮುಖ್ಯವಾದ ಒಂದು ಜೀವನ ಧರ್ಮ. ಈ ಮುದಿತನದಲ್ಲಿ ಅವರಿಗಿರುವ ಕಾರ್ಯ ಕಲಾಪಗಳ ನಡುವೆಯೂ ಅವರ ಆರೋಗ್ಯ ಈಗಿರುವಷ್ಟು ಚೆನ್ನಾಗಿರಲು ಈ ಅಭ್ಯಾಸವೂ ಒಂದು ಕಾರಣವೆಂದು ಸುಲಭವಾಗಿ ತಿಳಿಯಬಹುದಾಗಿದೆ.

**(ಸಿದ್ದವನಹಳ್ಳಿ ಕೃಷ್ಣಶರ್ಮ ಬರೆದಿರುವ ವರ್ಧಾಯಾತ್ರ ಕೃತಿಯಿಂದ ಆಯ್ದಭಾಗ)**



# ಕರುನಾಡಲ್ಲಿ ಮಹಾತ್ಮನ ಹೆಜ್ಜೆ



## ಗಾಂಧಿ ನೆಟ್ಟ ತೆಂಗಿನಗಿಡ ಕೊಡುತ್ತದೆ ಫಲ!

1927ರ ಆ.14ರಂದು ಶಿವಮೊಗ್ಗಕ್ಕೆ ಭೇಟಿ ನೀಡಿದ್ದ ಗಾಂಧೀಜಿ 2 ದಿನ ಉಳಿದುಕೊಂಡಿದ್ದರು. ನಗರಕ್ಕೆ ಪ್ರವೇಶ ನೀಡುವ ರಸ್ತೆಯಲ್ಲಿ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು. ಆ ನೆನಪಿಗಾಗಿ ಆ ರಸ್ತೆಗೆ ಗಾಂಧಿ ಬಜಾರ್ ಎಂದೇ ಹೆಸರಿಡಲಾಗಿದೆ. ಗಾಂಧೀಜಿ ಜೊತೆ ಅವರ ಪತ್ನಿ ಕಸ್ತೂರಬಾ, ಸರ್ದಾರ್ ಪಟೇಲ್ ಕೂಡ ಆಗಮಿಸಿದ್ದರು. ಇಲ್ಲಿ ಸಭೆ ನಡೆಸಿ ಬೃಂದಾವನ ಹೋಟೇಲ್‌ನಲ್ಲಿ ಉಳಿದುಕೊಂಡಿದ್ದರು. ಹರಿಜನ ಉದ್ಧಾರಕ್ಕಾಗಿ ಆರಂಭಿಸಿದರ ಹಣ ಸಂಗ್ರಹಣೆಗೆ ಇಲ್ಲಿ ರೂ.ಆರು ಸಾವಿರ ದೇಣಿಗೆ ನೀಡಲಾಯಿತು. ಆ.17 ರಂದು ತೀರ್ಥಹಳ್ಳಿಗೆ ಹೊರಟಿದ್ದರು. ಆದರೆ, ನಿಗದಿತ ಸಮಯದಲ್ಲಿ ಕಾರು ಬರಲಿಲ್ಲ ಎಂದು ಹಳೇ ತೀರ್ಥಹಳ್ಳಿ ರಸ್ತೆಯಲ್ಲಿ ನಡೆದುಕೊಂಡೇ ಹೊರಡಿದ್ದರು. ಕೊನೆಗೆ ಕಾರು ಬಂದು ಹತ್ತಿಸಿಕೊಂಡು ಹೋಯಿತು. ತಾವು ಉಳಿದುಕೊಂಡಿದ್ದ ಹೋಟೇಲ್‌ನಲ್ಲಿ ಅಂದು ಗಾಂಧೀಜಿ ಕಸ್ತೂರಬಾ ನೆಟ್ಟಿರುವ ತೆಂಗಿನ ಸಸಿಗಳು ಮರವಾಗಿ ಫಲಕೊಡುತ್ತಿವೆ.

## ಬಿಹಾರಕ್ಕಾಗಿ ಉಡುಪಿಯಲ್ಲಿ ಧನ ಸಂಗ್ರಹ

ಗಾಂಧೀಜಿ ಉಡುಪಿ ಜಿಲ್ಲೆಗೆ 1934ರ ಫೆ.25ರಂದು ಭೇಟಿ ನೀಡಿದ್ದರು. ಮಂಗಳೂರಿನಿಂದ ಹೊರಟ ಅವರು ಮಧ್ಯಾಹ್ನ ಹೊತ್ತಿಗೆ ಉಡುಪಿಗೆ ಆಗಮಿಸಿದ್ದರು. ಆಗ ಇಲ್ಲಿನ ಪಾಂಗಾಳ ಮತ್ತು ಉದ್ಯಾವರ ನದಿಗಳಿಗೆ ಆಗ ಸೇತುವೆಗಳಿರಲಿಲ್ಲ. ನಾಲ್ಕೈದು ದೋಣಿಗಳನ್ನು ಅಕ್ಕಪಕ್ಕ ನಿಲ್ಲಿಸಿ ಅವುಗಳ ಮೇಲೆ ಮರದ ಹಲಗೆಗಳನ್ನು ಹಾಸಿ, ಅದರ ಮೇಲೆ ಗಾಂಧೀಜಿ ಕಾರು ಹೇರಿ ನದಿಗಳನ್ನು ದಾಟಿಸಲಾಗಿತ್ತು. ಬಿಹಾರದ ಅತಿವೃಷ್ಟಿ ಪೀಡಿತರಿಗಾಗಿ ಧನ ಸಂಗ್ರಹ ಮಾಡಿದರು. ಉಡುಪಿ ಕೃಷ್ಣ ಮಠದಲ್ಲಿ ಆಗಿನ್ನೂ ಚಾಲ್ತಿಯಲ್ಲಿದ್ದ ದಲಿತರಿಗೆ ಪ್ರವೇಶ ನಿಷಿದ್ಧದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಅದೇ ಕಾರಣಕ್ಕೆ ಕೃಷ್ಣ ಮಠಕ್ಕೆ ಭೇಟಿ ನೀಡಿರಲಿಲ್ಲ.

## ಮೈಸೂರಿಗೆ ಎರಡು ಬಾರಿ ಭೇಟಿ

ಮೂವತ್ತರ ದಶಕದಲ್ಲಿ ಗಾಂಧೀಜಿ ಎರಡು ಬಾರಿ ಮೈಸೂರಿಗೆ ಆಗಮಿಸಿದ್ದರು. ಅವರು ಈ ರೀತಿ ಮೈಸೂರಿಗೆ ಬಂದಾಗ 1934ರಲ್ಲಿ ನಂಜನಗೂಡು ತಾಲೂಕು ಬದನವಾಳಿನಲ್ಲಿರುವ ಖಾದಿ ಗ್ರಾಮೋದ್ಯೋಗ ಕೇಂದ್ರ, ಮೈಸೂರಿನ ಕೆ.ಆರ್. ಮಿಲ್, ಲ್ಯಾನ್ಸ್ ಡೌನ್ ಕಟ್ಟಡ ಮೊದಲಾದ ಕಡೆ ಭೇಟಿ ನೀಡಿದ್ದರು. ತಗಡೂರಿನಲ್ಲಿ ಖಾದಿ ಗ್ರಾಮೋದ್ಯೋಗ ಕೇಂದ್ರವಿದ್ದು ಗಾಂಧೀಜಿ ಆ ಗ್ರಾಮಕ್ಕೆ ಭೇಟಿ ನೀಡಿದ ನೆನಪಿಗಾಗಿ ಆವರಣದಲ್ಲಿ ಗಾಂಧಿ ಪುತ್ಥಳಿ ನಿರ್ಮಿಸಲಾಗಿದೆ. ಮೈಸೂರು ಭಾಗದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿ.ತಗಡೂರು ರಾಮಚಂದ್ರರಾವ್ ಅವರು ಗಾಂಧಿ ಅವರನ್ನು ಮೈಸೂರಿನ ಹೃದಯ ಭಾಗದಲ್ಲಿರುವ ಖದ್ದರ್ ಕೋ-ಆಪ್ ಸೊಸೈಟಿಗೆ ಕರೆ ತಂದಿದ್ದರು. 1925ರಲ್ಲಿ ಈ ಸೊಸೈಟಿ ಆರಂಭಕ್ಕೆ ತಾತಯ್ಯ ಎಂದೇ ಖ್ಯಾತರಾದ ವೃದ್ಧಾ ಪಿತಾಮಹ ಎಂ.ವೆಂಕಟಕೃಷ್ಣಯ್ಯ ಕಾರಣಕರ್ತರು.

## ರಾಮನಗರದ ಗುಡಿಸಿಲಲ್ಲಿ ತಂಗಿದ್ದ ಬಾಪೂ

ಹರಿಜನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ನಿಧಿ ಸಂಗ್ರಹಕ್ಕಾಗಿ ಕರ್ನಾಟಕಕ್ಕೂ ಆಗಮಿಸಿದ್ದ ಗಾಂಧೀಜಿ 1934ರಲ್ಲಿ ರಾಮನಗರಕ್ಕೂ ಭೇಟಿ ನೀಡಿದ್ದರು. ಚನ್ನಪಟ್ಟಣದ ಗಾಂಧಿಭವನ, ಮಂಗಳವಾರಪೇಟೆಯ ಹರಿಜನ ವಿದ್ಯಾರ್ಥಿನಿಲಯ ಹಾಗೂ ರಾಮನಗರದ ಎಂ.ಜಿ.ರಸ್ತೆ ಗಾಂಧೀಜಿ ಬಂದು ಹೋಗಿದ್ದಕ್ಕೆ ಈಗ ಸಾಕ್ಷಿಯಾಗಿ ನಿಂತಿವೆ. ಅಂದು ಚನ್ನಪಟ್ಟಣದ ಆರ್ಯಮೂರ್ತಿ ಎಂಬುವರ ಗುಡಿಸಲಲ್ಲಿ ಬಾಪೂ ತಂಗಿದ್ದರು. ಬಾಪೂಜಿ ತಂಗಿದ್ದ ಸ್ಥಳದಲ್ಲಿ ಈಗ ಗಾಂಧಿ ಭವನ ನಿರ್ಮಿಸಲಾಗಿದೆ. ಬೇಸರದ ಸಂಗತಿಯೆಂದರೆ ಅದೀಗ ಸೋಮಾರಿಗಳ ಕಟ್ಟೆಯಾಗಿ ಮಾರ್ಪಾಟಾಗಿದೆ. ಗ್ರಂಥಾಲಯ ಆವರಣ ಮಧ್ಯಾಹ್ನದ ವೇಳೆ ಹಲವರಿಗೆ ನಿದ್ರೆಯ ತಾಣವಾಗಿದೆ.

# ಸಂಗೀತದಂತೆ ಬದುಕಿದ ಗಾಂಧೀಜಿ

– ಗೀತಾ ಸೀತಾರಾಮ್



**ಗಾಂಧೀಜಿಯವರನ್ನು ನಾವೆಲ್ಲ ಒಬ್ಬ ಮಹಾತ್ಮರನ್ನಾಗಿ ಅರಿತಿದ್ದೇವೆ. ಅಂದರೆ ಸತ್ಯಾನ್ವೇಷಕರಾಗಿ, ಅಹಿಂಸಾ ತತ್ವದ ಪರಿಶೋಧಕರಾಗಿ, ಸಂತರಾಗಿ, ಒಬ್ಬ ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಹಾಗೂ ಮಾನವ ಜನಾಂಗ, ಸಮಾಜ ಮತ್ತು ದೇಶದ ಬಗ್ಗೆ ಅಸಾಧ್ಯ ಕಾಳಜಿಯಿರುವ ಒಂದು ದಿವ್ಯಾತ್ಮವಾಗಿ ಕಂಡಿದ್ದೇವೆ. ಆದರೆ ಅವರೊಬ್ಬ ವಿಶಿಷ್ಟ ಸಂಗೀತಗಾರರೆಂಬುದು ಅನೇಕರಿಗೆ ತಿಳಿದಿಲ್ಲ!**

ಗಾಂಧೀಜಿಯವರಿಗೆ ಸಂಗೀತ ಮತ್ತು ಲಲಿತ ಕಲೆಗಳೆಂದರೆ ತುಂಬಾ ಒಲವು. ಸಂಗೀತ ಅವರ ಬದುಕಿನ ಮೇಲೆ ದೊಡ್ಡ ಪ್ರಮಾಣದಲ್ಲಿ ಪ್ರಭಾವ ಬೀರಿತ್ತು. ಭಗವದ್ಗೀತೆ, ರಾಮಾಯಣದ ವಾಚನವನ್ನು ಅವರು ಚಿಕ್ಕದಿನಿಂದ ಕೇಳಿದ್ದರ ಪ್ರಭಾವ ವರ್ಷಗಳ ನಂತರವೂ ಕಡಿಮೆಯಾಗಲಿಲ್ಲ.

'ಸಂಗೀತ ಗಂಟಲಿನಿಂದ ಮಾತ್ರ ಹೊರಡುವಂಥದಲ್ಲ; ಪಂಚೇಂದ್ರಿಯಗಳಲ್ಲೂ, ಹೃದಯದಲ್ಲೂ ಸಂಗೀತವಿದೆ. ನನ್ನ ಬದುಕಿನಲ್ಲಿ ಸಂಗೀತ, ಹಾಸ್ಯ ಇಲ್ಲದೇ ಹೋಗಿದ್ದರೆ ನನ್ನೀ ಕೆಲಸದ ಹೊರೆಯಲ್ಲಿ ನಾನೆಂದೋ ಸತ್ತು ಹೋಗುತಿದ್ದೆ.' ಶುದ್ಧ ಜೀವನಕ್ಕೆ ಶ್ರುತಿ ಸೇರಿಸಿ ಸಂಗೀತವೆಂಬ ಕಲೆಯನ್ನು ಹೊರ ತರುವುದು ಅತ್ಯಲ್ಪ ಜನರಿಂದ ಮಾತ್ರ ಸಾಧ್ಯ.

ಸಂಗೀತ ನನ್ನಲ್ಲಿ ಶಾಂತಿ ತಂದಿದೆ. ನಾನು ತುಂಬಾ ಉದ್ರಿಕ್ತನಾಗಿದ್ದಾಗ, ಸಂಗೀತ ನನ್ನನ್ನು ಅತಿ ಬೇಗನೆ ಶಾಂತವಾಗಿಸಿದ ಸಂದರ್ಭಗಳು ನನಗೆ ನೆನಪಿವೆ. ಕ್ರೋಧವನ್ನು ಗೆಲ್ಲಲು ಸಂಗೀತ ನನಗೆ ನೆರವು ನೀಡಿದೆ.

ಮೇಲಿನವೆಲ್ಲ ಗಾಂಧೀಜಿ ಆಡಿದ ಸಂಗೀತ ಪರ ನುಡಿಗಳು. ಅವರು ಪಂಡಿತ್ ನಾರಾಯಣ ಖರೆ ಅವರಿಗೆ ಅಕ್ಟೋಬರ್ 7, 1924ರಲ್ಲಿ ಬರೆದ ಪತ್ರವಿದು–ಕಾಲಕ್ರಮದಲ್ಲಿ ನಾನು ಸಂಗೀತದಲ್ಲಿ ಅತ್ಮೋದ್ಧಾರದ ಸಾಧನವನ್ನು ನೋಡಲಾರಂಭಿದ್ದೇನೆ. ಭಜನ್ ಹಾಡುವಾಗ ದಯವಿಟ್ಟು ಎಲ್ಲರೂ ಅದರ ಸರಿಯಾದ ಅರ್ಥ ಅರಿತು ಹಾಡಲು ಪ್ರಯತ್ನಿಸಿ, ಹಾಗೆ ಮಾಡಿದಾಗ ನನಗಾಗುವ ಆನಂದ ವರ್ಣಾನಾತೀತ. ಸಂಗೀತವು ಆತ್ಮದ ಉನ್ನತಿಗೆ ಒಂದು ಸಕಾರಾತ್ಮಕ ಕ್ರಿಯೆ.

ಗಾಂಧೀಜಿಯವರು ಸಂಗೀತ ಕಲೆಯನ್ನು ಉಳಿಸಿ, ಬೆಳೆಸಲು ಬಹಳ ಶ್ರಮಿಸಿದರು. ಅಹಮದಾಬಾದ್‌ನಲ್ಲಿ ಯಂಗ್ ಇಂಡಿಯಾದವರನ್ನು ಉದ್ದೇಶಿಸಿ ಮಾಡಿದ ಏಪ್ರಿಲ್ 15, 1929ರ ಭಾಷಣ ಹೀಗಿದೆ : ವಿಶಾಲ ದೃಷ್ಟಿಯಲ್ಲಿ ಅರ್ಥೈಸಿದರೆ, ಸಂಗೀತವೆಂದರೆ ಸಂಗಮ, ಹೊಂದಾಣಿಕೆ, ಸಹಕಾರ. ಬದುಕಿನ ಯಾವ ಭಾಗದಲ್ಲೂ ಸಂಗೀತವನ್ನು ಮೂಲೆಗೊತ್ತುವಂತಿಲ್ಲ. ಆದ್ದರಿಂದ ಹೆಚ್ಚು ಹೆಚ್ಚು ಜನ ತಮ್ಮ ಮಕ್ಕಳನ್ನು ಸಂಗೀತ ಶಾಲೆಗೆ ಕಳುಹಿಸಿದರೆ ದೇಶದ ಉದ್ಧಾರಕ್ಕೆ ಒಂದು ದೊಡ್ಡ ಕಾಣಿಕೆ ಆದೀತು.

ಮಹಾತ್ಮ ಗಾಂಧೀಜಿಯವರ ನುಡಿಗಳಲ್ಲಿ ನಿಜವಾದ ಸಂಗೀತದಲ್ಲಿ ಮತಗಳ ನಡುವಿನ ಭೇದವಿಲ್ಲ; ಘರ್ಷಣೆಯಿಲ್ಲ ತಾತ್ಸಾರವಿಲ್ಲ. ಸಂಗೀತವು ರಾಷ್ಟ್ರೀಯ ಭಾವೈಕ್ಯಕ್ಕೆ ಉತ್ತಮ ಉದಾಹರಣೆ. ಹಿಂದೂಗಳು, ಮುಸಲ್ಮಾನರು ಭೇದವಿಲ್ಲದೆ ಒಟ್ಟಿಗೆ ಒಂದೇ ವೇದಿಕೆಯ ಮೇಲೆ ಕುಳಿತು ಕಛೇರಿಗಳನ್ನು ಇಲ್ಲಿ ಮಾತ್ರ ನಡೆಸುತ್ತಾರೆ.

ಅವರು ಆಗಾಗ ಹೇಳುತ್ತಿದ್ದ ಇನ್ನೊಂದು ಮಾತು ಇದೆ. ನಾವು ಸಂಗೀತವನ್ನು ಸಂಕುಚಿತ ದೃಷ್ಟಿಕೋನದಲ್ಲಿ, ಅಂದರೆ ಹಾಡುವ ಅಥವಾ ವಾದ್ಯವನ್ನು ನುಡಿಸುವ ಸಾಮರ್ಥ್ಯ ಎಂದಷ್ಟೇ ಪರಿಗಣಿಸಿದ್ದೇವೆ. ಆದರೆ ವಿಶಾಲವಾದ ಅರ್ಥದಲ್ಲಿ ನಿಜವಾದ ಸಂಗೀತ ಹುಟ್ಟುವುದು ನಮ್ಮ ಜೀವನದ ಶ್ರುತಿ ಸೇರಿದಾಗ ಹೃದಯದ ತಂತಿಗಳು ಒಂದೇ ಶ್ರುತಿಯಲ್ಲಿ ಅಪಸ್ವರವಿಲ್ಲದೆ ಮಿಡಿದಾಗ.'

ನಮ್ಮ ಇಡೀ ಬದುಕು ಒಂದು ಮಧುರ ಗಾನದಂತಿರಬೇಕು. ಸತ್ಯ ಧರ್ಮಗಳೆಂಬ

ಶೀಲಗಳಲ್ಲದೆ ಇದನ್ನು ಸಾಧಿಸಲು ಸಾಧ್ಯವಿಲ್ಲ. ಜೀವನ ಸಂಗೀತಮಯ ಆಗಬೇಕಾದರೆ ನಾವು ದೇವರಲ್ಲಿ ಒಂದಾಗಬೇಕು ಈ ದಿವ್ಯಕಲೆಯ ಆಳವಾದ ಅರ್ಥವನ್ನು ಅರಿಯದ ಪಕ್ಷದಲ್ಲಿ, ನಾನು ಅಂತಹ ವಿದ್ಯೆಗೆ ಬೆಲೆ ಕೊಡುವುದಿಲ್ಲ.

ಗಾಂಧಿಯವರು ಸಂಗೀತವನ್ನು ಒಂದು ಪವಿತ್ರ, ಶಕ್ತ ಕಲೆಯಾಗಿ ಪರಿಗಣಿಸಿದ್ದರು. ಭಾವನೆಗಳನ್ನು ಹತೋಟಿಯಲ್ಲಿಡುವ ಹಾಗೂ ಬದಲಿಸುವ ಶಕ್ತಿ ಅದಕ್ಕಿದೆ ಎಂದು ನಂಬಿದ್ದರು.

ಅಕ್ಟೋಬರ್ 20, 1917ರಲ್ಲಿ ಬ್ರೋಚ್‌ನಲ್ಲಿ ನಡೆದ ದ್ವಿತೀಯ ಗುಜರಾತಿ ಶಿಕ್ಷಣ ಸಮ್ಮೇಳನದಲ್ಲಿ ಮಾತನಾಡುತ್ತಾ, ಅನೇಕ ವೇಳೆ ಒಂದು ದೊಡ್ಡ ಒಕ್ಕೂಟದಲ್ಲಿ ಗಲಭೆ, ಅಶಾಂತಿಯನ್ನು ಕಾಣುತ್ತೇವೆ. ಒಂದು ರಾಷ್ಟ್ರಗೀತೆಯನ್ನು ಒಟ್ಟಿಗೆ ಹಾಡಿದರೆ ಇದನ್ನು ಹತೋಟಿಗೆ ತರಬಹುದು. ಅಂಬಿಗರು ಹಾಗೂ ಇತರ ಕೆಲಸಗಾರರು ಹರಹರ ಮಹಾದೇವ ಅಲಬೇಲಾ ಎಂದೆಲ್ಲಾ ಹಾಡುವಾಗ ಅವರಿಗೆ ಕೆಲಸ ಮಾಡುವ ಹುಮ್ಮಸ್ಸು ದೊರೆಯುತ್ತದೆ. ಇಲ್ಲಿ ನಾವು ಸಂಗೀತದ ಶಕ್ತಿಯನ್ನು ಕಾಣುತ್ತೇವೆ ಎಂದಿದ್ದರು.

ಒಮ್ಮೊಮ್ಮೆ ಅವರು ಸಂಗೀತವೆಂದರೆ ಲಯ, ಶಿಸ್ತು; ಇದರ ಪ್ರಭಾವ ಎರಡು ವಿಧ. ವಿದ್ಯುಚ್ಛಕ್ತಿಯಂತೆ ಚುರುಕು ಹಾಗೂ ಹಿತವೂ ಕೂಡ. ಆದರೆ ದುಃಖವಶಾತ್ ಇದನ್ನು ನಾವು ಮೂಲೆಗೊತ್ತಿದ್ದೇವೆ. ಇದಕ್ಕೆ ದೊರಕಲೇ-ಬೇಕಾದ ರಾಷ್ಟ್ರೀಯ ಸ್ಥಾನ ನಿಜವಾದ ಅರ್ಥದಲ್ಲಿ ದೊರೆತಿಲ್ಲ ಎನ್ನುತ್ತಿದ್ದರು.



**ಸಂಗೀತದೊಲುಮೆ – ನಿಲುಮೆ**

**ಬದುಕಿನ ಸಂಗೀತವನ್ನು ಅಳವಡಿಸುತ್ತಾ ನಿಜವಾದ ಸಂಗೀತ ಖಾದಿಯಲ್ಲೂ, ಚರಕದಲ್ಲೂ ಅಡಗಿದೆ ಎಂದರು ಮಹಾತ್ಮ ನಮ್ಮ ದೇಶದ ಕೋಟ್ಯಂತರ ಜನ ಒಂದೇ ದನಿಯಲ್ಲಿ ಮಾತನಾಡಲು ತೊಡಗಿದಾಗ ಮಾತ್ರ ನಮ್ಮ ಸಂಗೀತ ಸಂಶೋಧನೆಗೆ ಗೆಲುವು. ಮಹಾತ್ಮ ಗಾಂಧಿಯವರ ಪ್ರಿಯ ರಾಗಗಳು ಸತ್ಯ ಮತ್ತು ಅಹಿಂಸೆ. ಅವರ ಆಲೋಚನೆಗಳು ಸ್ವದೇಶಿ ಹಾಗೂ ಖಾದಿ. ಅವರ ವಾದಿ ಸಂವಾದಿ ಸ್ವರಗಳು ಬ್ರಹ್ಮಚರ್ಯ ಮತ್ತು ನಿಸ್ವಾರ್ಥ, ಅಸತ್ಯ ಮತ್ತು ಹಿಂಸೆ ಅವರ ವರ್ಜ್ಯಸ್ವರಗಳು. ಚರಕದೊಂದಿಗಿನ ರಿಯಾಜ್ (ಸಂಗೀತಾಭ್ಯಾಸ) ಅವರು ಒಂದು ದಿನವೂ ತಪ್ಪಿಸುತ್ತಿರಲಿಲ್ಲ!**

ಡಿಸೆಂಬರ್ 22, 1945 ರಂದು ರಾಷ್ಟ್ರಕವಿ ರವೀಂದ್ರನಾಥ ಟ್ಯಾಗೋರ್ ಅವರಿಗೆ ಬರೆದ ಪತ್ರದಲ್ಲಿ ಒಂದು ಸಲಹೆ ನೀಡಿದ್ದರು. ಬಂಗಾಲಿ ಸಂಗೀತದೊಂದಿಗೆ ಹಿಂದೂಸ್ಥಾನಿ ಸಂಗೀತವನ್ನೂ, ಪಾಶ್ಚಾತ್ಯ ಸಂಗೀತವನ್ನೂ ಶಾಂತಿನಿಕೇತನದಲ್ಲಿ ಕಲಿಸಿಕೊಡುವಂತೆ ಸೂಚಿಸಿದರು. ಇದರಿಂದ ಗಾಂಧೀಜಿಯವರಿಗೆ ಸಂಗೀತದ ವಿವಿಧ ಶಾಖೆಗಳ ಬಗ್ಗೆ ಇದ್ದ ಜ್ಞಾನ ಅರಿವಾಗುತ್ತದೆ.

ಬೆಳಗಾವಿಯಲ್ಲಿ 1924ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಚರಕದ ಹಜಾರದ ಬಳಿಯೇ ಒಂದು ಸಂಗೀತದ ಹಜಾರವನ್ನೂ ನಿರ್ಮಿಸಲಾಗಿತ್ತು. ವಿಶೇಷವಾಗಿ ಸಂಗೀತ ಕಛೇರಿಗಳನ್ನು ನಡೆಸಲಿಕ್ಕಾಗಿಯೇ ಇದನ್ನು ನಿರ್ಮಿಸಿದ್ದರು ಗಾಂಧೀಜಿ. ಅವರಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಆಸಕ್ತಿಯಿತ್ತೆಂಬುದು ಇದೇ ವೇದಿಕೆಯಲ್ಲಿ ಮೈಸೂರಿನ ವೀಣೆ ಶೇಷಣ್ಣ ಹಾಗೂ ಅವರಂತಹ ಪ್ರಸಿದ್ಧ ವಿದ್ವಾಂಸರ ಕಛೇರಿಯನ್ನು ಏರ್ಪಡಿಸಿ ಗೌರವಿಸಿದ್ದರಿಂದ ವೇದ್ಯ-ವಾಗುತ್ತದೆ. ಗಾಂಧೀಜಿಯವರು ಸಬರಮತಿ ಸತ್ಯಾಗ್ರಹ ಆಶ್ರಮದಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಭಜನಾವಳಿ ಏರ್ಪಡಿಸುತ್ತಿದ್ದರು. ಆ ಭಜನಾವಳಿಯನ್ನು ನಿತಿವಂ ಕಾವ್ಯೋ ಎಂಬ ಪುಸ್ತಕವಾಗಿ ಪ್ರಕಟಿಸಿದ್ದರು. ರಾಮಧುನ್ ಕೂಡ ನಿತ್ಯ ಪ್ರಾರ್ಥನೆಯಲ್ಲಿ ಸೇರಿತ್ತು. ಪ್ರಸಿದ್ಧ ಹಿಂದೂಸ್ತಾನಿ ಸಂಗೀತಗಾರರಾದ ಪಂಡಿತ್ ನಾರಾಯಣ ಖರೆ, ಮಾಮಾ ಫಡ್ಕೆ, ವಿನೋಬಾ ಭಾವೆ ಮತ್ತು ಬಾಲ್ಕೋಬಾ ಭಾವೆ ಸಬರಮತಿ ಆಶ್ರಮ-ದಲ್ಲಿದ್ದರು. ಅವರ ಆಶ್ರಮದ ಭಜನಾವಳಿಯಲ್ಲಿ ಮತ, ಪ್ರಾಂತ ಭಾಷೆ, ಜಾತಿಗಳ ಬೇಧವೇ ಇರಲಿಲ್ಲ. ಪ್ರೀತಿ, ಮಾನವಿಯತೆ, ಶ್ರದ್ಧೆ, ನಂಬಿಕೆಗಳೆಂಬ ವಿವಿಧ ವರ್ಣ, ಸುವಾಸನೆಗಳುಳ್ಳ ಪುಷ್ಪಗಳ ಸುಂದರ ಹೂಗುಚ್ಛವೇ ಆಗಿತ್ತು ಅವರ ಈ ಸಂಗೀತ ಗುಚ್ಛ.

ಗಾಂಧೀಜಿಯವರಿಗೆ ಬಲು ಪ್ರಿಯವಾದವು ಮೀರಾಬಾಯಿಯ ಭಜನ್‌ಗಳು. ಅದರಲ್ಲೂ ಚಾಕರ್ ರಾಕೋಜಿ ಎಂಬುದನ್ನು 1924ರಲ್ಲಿ ದಿಲೀಪ್ ಕುಮಾರ್ ರಾಯ್‌ರವರು ಸಬರಮತಿ ಆಶ್ರಮದಲ್ಲಿ ಸಿತಾರ್‌ನಲ್ಲಿ ನುಡಿಸಿದರೆಂದು ಮಹದೇವ ದೇಸಾಯಿ-ಯವರು ತಮ್ಮ ದಿನಚರಿ ಪುಸ್ತಕದಲ್ಲಿ ಬರೆದಿದ್ದಾರೆ.

ಎಂ.ಎಸ್.ಸುಬ್ಬುಲಕ್ಷ್ಮೀಯವರು ದರ್ಬಾರಿ ಕಾನಡದಲ್ಲಿ 'ಹರೀ ತುಮ್ ಹರೋ' ಎಂಬ ಮೀರಾ ಭಜನೆಯನ್ನು ಗಾಂಧೀಜಿಯವರಿಗಾಗಿಯೇ ಹಾಡಿದ್ದರು. ಇಂದಿರಾ ದೇವಿಯವರ ರಚನೆ 'ಗುಂಗುರು ಬಾಂದ್ ಪಗ್ ಆಯಿ ಮೀರಾ' ಎಂಬ ಸಿಂಧುಭೈರವಿ ರಾಗದ ಭಜನ್‌ನ್ನು ಗಾಂಧೀಯವರಿಗಾಗಿ ಹಾಡಿದರು. ಅಲ್ಲದೆ ತುಲಸೀದಾಸರ 'ತೂ ದಯಾಲು ದೀನ ಬಂಧು ದಿನ್ ದಯಾಲ್ ಗೋಪಾಲ್, ರಘುಪತಿ ರಾಘವ ರಾಜಾರಾಮ್, ವೈಷ್ಣವ ಜನತೋ' ಮುಂತಾದವು ಗಾಂಧೀಜಿಯವರು ಪ್ರೀತಿಯಿಂದ ಪದೇ ಪದೇ ಕೇಳುತ್ತಿದ್ದ ಭಜನ್‌ಗಳು.

ಮೀರಾ ಭಜನ್‌ಗಳ ಬಗ್ಗೆ ಹೇಳುತ್ತಾ ಗಾಂಧೀಜಿಯವರು ದಿಲೀಪ್ ರಾಯ್

ಅವರೊಂದಿಗಿನ ಸಂದರ್ಶನದಲ್ಲಿ ಹೀಗೆ ಮಾತನಾಡಿದ್ದರೆ: 'ಆಕೆಯ ಭಜನ್‌ಗಳು ಸುಂದರವಾಗಿ ಇರದಿರಲು ಹೇಗೆ ಸಾಧ್ಯ? ಅವರ ಅನೇಕ ಭಜನ್‌ಗಳು ನನಗೆ ತುಂಬಾ ಪರಿಚಿತ. ನನ್ನ ಆಶ್ರಮದಲ್ಲಿ ಅದನ್ನು ಭಕ್ತಿ ಪ್ರೀತಿಗಳಿಂದ ಪದೇ ಪದೇ ಹಾಡುತ್ತಾರೆ. ಒಂದು ಅನನ್ಯ ಆನಂದವನ್ನು ನಾನು ಆಕೆಯ ಭಜನ್‌ಗಳ ಶ್ರವಣದಿಂದ ಅನುಭವಿಸಿದ್ದೇನೆ. ಸನ್ಯಾಸತ್ವವು ಕಲೆಗಳಲ್ಲಿಯೇ ಅತ್ಯಂತ ಉನ್ನತವಾದದ್ದು. ಭಾರತೀಯ ಧಾರ್ಮಿಕ ಜೀವನ ಮೀರಾಬಾಯಿಯ ಸಂಗೀತವಿಲ್ಲದೆ ಅಭ್ಯುದಯವಾಗಿರಲು ಸಾಧ್ಯವೇ ಇಲ್ಲ. ಒಂದು ಕಲೆಯನ್ನು ಪ್ರಶಂಸಿಸಲು ಅದರ ತಾಂತ್ರಿಕತೆಯ ಅರಿವು, ತರಬೇತಿಯ ಅಗತ್ಯವಿಲ್ಲ. ಅದನ್ನು ಅನುಭವಿಸುವ ಹೃದಯವಿರಬೇಕಷ್ಟೆ. ಕಲೆಗೆ ಬದುಕಿನಲ್ಲಿ ಒಂದು ಸ್ಥಾನವಿದೆ. ಆದರೆ ಕಲೆಯೇ ಜೀವನವಲ್ಲ. ಬದಲಿಗೆ ಜೀವನವೆಂಬುದು ಒಂದು ಕಲೆ'. ಇದು ಗಾಂಧಿಯವರ ನಿಲುವು. ಇಂದಿನ ಸಂಘರ್ಷಮಯ ಯುಗದಲ್ಲಿ ಮನುಜಜನ ಉಳಿವು ಹಾಗೂ ಬೆಳವಣಿಗೆಗೆ ಗಾಂಧಿ ತತ್ವ ಸೂಕ್ತ ಮಾರ್ಗ. ಕಲೆ ಮತ್ತು ಸಂಗೀತದ ಕುರಿತಾದ ಅವರ ನಿಲುವು, ಮಾನವ ಜೀವನದ ಅಭ್ಯುದಯಕ್ಕೆ ಅತ್ಯಂತ ಪ್ರಸ್ತುತ. ಅವರು ತಮ್ಮ ಆತ್ಮಚರಿತ್ರೆಯಲ್ಲಿ ನನ್ನ ಬದುಕೇ ನನ್ನ ಸಂದೇಶ ಎಂದಿದ್ದಾರೆ. ಅಷ್ಟಕ್ಕೂ ಅವರ ಇಡೀ ಬದುಕೇ ಒಂದು ಲಯಬದ್ಧ ಶ್ರುತಿಬದ್ಧ ಸಂಗೀತವಾಗಿತ್ತಲ್ಲವೆ?!

**ಗಾಂಧೀಜಿಯವರನ್ನು ನಾವೆಲ್ಲ ಒಬ್ಬ ಮಹಾತ್ಮರನ್ನಾಗಿ ಅರಿತಿದ್ದೇವೆ. ಅಂದರೆ ಸತ್ಯಾನ್ವೇಷಕರಾಗಿ, ಅಹಿಂಸಾ ತತ್ವದ ಪರಿಶೋಧಕರಾಗಿ, ಸಂತರಾಗಿ, ಒಬ್ಬ ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಹಾಗೂ ಮಾನವ ಜನಾಂಗ, ಸಮಾಜ ಮತ್ತು ದೇಶದ ಬಗ್ಗೆ ಅಸಾಧ್ಯ ಕಾಳಜಿಯಿರುವ ಒಂದು ದಿವ್ಯಾತ್ಮವಾಗಿ ಕಂಡಿದ್ದೇವೆ. ಆದರೆ ಅವರೊಬ್ಬ ವಿಶಿಷ್ಟ ಸಂಗೀತಗಾರರೆಂಬುದು ಅನೇಕರಿಗೆ ತಿಳಿದಿಲ್ಲ!**

**ಕೃಪೆ : ಪ್ರಜಾವಾಣಿ**



## ಗಾಂಧಿ ತಾತ–ಮೊಮ್ಮಗ ಕನೂ

– ಲಿಂಗಣ್ಣ ಬಂಧುಕಾರ್

**ಪಾಪು** – ಗಾಂಧಿತಾತ ಕೋಲನೂರಿ
ಎತ್ತ ಹೊರಟೆ ನೀನು
**ಪಾಪು** – ಅಯ್ಯೋ ತಾತ ನೀನು ಕರೆಯೆ
ಬಾರದಿಹನೆ ನಾನು!
**ಪಾಪು** – ಏನು ತಾತ ನನ್ನ ಕೈಲಿ
ಅಷ್ಟು ಬಲವು ಇರುವುದೆ?
**ಪಾಪು** – ಓಹೋ! ಗೊತ್ತು; ಕೇಳಿ ಬಲ್ಲೆ
ಅಜ್ಜಿಯೊರೆದ ಕತೆಯಲಿ
ರಾಮ ಸೇತು ಕಟ್ಟುವುದಕೆ
ತಂದು ಸುರಿದ ಮರಳಲಿ
**ಪಾಪು** – ನಾನು ಮುಂದೆ ನೀನು ಹಿಂದೆ
ಕೋಲ ನೀಡು ತಾತ !
ದೇಶ ಸೇವೆ ದಾರಿ ತೋರಿ
ಮುಂದೆ ನಡೆಸು ತಾತ!

**ಬಾಪು** – ಬಾರೋ ಕಂದ ನಿನ್ನ ಜತೆಗೆ
ಆಟ ಆಡಲೇನು!
**ಬಾಪು** – ನೀನು ಬಂದರಾನೆ ಬಲವು
ನನಗೆ ಬಾರದೇನು?
**ಬಾಪು** – ರಾಮ–ಅಳಿಲು ಸೇವೆ ಗೈದ
ಕತೆಯು ನಿನಗೆ ತಿಳಿಯದೆ?
**ಬಾಪು** – ನೋಡು ಹೇಗೆ ತನ್ನ ಸೇವೆ
ಸಲಿಸಿತಲ್ಲ ಅಳಿಲು !
ನಾವು ಹಾಗೆ ಸೇವೆ ಸಲ್ಲಿಸಿ
ತೊಡೆವ ತಾಯ ಅಳಲು
**ಬಾಪು** – ಹಿರಿಯ ಕಿರಿಯ ಎಂಬುದಿಲ್ಲ
ಎಲ್ಲ ಜತೆಗೆ ಸಾಗುವ
ಬೆರಳ ತೋರಿ ಮೆಚ್ಚುವಂತೆ
ಕೂಡಿ ಬಾಳಿ ತೋರುವ!



**ಈ ಚಿತ್ರದಲ್ಲಿ ಕೋಲು ಹಿಡಿದು ಮಹಾತ್ಮ ಗಾಂಧಿಯವರ ಮುಂದೆ ಕರೆದೊಯ್ಯುತ್ತಿರುವ ಬಾಲಕ ಯಾರು ಬಲ್ಲಿರಾ? ಈತನೇ ಕನೂ ಗಾಂಧಿ. ಈ ಚಿತ್ರ 1934 ರಲ್ಲಿ ತೆಗೆದದ್ದು ಗಾಂಧಿಯೊಡನೆ ಜೂಹೂ ನದಿ ತೀರದಲ್ಲಿ ವಿಹರಿಸುತ್ತಿದ್ದಾಗ ತೆಗೆದ ಚಿತ್ರ. ಬಾಪೂಜಿ ಗುಂಡಿಗೆ ಬಲಿಯಾದಾಗ ಕನೂ ಗಾಂಧಿಗೆ 16 ವರುಷ. ಈತ ಗಾಂಧಿ ಮೊಮ್ಮಗ ಕನೂ ಗಾಂಧಿ ಗಾಂಧೀಜಿಯವರ 3ನೇ ಮಗ ರಾಮದಾಸ್ ಗಾಂಧಿಯ ಮಗ. ಕನೂ ಗಾಂಧಿಯನ್ನು 3 ವರ್ಷದಲ್ಲಿದ್ದಾಗಲೇ ತನ್ನ ಆಶ್ರಮಕ್ಕೆ ಪಡೆದವರು ಗಾಂಧಿ. ಈತನ ಪತ್ನಿ ಚಿವಾ. ಕರ್ನಾಟಕಕ್ಕೂ ಈ ದಂಪತಿಗಳು ಬಂದು ಹೋಗಿದ್ದರು.**



# ಗಾಂಧೀಜಿ ಆರೋಗ್ಯ ಸಂಹಿತೆ

– ಎನ್.ಲಕ್ಷ್ಮೀನಾರಾಯಣ

**ಆರೋಗ್ಯವೆಂದರೆ ಕೇವಲ ರೋಗ ಬಾರದಿರುವುದು ಮಾತ್ರವಲ್ಲ. ಯಾವುದಕ್ಕೂ ಯಾರ ಮೇಲೂ ಯಾವ ರೀತಿಯಲ್ಲೂ ಹೊರೆಯಾಗದೆ ಸ್ವತಂತ್ರವಾಗಿ ಸಾರ್ಥಕ ಜೀವನ ನಡೆಸುವುದು ಕೂಡಾ ಆಗಿದೆ. ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯ ಶೀಲನಾಗಿರುವ ಮನುಷ್ಯನು ವೈಯಕ್ತಿಕ , ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸುಖ ಪಡೆಯುವ ಹಿಸ್ಸೇದಾರ.**

**ಪು**ರುಷಾರ್ಥ ಸಾಧನೆ ಬದುಕಿನ ಬಹುಮುಖ್ಯ ಧ್ಯೇಯ. ನಾವೆಲ್ಲರೂ ಅರಿತಂತೆ ಪುರುಷಾರ್ಥಗಳು ನಾಲ್ಕು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಧರ್ಮವೆಂದರೆ ತನ್ನ ಕರ್ತವ್ಯ, ಕರ್ಮಗಳನ್ನು ಸುಮನಸ್ಸಿನಿಂದ, ವಿಚಲಿತಗೊಳ್ಳದೆ ನಿರ್ವಹಿಸುವುದು. ಅರ್ಥವೆಂದರೆ ಧನ, ಧಾನ್ಯ ಮುಂತಾದ ಲೌಕಿಕ ಸಂಪತ್ತನ್ನು ಪ್ರಾಮಾಣಿಕತೆಯಿಂದ ಸಂಪಾದಿಸುವುದು. ಕಾಮವೆಂದರೆ ನಮ್ಮ ಆಸೆ ಆಕಾಂಕ್ಷೆಗಳನ್ನು ನಿರುದ್ವಿಗ್ನ ಮನದಿಂದ ಇನ್ನೊಬ್ಬರಿಗೆ ಹಿಂಸೆಯಾಗದಂತೆ ಪೂರೈಸಿಕೊಳ್ಳುವುದು. ಮೋಕ್ಷವೆಂದರೆ ಪುನರ್ಜನ್ಮವನ್ನು ಪಡೆಯದಿರುವಂತೆ ಸತ್ ಸಾಧನೆ, ತಪಸ್ಸು ಮಾಡುವುದು. ಪುರುಷಾರ್ಥಗಳು ಒಂದಕ್ಕೊಂದು ಪೂರಕ ಹಾಗೂ ಪೋಷಕ. ಒಂದಿಲ್ಲದೆ ಇನ್ನೊಂದಕ್ಕೆ ಸ್ಥಾನಮಾನವಿಲ್ಲ. ಅರ್ಥವಿಲ್ಲ ಈ ನಾಲ್ಕನ್ನು ಪರಿಪೂರ್ಣವಾಗಿ ಅನುಷ್ಠಾನಗೊಳಿಸುವಲ್ಲಿ ಅದಮ್ಯ ಆಸಕ್ತಿ ಹೊಂದಿರುವುದೇ ಬದುಕಿನ ಹಿರಿಯ ಸಿರಿ. ಇದಕ್ಕೆ ಅತ್ಯಂತ ಅವಶ್ಯಕವಾಗಿ ಇರಬೇಕಾದ್ದು ಆರೋಗ್ಯ. 'ಶರೀರಮಾಧ್ಯಮಂ ಖಲು ಧರ್ಮಸಾಧನಂ.' ಕುಮಾರ ಸಂಭವ ದಲ್ಲಿ ಬರುವ ಕವಿರತ್ನ ಕಾಳಿದಾಸನ ಈ ನಾಣ್ಣುಡಿ ಸಾರ್ವಕಾಲಿಕ ಸತ್ಯ.

ಪುಣ್ಯ ಪುರುಷ ಗಾಂಧೀಜಿಯವರು ಸತ್ಯ, ಅಹಿಂಸೆ, ಪ್ರೇಮ, ಸ್ವಾವಲಂಬಿಭಾವ, ತ್ಯಾಗ, ಮಿತವ್ಯಯ, ದೇಶಭಕ್ತಿ, ದೇವರು, ಧರ್ಮ, ಪ್ರಾರ್ಥನೆ, ರಾಜತಂತ್ರ, ಆಹಾರ–ವಿಹಾರ, ಬ್ರಹ್ಮಚರ್ಯ, ಸತ್ಯಾಗ್ರಹ, ಉಪವಾಸ, ಸರಳ ಜೀವನ ಇವೇ ಮುಂತಾದ ಹತ್ತು ಹಲವು ವಿಷಯಗಳಲ್ಲಿ ಆಳವಾದ ಸಂಶೋಧನೆ, ಪ್ರಯೋಗಗಳನ್ನು ನಿರ್ವಹಿಸಿದರು. ಅದರ ಮಧುರ ಫಲವನ್ನು, ಬಹುಪಯೋಗಿ ಸತ್ವವನ್ನು ಲೋಕಕ್ಕೆ ವೇದ್ಯಪಡಿಸಿದರು. ಆರೋಗ್ಯಶಾಸ್ತ್ರ ಕುರಿತಾಗಿ ಅವರು ನಡೆಸಿದ ಸಂಶೋಧನೆ ಅಗಾಧ. ಆರೋಗ್ಯ ಬಗೆಗೆ ಯಾರಾದರೂ ಅಷ್ಟೊಂದು ಶ್ರಮ ವಹಿಸಿದವರು ಇದ್ದಾರೋ ಎಂಬುವುದು ತಿಳಿಯದು.

ತಮ್ಮ ಆರೋಗ್ಯದ ಬಗ್ಗೆ ಅಷ್ಟೆ ಅಲ್ಲದೆ ತಮ್ಮ ಒಡನಾಟದಲ್ಲಿದ್ದ ಯಾರದೇ ಆರೋಗ್ಯದ ವಿಷಯವಾಗಿ ಗಾಂಧೀಜಿ–ಯವರಿಗೆ ತುಂಬ ಕಳಕಳಿ, ಕಾಳಜಿ. ಅವರ ಆತ್ಮಕತೆ ಓದಿದ, ಕೇಳಿದ ಎಲ್ಲರೂ ಇದನ್ನು ಬಲ್ಲರು. ಸರ್ದಾರ್ ವಲ್ಲಭವಾಯಿ ಪಟೇಲ್, ಜಮ್ನಾಲಾಲ್ ಬಜಾಜ್, ಘನಶ್ಯಾಮದಾಸ್ ಬಿರ್ಲಾ ಇವರೆಲ್ಲರಿಗೂ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಕುರಿತು ಉಪಯುಕ್ತ ಮಾಹಿತಿ ಕೊಡುತ್ತಿದ್ದರು. ಸರ್ದಾರರರಿಗೆ ಒಮ್ಮೆ ಮಲಬದ್ಧತೆಯಿಂದ ಅಸ್ವಾಸ್ಥ್ಯ–ವುಂಟಾಗಿದ್ದಾಗ ಗಾಂಧೀಜಿಯವರು ತಿಳಿ ಹೇಳಿದ ಬಗೆ ಇಂತಿದೆ. 'ನೀವು ಕೆಲವು ದಿನಗಳ ಪರ್ಯಂತ ಹಣ್ಣಿನ ರಸವನ್ನೇ ಸೇವಿಸುವುದು ಕ್ಷೇಮಕರ. ಆಗ ಇತರ ಔಷಧಿಗಳೆಲ್ಲ ಅನವಶ್ಯಕವೆಂದು ನಿಮಗೆ ಅನುಭವಕ್ಕೆ ಬಂದೀತು. ನಿಮ್ಮ ಈ ತೊಂದರೆಗೆ 'ಎನಿಮಾ' ತೆಗೆದುಕೊಳ್ಳಬಹುದು. ಅಷ್ಟೇ ಅಲ್ಲದೆ ಈಗ ನೀವು ಕಮೋಡ್ ಬಳಸಿದರೆ ಈ ತೊಂದರೆ ಇನ್ನೂ ಉಲ್ಬಣವಾದೀತು ಗಾಂಧೀಜಿಯವರ ನುಡಿಯಂತೆ ನಡೆದ ಸರದಾರರು ಕೆಲವೇ ದಿನಗಳಲ್ಲಿ ಮಲಬದ್ದತೆಯಿಂದ ಮುಕ್ತರಾದರು.

ಜವಾಹ್ನಲಾಲ್ ಶೀತ ಪ್ರಕೃತಿಗೆ ಗಾಂಧೀಜಿಯವರ ಸೂತ್ರಗಳ ಹೀಗಿದ್ದವು: 'ರಾತ್ರಿಯ ವೇಳೆ ಶೀತಕ್ಕೆ ಭಯ ಪಡದಿರಿ. ಮೈ ಮುಚ್ಚಿ ಕುತ್ತಿಗೆಯವರೆಗೂ ಬೆಚ್ಚಗೆ ಹೊದ್ದುಕೊಂಡು, ಕಿವಿಮುಚ್ಚುವಂತೆ ತಲೆಗೆ ಬಟ್ಟೆ ಕಟ್ಟಿಕೊಂಡು ಮಲಗಿರಿ. ಶೀತವನ್ನು ಓಡಿಸಲು 24 ಗಂಟೆಗಳೂ ಶ್ವಾಸಕೋಶ–ಗಳನ್ನು ಪರಿಶುದ್ಧ ಗಾಳಿಯಿಂದ ತುಂಬಿಕೊಳ್ಳುವುದು ಅತ್ಯವಶ್ಯ. ಹೀಗೆ ರಾತ್ರಿ ಮಲಗಿ, ಮುಂಜಾನೆ ಎದ್ದ ನಂತರ ಶರೀರಕ್ಕೆ ಹಿತವಾಗುವ ರೀತಿಯಲ್ಲಿ ಬಯಲಿಗೆ ಬಂದು ಸೂರ್ಯಸ್ನಾನ ಮಾಡಿರಿ. ಹೀಗೆ 2–3 ತಿಂಗಳ ಕಾಲ ಈ ಪ್ರಕ್ರಿಯೆಯನ್ನು ಶ್ರದ್ಧೆಯಿಂದ ಅನುಸರಿಸಿದರೆ ನಿಮ್ಮ ಶೀತ ಪ್ರಕೃತಿಯಿಂದ ಪಾರಾಗಿ ಸಮಶೀತೋಷ್ಣ ಸ್ಥಿತಿಗೆ ಬರುತ್ತೀರಿ.







ಘನಶ್ಯಾಮದಾಸರ ಅಜೀರ್ಣ ವ್ಯಾಧಿಗೆ ಗಾಂಧೀಜಿಯವರ ಸಲಹೆ ಹೀಗಿತ್ತು. 'ದಿನಕ್ಕೆ ಮೂರು ಬಾರಿಗಿಂತ ಹೆಚ್ಚಿಗೆ ತಿನ್ನಬೇಡಿ. ವಿಶ್ರಾಂತಿ ತೆಗೆದುಕೊಳ್ಳುವಾಗ ಚಾಕಲೇಟ್ ತಿನ್ನುವ ಅಭ್ಯಾಸ ತ್ಯಜಿಸಿ. ಆ ವೇಳೆಯಲ್ಲಿ ಕಾಫಿ, ಚಹ ಸಹ ತೆಗೆದುಕೊಳ್ಳಬೇಡಿ. ಅರ್ಧ ಔನ್ಸ್ ಬೆಣ್ಣೆಯೊಂದಿಗೆ ಸುಟ್ಟ ರೊಟ್ಟಿ ತಿಂದರೆ ಹಾನಿಯಿಲ್ಲ. ಎಷ್ಟೇ ಅಜೀರ್ಣದ ಕಿರಿಕಿರಿಯಿದ್ದರೂ ನಿಯಮಿತವಾಗಿ ಸೇವಿಸುವ ಬೆಣ್ಣೆಯನ್ನು ಎಂದಿಗೂ ಬಿಡಬಾರದು. ಆದಷ್ಟು ಹಸಿ ತರಕಾರಿಗಳನ್ನು ತಿಂದರೆ ಜೀರ್ಣಶಕ್ತಿ ವೃದ್ಧಿಯಾಗುತ್ತದೆ. ಆಹಾರ ಸೇವಿಸಿದ ತಕ್ಷಣ ಮಲಗಬೇಡಿ ಅದು ಒಳ್ಳೆಯ ಅಭ್ಯಾಸವಲ್ಲ ಸ್ವಲ್ಪ ಹೊತ್ತಿನ ನಂತರ ಮಲಗಿ.

ಗಾಂಧೀಜಿಯವರಿಗೆ ಆಲೋಪತಿಯ ಔಷಧೋಪಚಾರದ ವಿಷಯದಲ್ಲಿ ಒಂದು ಬಗೆಯ ಭಯ ಇತ್ತು. ಇನಾಕ್ಯುಲೇಶನ್ ಮಾಡಿಸಿಕೊಳ್ಳುವುದಕ್ಕೆ ಒಪ್ಪುತ್ತಿರಲಿಲ್ಲ. ಇದರ ವಿಷಯವಾಗಿ ಅವರ ಸಮೀಪವರ್ತಿಗಳು ಸರಿಯಾಗಿ ತಿಳಿಹೇಳಿ ಅವರನ್ನು ಸುಮ್ಮನಾಗಿರಿಸಿದ್ದರು. ಒಮ್ಮೆ ಸರ್ದಾರರ ಆರೋಗ್ಯ ಕೆಟ್ಟು ಅವರು ಹೋಮಿಯೋಪತಿ ಚಿಕಿತ್ಸೆ ಮೊರೆ ಹೊಕ್ಕಾಗ 'ನಿಮಗೆ ಈ ಪದ್ಧತಿ ಗುಣ ಕಂಡರೆ ಅದರಲ್ಲಿ ನಂಗೂ ಸ್ವಲ್ಪ ನಂಬಿಕೆ ಬಂದೀತು. ಈ ತನಕವೂ ಚಿಕಿತ್ಸೆಯಲ್ಲಿ ನನಗೆ ನಂಬಿಕೆಯಿಲ್ಲ. ಏಕೆಂದರೆ ಅದನ್ನು ಬಲ್ಲ ಒಬ್ಬರಿಗೆ ನನ್ನ ಸ್ನೇಹಿತರೊಬ್ಬರನ್ನು ಒಪ್ಪಿಸಿದೆ. ಏನೂ ಪ್ರಯೋಜನವಾಗಲಿಲ್ಲ. ನಿಮ್ಮ ವಿಷಯದಲ್ಲಾದರೂ ಇದು ಯಶ ಕಾಣಲೆಂದು ನನ್ನ ಆಸೆ. ಇದರ ಅಭಿಮಾನಿಗಳು ಬಹಳ. ಸಿ.ಆರ್.ದಾಸ್, ಮೋತಿಲಾಲ್ ಜೀ, ಗುರುದೇವ ಟ್ಯಾಗೋರ್, ಲಕ್ಷ್ಮೀದಾಸ ಗಾಂಧಿ ಇವರೆಲ್ಲರೂ ಇದನ್ನು ತುಂಬಾ ನಂಬಿದ್ದಾರೆ, ಮೆಚ್ಚಿದ್ದಾರೆ. ಇದೇ ನನಗೆ ಅಚ್ಚರಿ. ಏನೇ ಆಗಲಿ, ಯಾರೇ ಆಗಲಿ, ಯಾವುದರಿಂದಲಾದರೂ ಸರಿ ಅನಾರೋಗ್ಯ ಕಳೆದು ಆರೋಗ್ಯವಂತರಾದರೆ ಅಷ್ಟೆ ಸಾಕು ನನಗೆ' ಎನ್ನುತ್ತಿದ್ದ ಗಾಂಧೀಜಿ ತಮ್ಮನ್ನೂ ಮಾತ್ರ ಬೆರಳೆಣಿಕೆಯಷ್ಟು ವೈದ್ಯರಿಗೆ ಒಳಪಡಿಸಿಕೊಂಡಿದ್ದರು.

ಉತ್ತಮ ಆರೋಗ್ಯವನ್ನು ತುಂಬು ಜೀವನೋತ್ಸಾಹದಿಂದ ಬದುಕಿ ಬಾಳಲು ಗಾಂಧೀಜಿ ವಿಧಿಸಿದ ನಿಯಮಗಳು ಅಮೋಘ. ಅವರು ನಿರೂಪಿಸಿದ ಆರೋಗ್ಯ ಸಂಹಿತೆಯ ಪ್ರಮುಖ ಸೂತ್ರಗಳು ಇಂತಿವೆ.

- ಬೇಗ ಮಲಗಿ ಬೇಗ ಏಳುವುದು
- ಸೋಮಾರಿತನ ತೊರೆದು ಕಾಯಕ ಹಾಗೂ ಬೌದ್ಧಿಕ ಶ್ರಮ ನಿರ್ವಹಣೆ
- ಅಂತರಂಗ ಹಾಗೂ ಬಹಿರಂಗ ಶುಚಿತ್ವಕ್ಕೆ ಆದ್ಯತೆ
- ದೇವರು, ಧರ್ಮ, ಗುರು ಹಿರಿಯರಲ್ಲಿ ಗೌರವ. ದೀನ ದಲಿತರನ್ನು ಮಾನವೀಯತೆಯಿಂದ ಕಾಣುವುದು ಉತ್ತಮ ಆರೋಗ್ಯಕ್ಕೆ ಪೂರಕ
- ದಿನಂಪ್ರತಿ ಮುಂಜಾನೆ ಒಂದರ್ಧ ತಾಸಿನ ಚುರುಕು ನಡೆ
- ಆಹಾರ ವಿಹಾರದೆಡೆ ಸಮಾನ ಗಮನ. ಆಹಾರ ಸೇವಿಸುವಾಗ ಮನಸ್ಸನ್ನು ಹಗುರವಾಗಿ ಇಟ್ಟುಕೊಳ್ಳಬೇಕು. ಹರುಷದಿಂದ ಇರಬೇಕು. ಉದ್ವಿಗ್ನತೆಗೆ ಎಡೆಕೊಡದೆ ಸಾವಧಾನವಾಗಿ ಸಂತೋಷದಿಂದ ಊಟ ಮಾಡಬೇಕು.
- ಮಂದಸ್ಮಿತರಾಗಿರುವುದನ್ನು ಕಲಿಯಬೇಕು. ಸ್ಥಿತಪ್ರಜ್ಞರಾಗಿರಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವು ನಮ್ಮ ಪ್ರಮುಖ ವೈರಿಗಳು. ಈ ವೈರಿಗಳನ್ನು ಸಾಧನೆಯಿಂದ, ಗುರುಹಿರಿಯರ ಮಾರ್ಗದರ್ಶನದಿಂದ ನಿರ್ವೀರ್ಯ-ಗೊಳಿಸಿಮಾನವರಾದ ನಾವು ದೇವ ಮಾನವರಾಗಬೇಕು. ಈ ವೈರಿಗಳನ್ನು ಹಾಗೆ ಬೆಳೆಯಬಿಟ್ಟರೆ ಶರೀರದಲ್ಲಿ ಇಲ್ಲಸಲ್ಲದ ರೋಗಗಳ ಹಾವಳಿ ತಪ್ಪಿದ್ದಲ್ಲ
- ಮದ್ಯಪಾನದಿಂದ, ಧೂಮಪಾನದಿಂದ ಶರೀರ ಮತ್ತು ಆತ್ಮಗಳು ಎಲ್ಲೆ ಮೀರಿದ ದುರ್ದೆಸೆಗೆ ಇಳಿಯುತ್ತವೆ.
- ಸಕ್ಕರೆ ಜೀರ್ಣವಾಗುವುದು ಕಷ್ಟವಾದ್ದರಿಂದ ಅದಕ್ಕೆ ಬದಲಾಗಿ ಬೆಲ್ಲ ಉಪಯೋಗಿಸಬೇಕು.
- ಕಾಫಿ, ಟೀ ಬದಲಾಗಿ ಹಾಲು ಮೈಗೆ ಒಳ್ಳೆಯದು.
- ಬಳಸುವ ತರಕಾರಿಗಳನ್ನು ಬಹುಮಟ್ಟಿಗೆ ಬೇಯಿಸದೆ ಹಸಿಯಾಗಿ ಅಥವಾ ಅರೆಬೆಂದಿದ್ದರೆ ಒಳ್ಳೆಯದು.
- ನೀರನ್ನು ಕುದಿಸಿ ಕುಡಿಯಬೇಕು.
- ಹಣ್ಣುಗಳ ಸೇವನೆ ಒಳ್ಳೆಯದು. ಮೊಸಂಬಿ, ದಾಳಿಂಬೆ, ಕಿತ್ತಳೆ, ದ್ರಾಕ್ಷಿ, ಪರಂಗಿ, ಹಲಸು, ಮಾವು, ಸೇಬು, ಬಾಳೆಹಣ್ಣು ಇವು ಉತ್ತಮ ಆರೋಗ್ಯಕ್ಕೆ ಅಗತ್ಯ.
- ಬೆಳಗಿನ ಹೊತ್ತು ಹಣ್ಣು ತಿನ್ನುವುದು ಚೆನ್ನ. ಮಧ್ಯಾಹ್ನದ ಊಟಕ್ಕೆ ಹಣ್ಣು ಬೆಲ್ಲ ತಿನ್ನುತ್ತಿದ್ದರು ಗಾಂಧೀಜಿ.
- ಯಾವುದೇ ಊಟದಲ್ಲಿ ಪೌಷ್ಠಿಕಾಂಶ-ವಿರುವ ಆಹಾರವನ್ನು ವಿವಿಧ ಬಗೆಯಲ್ಲಿ ಹೆಚ್ಚು ಬಳಸುವುದು ಸರಿಯಲ್ಲ ಎಂಬ ಅಮೆರಿಕನ್ನರ ವಾದವನ್ನು ಗಾಂಧೀಜಿ ಒಪ್ಪುತ್ತಿದ್ದರು.
- ಎಲ್ಲಕ್ಕಿಂತ ಮುಖ್ಯವಾಗಿ ಹೊಟ್ಟೆಯು ಅರ್ಧ ತುಂಬಿದ ಕೂಡಲೇ ಆಹಾರ ಸೇವನೆಯನ್ನು ನಿಲ್ಲಿಸಬೇಕು.

**(ಡಾ.ಬೈರಮಂಗಲ ರಾಮೇಗೌಡ ಸಂಪಾದಿಸಿರುವ ಗಾಂಧಿ ಬದುಕು ಮತ್ತು ಚಿಂತನಾತ್ಮಕ ಬರಹಗಳ ಸಂಕಲನ ಸರ್ವೋದಯ ದಿಂದ ಆಯ್ದಭಾಗ.)**

**ಕೃಪೆ : ವಿಶ್ವವಾಣಿ**


ಬಮೂಲ್
ನಂದಿನಿ
ಲಕ್ಷಾಂತರ ಜನರ ಅಚ್ಚುಮೆಚ್ಚಿನ ಹಾಲು ಹಾಗು ಹಾಲಿನ ಉತ್ಪನ್ನಗಳು
Nandini Naturally Nutritious
ಚೀಸ್ ಶೀಘ್ರದಲ್ಲೇ ಮಾರುಕಟ್ಟೆಗೆ
70ಕ್ಕೂ ಹೆಚ್ಚು ರುಚಿಕರವಾದ ಡೇರಿ ಉತ್ಪನ್ನಗಳು
ಬೆಂಗಳೂರು ಸಹಕಾರ ಹಾಲು ಒಕ್ಕೂಟ
ಜೆ.ಟಿ. ಗೋಪಾಲ್, ವ್ಯವಸ್ಥಾಪಕ ನಿರ್ದೇಶಕರು
Our Toll Free No.1800 425 6797. Website. www.bamulnandini.coop



**ಡಾ.ಶಾಮನೂರು ಶಿವಶಂಕರಪ್ಪ**
ಗೌರವ ಕಾರ್ಯದರ್ಶಿಗಳು
ಬಾಪೂಜಿ ವಿದ್ಯಾಸಂಸ್ಥೆ
ಶಾಸಕರು, ಮಾಜಿ ಸಚಿವರು



**ಎಸ್.ಎಸ್.ಮಲ್ಲಿಕಾರ್ಜುನ್**
ಗೌರವ ಜಂಟೀ ಕಾರ್ಯದರ್ಶಿಗಳು
ಬಾಪೂಜಿ ವಿದ್ಯಾಸಂಸ್ಥೆ
ಮಾಜಿ ಸಚಿವರು

# ಬಾಪೂಜಿ ವಿದ್ಯಾಸಂಸ್ಥೆ


ಪಿ.ಜೆ.ಬಡಾವಣೆ, ದಾವಣಗೆರೆ–577 002
ದೂರವಾಣಿ : (08192) 251302, 250659, 253550, 230236
ಇಮೇಲ್ : bea_dvg@hotmail.com


ಮಧ್ಯ ಕರ್ನಾಟಕದ ಪ್ರಸಿದ್ಧ ಶಿಕ್ಷಣ ಕೇಂದ್ರವಾದ ದಾವಣಗೆರೆಯಲ್ಲಿ ಪ್ರಮುಖ ವಿದ್ಯಾಸಂಸ್ಥೆಗಳಲ್ಲೊಂದಾಗಿ ಕಳೆದ 60 ವರ್ಷಗಳಿಂದ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿರುವ **ಬಾಪೂಜಿ ವಿದ್ಯಾಸಂಸ್ಥೆ**ಯು ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ನರ್ಸಿಂಗ್, ಫಾರ್ಮಸಿ, ಪಾಲಿಟೆಕ್ನಿಕ್ ಕೋರ್ಸ್‌ಗಳ ಜೊತೆಗೆ ಕಾನೂನು, ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳನ್ನೊಳಗೊಂಡ ಪದವಿ ಮತ್ತು ವಿವಿಧ ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ವಸತಿ ನಿಲಯಗಳನ್ನೊಳಗೊಂಡಂತೆ ಒಟ್ಟು 53 ಅಂಗ ಸಂಸ್ಥೆಗಳ ಮೂಲಕ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ದಿಟ್ಟ ಹೆಜ್ಜೆಯಿಡುತ್ತಿರುವ ಸಂಸ್ಥೆ.

## ಆಡಳಿತ ಮಂಡಳಿ



ಆರ್.ರಮಾನಂದ್
ಅಧ್ಯಕ್ಷರು



ಎ.ಎಸ್.ವೀರಣ್ಣ
ಸದಸ್ಯರು



ಎಸ್.ಎಸ್.ಜಯಣ್ಣ
ಸದಸ್ಯರು



ಕಿರುವಾಡಿ ಗಿರಿಜಮ್ಮ
ಸದಸ್ಯರು




# ಗಾಂಧಿ ಸಿನಿಮಾ

– ಬಿ.ಎಂ.ಹನೀಫ್

**ಸಿನಿಮಾ ಅಂದರೆ ಡ್ರಾಮಾ. ಸಿನಿಮಾ ಅಂದರೆ ರೋಮಾಂಚನ. ಗಾಂಧೀಜಿಯ ಜೀವನದಲ್ಲಿ ಅದೆಷ್ಟೊಂದು ನಾಟಕೀಯ ಘಟನೆಗಳಿವೆ, ಅದೆಷ್ಟೊಂದು ರೋಮಾಂಚಕ ಸಂಗತಿಗಳಿವೆ! ಹೀಗೆ ನೋಡಿದರೆ ಗಾಂಧಿ ನಮ್ಮ ಚಿತ್ರ ನಿರ್ದೇಶಕರನ್ನು ಇನ್ನಷ್ಟು ಕಾಡಬೇಕಿತ್ತು. ಭಾರತೀಯ ಭಾಷೆಗಳಲ್ಲಿ ಗಾಂಧಿಯನ್ನು ಕುರಿತು ಸಾಕಷ್ಟು ಸಿನಿಮಾಗಳು ಬಂದಿಲ್ಲವೆಂದೇ ಹೇಳಬೇಕು. ಇಡೀ ಜಗತ್ತಿನಲ್ಲೇ ಅತ್ಯಧಿಕ ಸಂಖ್ಯೆಯ ಸಿನಿಮಾಗಳನ್ನು ಮಾಡುವ ದೇಶ ನಮ್ಮದು. ಸಾವಿನ ಬಳಿಕವೂ ಇಡೀ ದೇಶದ ಅಂತರಾತ್ಮವನ್ನು ಕಾಡುತ್ತಿರುವ ವ್ಯಕ್ತಿತ್ವವದು. ಪೋಸ್ಟರ್‌ನಿಂದ ಗಾಂಧಿಯ ರಕ್ತ ಸೋರುವ ಕ್ರಿಯೆ ನಮ್ಮನ್ನು ಗಾಢವಾಗಿ ತಟ್ಟದ ಕಾಲಘಟ್ಟವನ್ನು ತಲುಪಿರುವ ನಾವು, ಗಾಂಧಿಯ ಕುರಿತು ಇನ್ನಷ್ಟು ಸಿನಿಮಾಗಳನ್ನು ಮಾಡಬೇಕಾದ ಅಗತ್ಯವಿದೆ. ಹೊಸ ತಲೆಮಾರು ಪ್ರೀತಿಯಿಂದ ಅಪ್ಪಿಕೊಂಡಿರುವ ಹೊಸ ತಂತ್ರಜ್ಞಾನದ ಮೂಲಕ ಗಾಂಧಿಯನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳುವುದು ಸುಲಭ.**

ಇಳಿಬಿದ್ದ ಗಡ್ಡ, ಕೆದರಿದ ಕೂದಲು, ಕೊಳಕು ಬಟ್ಟೆ, ಅರೆಪ್ರಜ್ಞೆಯಲ್ಲಿ ಮಲಗಿದ್ದ ವ್ಯಕ್ತಿಯೊಬ್ಬನನ್ನು ಸ್ಟ್ರೆಚರ್ ನಲ್ಲಿ ತಂದು ಅಲ್ಲಿ ಮಲಗಿಸಲಾಗುತ್ತದೆ. ಅದು ಪೊಲೀಸ್ ಠಾಣೆ. ಗ್ರ್ಯಾಂಟ್ ರೋಡ್ ರೈಲು ನಿಲ್ದಾಣದ ರಸ್ತೆ ಪಕ್ಕ ಬಿದ್ದುಕೊಂಡಿದ್ದ ಸಾಬ್ ಎನ್ನುತ್ತಾನೆ ಕರೆತಂದ ಕಾನ್ಸ್‌ಟಬಲ್. ತನಿಖಾಧಿಕಾರಿ ವಿಚಾರಿಸುತ್ತಾನೆ. ಕ್ಯಾ ನಾಮ್ ಹೈ ತುಮಾರಾ ಬಾಪ್ ಕಾ..? ತುಟಿಗಳಷ್ಟೆ ಅಲ್ಲಾಡುತ್ತವೆ, ಮಾತುಗಳು ಹೊರಬರುವುದಿಲ್ಲ. ತನಿಖಾಧಿಕಾರಿ ಗಟ್ಟಿಯಾಗಿ ಹೇಳುತ್ತಾನೆ ಕೋಶಿಶ್ ಕರೋ.. ಮಲಗಿದ್ದ ವ್ಯಕ್ತಿ ಅಸ್ಪಷ್ಟವಾಗಿ ಹೇಳುತ್ತಾನೆ ಮಹಾತ್ .. ಮಹಾತ್ಮ ಗಾಂಧೀ... 2007ರಲ್ಲಿ ಬಿಡುಗಡೆಯಾದ ಗಾಂಧಿ ಮೈ ಫಾದರ್ ಚಿತ್ರದ ಮೊದಲ ದೃಶ್ಯವದು. ಗಾಂಧೀಜಿಯ ಮಗ ಹರಿಲಾಲ್ ಪಾತ್ರವದು. (ಅನಿಲ್ ಕಪೂರ್ ನಿರ್ಮಾಣ, ಫಿರೋಜ್ ಅಬ್ಬಾಸ್ ಖಾನ್ ನಿರ್ದೇಶನ) ಗಾಂಧೀಜಿಯ ಫೋಟೊಗೆ ಸಂಘಟನೆಯೊಂದರ ನಾಯಕಿ ಬಹಿರಂಗವಾಗಿ ಪಿಸ್ತೂಲ್‌ನಿಂದ ಶೂಟ್ ಮಾಡಿ ನೆಲದಲ್ಲಿ ತೊಟ್ಟಿಕ್ಕಿಸುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ವೈರಲ್ ಆದ ಬಳಿಕ, ಹಳೆಯ ಸಿನಿಮಾದ ಆ ದೃಶ್ಯ ಮತ್ತೆ ನೆನಪಾಯಿತು. ತಾನು ಬದುಕಿ ಬಾಳಿದ ಇಡೀ ಶತಮಾನವನ್ನು ಪ್ರಭಾವಿಸಿದ ಮಹಾತ್ಮನನ್ನು ಈಗ ಈ ಶತಮಾನವೂ ಪದೇಪದೇ ನೆನಪಿಸಿಕೊಳ್ಳುತ್ತಿದೆ. ಆದರೆ, ನೆನಪಿಸಿಕೊಳ್ಳುವ ವಿಧಾನ ಮಾತ್ರ ಬೇರೆ ಬೇರೆ.ಸಬರಮತಿ ಆಶ್ರಮದ ಎದುರು ಗಾಂಧೀಜಿಯ ರಕ್ತ ನೆಲಕ್ಕೆ ತೊಟ್ಟಿಕ್ಕಿ 70 ವರ್ಷಗಳಾದ ಬಳಿಕವೂ ಕೆಲವರಿಗೆ ಗಾಂಧೀಜಿಯ ರಕ್ತವನ್ನು ಮತ್ತೆ ಮತ್ತೆ ನೋಡಬೇಕೆನ್ನಿಸುತ್ತದೆ. ಆದರೆ, ಇಂತಹ ರಕ್ತಮನಸ್ಕತೆಯನ್ನು ಪ್ರತಿರೋಧಿಸುವ ಮನಸ್ಸುಗಳು ಮಾತ್ರ ಇವತ್ತು ಚೆಲ್ಲಾಪಿಲ್ಲಿಯಾಗಿವೆ. ಪ್ರತಿರೋಧದ ಧ್ವನಿಗಳಿದ್ದರೂ ಅದು ಆ ಸಿನಿಮಾದಲ್ಲಿ ಹರಿಲಾಲನ ಧ್ವನಿಯಂತೆ ಅರೆಪ್ರಜ್ಞಾವಸ್ಥೆಯಲ್ಲಿವೆ, ಅಸ್ಪಷ್ಟವಾಗಿವೆ.

ಗಾಂಧೀಜಿಯವರು ಸಿನಿಮಾ ನೋಡ್ತಿದ್ರಾ? ಒಂದು ಸಿನಿಮಾದ ಕೆಲವು ರೀಲ್‌ಗಳನ್ನು ನೋಡಿದ್ದರಂತೆ. 1943ರಲ್ಲಿ ಬಂದ ವಿಜಯ್‌ಭಟ್ ಅವರ ರಾಮ್ ರಾಜ್ಯ ಎನ್ನುವ ಸಿನಿಮಾವದು. ಸಿನಿಮಾವನ್ನು ಅವರು ಕೆಡುಕು ಉಂಟು ಮಾಡುವ ಮಾಧ್ಯಮ ಎಂದು ಭಾವಿಸಿದ್ದರು. ಅದೇನಾದರೂ ಒಳ್ಳೆಯದು ಮಾಡಿದ್ದರೆ ಸಾಬೀತಾಗಬೇಕಾಗಿದೆ ಎನ್ನುವ ಅವರ ಅಭಿಪ್ರಾಯವೂ ದಾಖಲಾಗಿದೆ. ಅಪ್ಪನ ಬಳಿ ಸುಳ್ಳು ಹೇಳಿ ಪಶ್ಚಾತ್ತಾಪ ಪಟ್ಟ ಬಳಿಕ, ಅವರು ಬದುಕಿನುದ್ದಕ್ಕೂ ಸತ್ಯವನ್ನೇ ಉಸಿರಾಡಬೇಕೆಂದು ನಿರ್ಧರಿಸಿದ್ದರು. ಸತ್ಯಹರಿಶ್ಚಂದ್ರ ಅವರ ಆದರ್ಶವಾಗಿದ್ದ, ಹಾಗಿದ್ದೂ 1913ರಲ್ಲಿ ತೆರೆಗೆ ಬಂದ ಡಿ.ಜಿ.ಫಾಲ್ಕೆಯವರ ಪೌರಾಣಿಕ ರಾಜಾ ಹರಿಶ್ಚಂದ್ರ ಸಿನಿಮಾವನ್ನು ನೋಡಲು ಗಾಮಧೀಜಿ ಮನಸ್ಸು ಮಾಡಲಿಲ್ಲ. ನಾನ್ಯಾವತ್ತೂ ಸಿನಿಮಾ ನೋಡಲಿಲ್ಲ. ಹಾಗೆ ಹೊರಗಿನವನಾಗಿದ್ದರೂ ಸಿನಿಮಾ ಮಾಡಿರುವ ಮತ್ತು ಮಾಡುತ್ತಿರುವ ಕೆಡುಕು ಸುಲಭವಾಗಿ ಕಾಣಿಸುತ್ತಿದೆ ಎಂದಿದ್ದರು ಗಾಂಧಿ. ಸಿನಿಮಾದ ಕೆಡುಕುಗಳ ಬಗ್ಗೆ ಅವರು ತಮ್ಮ ಹರಿಜನ ಪತ್ರಿಕೆಯಲ್ಲೂ ಹಲವು ಸಲ ಬರೆದಿದ್ದರು.

ಯಂತ್ರಗಳನ್ನು ಗಾಂಧೀಜಿ ಮೆಚ್ಚುತ್ತಿರಲಿಲ್ಲ. ಅವರದ್ದು ಶ್ರಮ ಸಂಸ್ಕೃತಿಯ ಒಲವು. ಸಿನಿಮಾ ಹೊಸ ತಂತ್ರಜ್ಞಾನದ ಕೂಸು. ಶ್ರಮ ಇಲ್ಲವೆಂದಲ್ಲ. ಆದರೆ, ತಂತ್ರಜ್ಞಾನದ ಯಜಮಾನಿಕೆಯೇ ಹೆಚ್ಚು. ಈಗ ಗಾಂಧಿಯವರು ಇಲ್ಲವಾಗಿ 70 ವರ್ಷಗಳ ಬಳಿಕ ಹೊಸ ಪೀಳಿಗೆಯವರು ಗಾಂಧಿಯನ್ನು ಅರ್ಥ ಮಾಡಿಕೊಳ್ಳಬೇಕಿದ್ದರೆ ಸಿನಿಮಾ ಒಂದು ಪ್ರಭಾವಶಾಲಿ ಮಾಧ್ಯಮವಾಗಿದೆ. ಹಾಗೆಂದೇ ಸಿನಿಮಾ ನಿರ್ಮಾಪಕ, ನಿರ್ದೇಶಕರು ಒಂದೇ ಸಮನೆ ಗಾಂಧಿಯ ಬೆನ್ನುಹತ್ತಿದ್ದಾರೆ. ಭಾರತದಲ್ಲಿ ಮಾತ್ರವಲ್ಲ. ಜಗತ್ತಿನಾದ್ಯಂತ ಗಾಂಧಿಯ ಕುರಿತು

ಸಿನಿಮಾಗಳು ಬಂದಿವೆ, ಬರುತ್ತಿವೆ. ಹಾಗೆ ನೋಡಿದರೆ ಭಾರತೀಯ ನಿರ್ಮಾಪಕರೇ ಇದರಲ್ಲಿ ಒಂದು ಹೆಜ್ಜೆ ಹಿಂದೆ.

ಗಾಂಧಿಯನ್ನು ರೀಲ್‌ಗಳಲ್ಲಿ ಸುತ್ತುವ ಮೊದಲ ಪ್ರಯತ್ನ ನಡೆದದ್ದು ಎ.ಕೆ.ಚಟ್ಟಿಯರ್ ಎನ್ನುವ ಚೀನಾದಲ್ಲಿ ನೆಲೆ ಕಂಡುಕೊಂಡಿದ್ದ ಪತ್ರಕರ್ತನಿಂದ. ಗಾಂಧಿಯವರ ಜೀವನ ಮತ್ತು ಸಂದೇಶಗಳಿಂದ ತೀವ್ರ ಪ್ರಭಾವಿತರಾಗಿದ್ದ ಚೆಟ್ಟಿಯರ್. ಗಾಂಧಿಯ ಕುರಿತು ಇದ್ದ ಎಲ್ಲ ದೃಶ್ಯ ಸರಕುಗಳನ್ನು ಒಟ್ಟುಗೂಡಿಸಿದರು. ಕೆಲವು ಹೊಸ ಶಾಟ್‌ಗಳನ್ನು ಚಿತ್ರೀಕರಿಸಿ ಅದಕ್ಕೆ ಹೆಣೆದರು. ಬಹಳ ಹಿಂದೆಯೇ ಅವರು ಕೆಲವು ಅಪರೂಪದ ದೃಶ್ಯಗಳನ್ನು ಸಂಗ್ರಹಿಸಿ ಇಟ್ಟಿದ್ದರಂತೆ. ಆದರೆ ಕೆಲವು ದುರದೃಷ್ಟವಶಾತ್ ಪ್ರಿಂಟ್ ಮತ್ತು ನೆಗೆಟಿವ್ ಎರಡೂ ಕಳೆದುಹೋಯಿತು.

1953ರಲ್ಲಿ ಅಮೆರಿಕದ ನಿರ್ಮಾಣ ಸಂಸ್ಥೆಯೊಂದರ ಸಾಕ್ಷ್ಯಚಿತ್ರ 'ಮಹಾತ್ಮಗಾಂಧಿ : ಟ್ವೆಂಟಿಯಥ್ ಸೆಂಚುರಿ ಪ್ರಾಫೆಟ್' ಬಿಡುಗಡೆ ಕಂಡಿತು. ಅದು ಪೂರ್ಣಸಾಕ್ಷ್ಯ ಚಿತ್ರವಲ್ಲ, ಸಿನಿಮಾ ಅಂಶಗಳೂ ಇದ್ದವು. ಆ ಸಮಯದಲ್ಲೇ ಭಾರತದಲ್ಲೂ ಗಾಂಧೀಜಿ ಕುರಿತು ಸಿನಿಮಾವೊಂದನ್ನು ಮಾಡುವ ಆಲೋಚನೆ ಮೂಡಿತು. ಆದರೆ ಗಾಂಧೀಜಿಯ ಪರಮಶಿಷ್ಯ ಜವಾಹರಲಾಲ್ ನೆಹರೂ ಅಧಿಕಾರದಲ್ಲಿದ್ದರೂ ಆ ಆಲೋಚನೆ ಸಾಕಾರವಾಗುವುದಿಲ್ಲ. 1963ರಲ್ಲಿ ಸ್ಟ್ಯಾನ್ಲಿ ವೂಲ್ಪರ್ಟ್ ಬರೆದ 'ನೈನ್ ಅವರ್ಸ್ ಟು ರಾಮ' ಎನ್ನುವ ಪುಸ್ತಕ ಆಧಾರಿತ ಸಿನಿಮಾ ತೆರೆಗೆ ಬಂತು. ಮಹಾತ್ಮನ ಹತ್ಯೆಗೆ ಮುನ್ನ ಒಂಬತ್ತು ಗಂಟೆಗಳು ಹೇಗಿದ್ದವು ಎನ್ನುವುದನ್ನು ತೋರಿಸಿದ ಸಿನಿಮಾ ಅದು.

1948ರಲ್ಲಿ ಗಾಂಧೀಜಿಯವರು ಹತ್ಯೆಯಾದ 20 ವರ್ಷಗಳ ಬಳಿಕ ಮಹಾತ್ಮ ಲೈಫ್ ಆಫ್ ಗಾಂಧಿ, 1869–1948 ಎನ್ನುವ ಸುಮಾರು ಐದು ಗಂಟೆಗಳ ಸಾಕ್ಷ್ಯಚಿತ್ರವೊಂದು ತೆರೆಗೆ ಬಂತು. ಗಾಂಧಿ ಸ್ಮಾರಕ ನಿಧಿಯಿಂದ ತಯಾರಾದ ಸಿನಿಮಾವದು. ಭಾರತ ಸರ್ಕಾರದ ಫಿಲಂ ಡಿವಿಷನ್ ಕೂಡಾ ಕೈಜೋಡಿಸಿತ್ತು. ನ್ಯೂಸ್ ರೀಲ್ ಮತ್ತು ಹಳೆಯ ಪ್ರಿಂಟ್‌ಗಳೇ ಹೆಚ್ಚಿದರೂ ಇದೊಂದು ಸ್ವಾಗತಾರ್ಹ ಸ್ವದೇಶಿ ಪ್ರಯತ್ನವಾಗಿತ್ತು. ಈ ಸಾಕ್ಷ್ಯಚಿತ್ರದ ವಿವಿಧ ಅವಧಿಯ ವಿವಿಧ ರೂಪದ ಅವತರಣಿಕೆಗಳು ಬಳಿಕ ವಿವಿಧ ಭಾಷೆಗಳಲ್ಲಿ ಬಂದವು.

ಇವತ್ತಿಗೂ ಹೆಚ್ಚಿನವರ ಮನಸ್ಸಿನಲ್ಲಿ ಉಳಿದಿರುವ ಎರಡು ಗಾಂಧಿ ಸಿನಿಮಾಗಳೆಂದರೆ, ರಿಚರ್ಡ್ ಅಟೆನ್ ಬರೋ ಅವರ 'ಗಾಂಧಿ' (1982) ಮತ್ತು ಶ್ಯಾಮ್ ಬೆನೆಗಲ್ ನಿರ್ದೇಶನದ 'ದಿ ಮೇಕಿಂಗ್ ಆಫ್ ಗಾಂಧಿ' (1996) ಅಟೆನ್ ಬರೋ ಅವರ ಚಿತ್ರದಲ್ಲಿ ನಟಿಸಿದ












ಜಗತ್ತಿಗೇ ಸಿನಿಮಾದ ಹುಚ್ಚು ಹಿಡಿಸಿದ ಚಾರ್ಲಿ ಚಾಪ್ಲಿನ್‌ರನ್ನು ಲಂಡನ್ನಿನಲ್ಲಿ ಎರಡನೇ ದುಂಡುಮೇಜಿನ ಸಭೆಗೆ ಹೋದಾಗ ಗಾಂಧಿ ಭೇಟಿಯಾಗುತ್ತಾರೆ. ಚಾಪ್ಲಿನ್ ಅವರ ಮಾಡರ್ನ್ ಟೈಮ್ಸ್ ಯಂತ್ರನಾಗರಿಕತೆಯ ಅಮಾನವೀಯತೆಯನ್ನು ಎತ್ತಿ ತೋರುವ ಸಿನಿಮಾ. ಯಂತ್ರಗಳ ವಿಷಯದಲ್ಲಿ ಇಬ್ಬರಿಗೂ ಸಾಮ್ಯತೆ ಇದೆ ಎನ್ನುವುದು ಕುತೂಹಲಕರ. ಆ ಭೇಟಿಯ ಬಳಿಕ ಚಾಪ್ಲಿನ್ ಹೇಳಿದ್ದು ಗಾಂಧಿಯವರದ್ದು ಶ್ರೇಷ್ಠ ವ್ಯಕ್ತಿತ್ವ. ಅವರೊಬ್ಬ ಶ್ರೇಷ್ಠ ಅಂತರರಾಷ್ಟ್ರೀಯ ವ್ಯಕ್ತಿ. ಅವರೊಬ್ಬ ಅತ್ಯಂತ ನಾಟಕೀಯ ವ್ಯಕ್ತಿಯೂ ಹೌದು!




ಬೆನ್ ಕಿಂಗ್ ಸ್ಲೆ ಇವತ್ತಿಗೂ ಹೊಸ ತಲೆಮಾರಿನ ಭಾರತೀಯ ಚಿತ್ರಭಿತ್ತಿಯಲ್ಲಿ ಸ್ಥಿರವಾಗಿದ್ದಾರೆ. ಗಾಂಧಿಯವರು ಬ್ಯಾರಿಸ್ಟರ್ ಆದದ್ದರಿಂದ ಹಿಡಿದು ಮಹಾತ್ಮ ಆದಲ್ಲಿವರೆಗಿನ ಗಾಂಧೀ ಜೀವನವನ್ನು ತೆರೆದಿಟ್ಟ ಶ್ಯಾಮ್ ಬೆನೆಗಲ್ ಅವರ ಸಿನಿಮಾ ಹಿಂದಿಯಲ್ಲಿ 'ಗಾಂಧಿ ಸೆ ಮಹಾತ್ಮ ತಕ್' ಎಂಬ ಹೆಸರಿನಲ್ಲಿ ಹೊರಬಂತು.

ಆ ಬಳಿಕ ಗಾಂಧಿಯನ್ನು ಬೆಳ್ಳಿತೆರೆಯ ಮೇಲೆ ತೆರೆದಿಡುವ ಹಲವು ಪ್ರಯತ್ನಗಳು ನಡೆದವು. ನಟ ಮೋಹನ್ ಗೋಖಲೆ ಅಭಿನಯದ ಡಾ.ಬಾಬಾಸಾಹೇಬ ಅಂಬೇಡ್ಕರ್ ಸಿನಿಮಾದಲ್ಲಿ ಗಾಂಧಿಯನ್ನು ನೆಗೆಟಿವ್ ನೆರಳಿನಲ್ಲಿ ನೋಡಲಾಯಿತು. ಹೇ ರಾಮ್ ಚಿತ್ರದಲ್ಲಿ ನಾಸಿರುದ್ದೀನ್ ಶಾ, ಗಾಂಧಿಯಾಗಿ ಅಭಿನಯಿಸಿದರು. ಜಿನ್ನಾ ಸಿನಿಮಾದಲ್ಲಿ ಶ್ಯಾಮ್ ದಸ್ತೂರ್ ಗಾಂಧಿಯನ್ನು ಅನಾವರಣಗೊಳಿಸಿದರು. ಲೆಜೆಂಡ್ ಆಫ್ ಭಗತ್ ಸಿಂಗ್, ವೀರ್ ಸಾವರ್ಕರ್, ನೇತಾಜಿ ಸುಭಾಶ್ ಚಂದ್ರ ಬೋಸ್, ದಿ ಫರ್‌ಗಾಟನ್ ಹೀರೋ, ಸರ್ದಾರ್ , ಮೈನೆ ಗಾಂಧಿ ಕೊ ನಹೀ ಮಾರಾ ಮುಂತಾಗಿ ಹಲವು ಸಿನಿಮಾಗಳಲ್ಲಿ ಗಾಂಧಿ ಮತ್ತೆ ಮತ್ತೇ ಬಂದರು. ಗಾಂಧಿಯಿಲ್ಲದೆ ಈ ಸಿನಿಮಾಗಳು ಪೂರ್ಣಗೊಳ್ಳಲು ಸಾಧ್ಯವಿರಲಿಲ್ಲ ಎನ್ನುವುದು ನಿಜ.

2007ರಲ್ಲಿ ಅನಿಲ್ ಕಪೂರ್ ನಿರ್ಮಿಸಿದ ಗಾಂಧಿ, ಮೈ ಫಾದರ್, ಮಗ ಹರಿಲಾಲನ ಕಣ್ಣಿನಲ್ಲಿ ಗಾಂಧಿಯನ್ನು ನೋಡಿದ ವಿಭಿನ್ನ ಪ್ರಯತ್ನ ಬಾಲಿವುಡ್‌ನ ಕಮರ್ಷಿಯಲ್ ನಿರ್ದೇಶಕರೂ ಗಾಂಧಿಯ ಪ್ರಭಾವದಿಂದ ಹೊರತಾಗಿಲ್ಲ. ಗಾಂಧಿಗಿರಿಯನ್ನು ಕರ್ಮರ್ಷಿಯಲ್ ಚೌಕಟ್ಟಿನ ಕಥೆಗಳಲ್ಲಿ ಹೆಣೆದ 'ಲಗೇ ರಹೊ ಮುನ್ನಾಭಾಯಿ' ಈ ನಿಟ್ಟಿನಲ್ಲಿ ನೆನಪಿಗೆ ಬರುವ ಚಿತ್ರ. ಕನ್ನಡದಲ್ಲಿ ಗಾಂಧೀಜಿ ನೆನಪಾಗುವ ಸಿನಿಮಾ ಎಂದರೆ ಗಿರೀಶ್ ಕಾಸರವಳ್ಳಿಯವರ 'ಕೂರ್ಮಾವತಾರ', ಕುಂವೀ ಅವರ ಕಥೆ ಆಧರಿಸಿದ ಈ ಸಿನಿಮಾ ಗಾಂಧಿಯನ್ನು ನಿಂತು ನೋಡುವ ಅಂಚು ವಿಶಿಷ್ಟವಾದದ್ದು. ನಿವೃತ್ತಿಯ ಅಂಚಿನಲ್ಲಿರುವ ಗುಮಾಸ್ತನೊಬ್ಬ ನಾಟಕದಲ್ಲಿ ಗಾಂಧಿ ಪಾತ್ರವನ್ನು ಅಭಿನಯಿಸಬೇಕಾದ ಅನಿವಾರ್ಯತೆಯ ಚಿತ್ರವದು. ಗಾಂಧಿಯನ್ನು ಮುಟ್ಟುವ ಹೊಸ ಪ್ರಯತ್ನವೊಂದು ನಿರ್ದೇಶಕ ನಾಗನಾಥ್ ಜೋಶಿಯವರ ಇನ್ನೂ ಬಿಡುಗಡೆಯಾಗದ ಗಾಂಧಿ ದೇವಿ ಎನ್ನುವ ಈ ಚಿತ್ರದಲ್ಲಿ ಹಿರಿಯ ಸಾಹಿತಿ ಜಿ.ರಾಮಕೃಷ್ಣ ಅವರು ಗಾಂಧಿಯ ಪಾತ್ರವನ್ನು ಮಾಡಿದ್ದಾರೆ!

**ಕೃಪೆ : ಪ್ರಜಾವಾಣಿ**

ನಾನು ಮತ್ತು ಗಾಂಧಿ

## ಚಿಕ್ಕಂದಿನಿಂದ ಬೆನ್ನು ಹತ್ತಿದ ಗಾಂಧಿ



ಗಾಂಧೀಜಿ ನನಗೆ ಪರಿಚಯವಾಗಿದ್ದು ಚಿಕ್ಕ ವಯಸ್ಸಿನಲ್ಲಿ. ಒಂದನೇ ಕ್ಲಾಸಿಗೆ ಹೋಗುವಾಗಲೇ ವೇಷಭೂಷಣ ಸ್ಪರ್ಧೆಯಲ್ಲಿ ತಲೆ ಬೋಳಿಸಿಕೊಂಡು ಗಾಂಧೀಜಿಯಾಗಿದ್ದೆ. ಆಗ ಮಾತನಾಡಲು ಬರೆದುಕೊಟ್ಟ 'ಮೈ ಗಾಂಧೀಜಿ ಹೂ,ಅಪ್ ಸಬ್ ಕೊ ಏಕ್ ಬಾತ್ ಕಹನಾ ಚಾತಾ ಹೂ, ಸಬ್ ಬಾಯಿಪಾಠವಾಗಿವೆ. ಏನೂ ತಿಳಿಯದ ವಯಸ್ಸಿನಲ್ಲೇ ಗಾಂಧೀಜಿ ಮತ್ತು ನನ್ನ ಒಡನಾಟ ಆರಂಭವಾಯಿತು. ಆಗ ಧರಿಸಿದ ಗಾಂಧೀಜಿ ವೇಷ ಹೈಸ್ಕೂಲು, ಪಿಯುಸಿವರೆಗೂ ಮುಂದುವರೆಯಿತು.

ನಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿಗಳಂದು ನಾನೇ ಭಾಷಣ ಮಾಡುತ್ತಿದ್ದೆ. ಪ್ರತಿ ವರ್ಷ ಗಾಂಧೀಜಿಯ ಬಗ್ಗೆ ಭಾಷಣ ಮಾಡಿ ಅವರ ವಿವರಗಳೆಲ್ಲ ಕಂಠ ಪಾಠವಾಗಿಬಿಟ್ಟವು. ಗಾಂಧೀಜಿ ಮತ್ತಷ್ಟು ಹತ್ತಿರವಾದರು. ಅವರು ನಮ್ಮ ಮನೆಯವರು ಎಂಬ ಭಾವ ಮೂಡಿತು. ಪರೀಕ್ಷೆಯಲ್ಲಿ ಸರ್ ಹೇಳಿದರೂ ಕಾಪಿ ಮಾಡದ ಗಾಂಧೀಜಿಯ ನಿಷ್ಠೆ ನನ್ನನ್ನು ತೀವ್ರವಾಗಿ ಕಾಡಿತು. ಆ ನಿಷ್ಠೆಯನ್ನೇ ಈಗಲೂ ನಾನು ಪಾಲಿಸಿಕೊಂಡು ಬಂದಿದ್ದೇನೆ. ಸತ್ಯ, ಅಹಿಂಸೆಯನ್ನು ಎಷ್ಟೇ ಪ್ರಯತ್ನಿಸಿದರೂ ರೂಢಿಸಿಕೊಳ್ಳಲಾಗಲಿಲ್ಲ. ಕೆಲವೊಮ್ಮೆ ತಿಳಿದೋ, ತಿಳಿಯದೆಯೋ ಸುಳ್ಳು ಹೇಳುತ್ತಿದ್ದೇ. ಅದು ನನ್ನನ್ನು ನಾನು ಬಚಾವು ಮಾಡಿಕೊಳ್ಳಲು ಇರಬಹುದು ಇಲ್ಲವೇ ಬೇರೆಯವರನ್ನು ಸಿಕ್ಕಿ ಹಾಕಿಸಲೂ ಇರಬಹುದು. ಅಲ್ಲದೆ ಗಾಂಧೀಜಿಯನ್ನು ನನ್ನನ್ನು ನಾನು ಸಮರ್ಥಿಸಿಕೊಳ್ಳಲು ಬಳಸಿಕೊಳ್ಳುತ್ತಿದ್ದೆ. ಏನಾದರೂ ತಪ್ಪು ಮಾಡಿದಾಗ, ಸುಳ್ಳು ಹೇಳಿದಾಗ, ಅಮ್ಮ 'ನೀನು ಯಾವತ್ತೂ ಉದ್ಧಾರ ಆಗಲ್ಲ' ಎಂದು ಬೈದಾಗ 'ಗಾಂಧೀಜಿ ತಪ್ಪು ಮಾಡಿರಲಿಲ್ಲವಾ... ಜನ ಈಗ ಅವರನ್ನು ಗೌರವಿಸುತ್ತಾರಲ್ಲ...' ಎಂದು ವಾದ ಮಾಡುತ್ತಿದ್ದೆ. ಹಾಗೆ ನಡೆದುಕೊಂಡಿದ್ದಕ್ಕೆ ಈಗ ಬೇಸರವಾಗುತ್ತದೆ.

ಚಿಕ್ಕಂದಿನಲ್ಲಿ ನಾನು ತೊಡುತ್ತಿದ್ದ ಗಾಂಧೀಜಿ ವೇಷ ಮತ್ತು ನಾನು ಧರಿಸುತ್ತಿದ್ದ ಕನ್ನಡಕದಿಂದ ಎಲ್ಲರೂ ನನ್ನನ್ನು ಗಾಂಧಿ ಎಂದೇ ಕರೆಯುತ್ತಿದ್ದರು. ಇದು ಮುಂದುವರೆದು ನನ್ನ ಹೆಸರು ಮರೆಯಾಗಿ ಗಾಂಧಿ ಎಂದೇ ಕರೆಯುತ್ತಿದ್ದರು. ಇದು ಮುಂದುವರೆದು ನನ್ನ ಹೆಸರು ಮರೆಯಾಗಿ ಗಾಂಧಿ ಎಂಬ ಅಂಕಿತನಾಮವೇ ರೂಢನಾಮವಾಯಿತು. ಈಗ ಯಾರಾದರೂ ಗಾಂಧಿ ಎಂದು ಕರೆದರೆ ಸ್ವಲ್ಪ ಕಿರಿಕಿರಿಯಾಗುವುದುಂಟು. ಗಾಂಧೀಜಿಯ ಬಗ್ಗೆ ತಿಳಿದಷ್ಟೂ ತಿಳಿಯಬೇಕೆನಿಸುತ್ತದೆ. ಸದಾ ಜ್ಞಾನದ ಹಸಿವಿಗೆ ಆಹಾರ ಒದಗಿಸುವ ಗಾಂಧೀಜಿ ನನ್ನೊಳಗೆ ಒಂದು ಆತ್ಮವಾಗಿದ್ದಾರೆ.

– ಶಿವರಾಜ್.ಆರ್, ಬೆಂಗಳೂರು



# ಸಹಬಾಳ್ವೆಯ ಅನ್ನ ಬಡಿಸಿದ ಗಾಂಧೀ ತಾತ

– ಸದಾಶಿವ್ ಸೊರಟೂರು

**ಯುರೋಪಿನ ಬಂದೂಕುಗಳು ನಾಚಿ ತಲೆತಗ್ಗಿಸಿದ್ದು ಗಾಂಧೀಜಿ ಒಳಗಿನ ಆಧ್ಯಾತ್ಮಿಕತೆಗೆ. ಅವರು ರೂಢಿಸಿಕೊಂಡ ಮಹಾನ್ ದಿವ್ಯಶಕ್ತಿಗೆ. ಆಧ್ಯಾತ್ಮ ಆತ್ಮಕ್ಕೆ ಸಂಬಂಧಿಸಿದ್ದು. ಮದ್ದು ಗುಂಡು, ಬಂದೂಕಿನಿಂದ ದೇಹವನ್ನು ನಾಶ ಪಡಿಸಬಹುದು ಆದರೆ ಆತ್ಮವನಲ್ಲ. ಗಾಂಧಿ ಇವತ್ತಿಗೂ ಪ್ರಸ್ತುತವಾಗಿರುವುದು ಅವರ ಆತ್ಮ ಶುದ್ಧಿಯಿಂದ. ಮನೆಗೆ ಮನೆಯೊಡೆಯನಿಲ್ಲವೆಂದರೆ ಮನೆ ಹೇಗೆ ಪಾಳು ಬೀಳುತ್ತದೆಯೋ, ಹಾಗೆಯೇ ಆಧ್ಯಾತ್ಮ ಇಲ್ಲದ ಬಾಳು ಪಾಳು ಎಂದು ಬಗೆದಿದ್ದರು ಗಾಂಧಿ.**

ಏನು ಈ ಆಧ್ಯಾತ್ಮಿಕತೆ? ಗುಡಿಯಲ್ಲಿ ಮಾಡುವ ಪೂಜೆಯೇ? ತಿನ್ನುವ ಪ್ರಸಾದವಾ? ಮಾಡುವ ನಮಾಜಾ? ಓದುವ ಬೈಬಲ್ಲಾ? ಮೈತುಂಬಾ ಗಂಧ ಹಚ್ಚಿಕೊಂಡು ಸುತ್ತುವ ದೇವಸ್ಥಾನವಾ? ಖಾವಿ ಧರಿಸಿ ಕುಳಿತುಕೊಳ್ಳುವ ಮಠವಾ? ಬಹುತೇಕ ನಾವೆಲ್ಲಾ ಹೀಗೆ ಭಾವಿಸಿದ್ದೇವೆ? ಭಾವಿಸುತ್ತಿದ್ದೇವೆ ಕೂಡ! ಆದರೆ ಗಾಂಧೀಜಿ ಕಂಡುಕೊಂಡ ಆಧ್ಯಾತ್ಮಿಕತೆ ಯಾವುದು?

ಒಂದು ಸಾರಿ ಆಚಾರ್ಯ ವಿನೋಬ ಭಾವೆಯವರು ಗಾಂಧೀಜಿಯವರನ್ನು ಕೇಳಿದ್ರಂತೆ ನಿಮ್ಮ ದೃಷ್ಟಿಯಲ್ಲಿ ಆಧ್ಯಾತ್ಮಿಕತೆ ಅಂದ್ರೆ ಏನು? ಅಂತ. ಅದಕ್ಕೆ ಗಾಂಧೀ ಕೊಟ್ಟ ಉತ್ತರ: ಅತೀ ಪ್ರೀತಿ, ಅತೀ ದ್ವೇಷ ಸಲ್ಲ, ಮುಕ್ತಿ ಹುಡುಕುತ್ತಾ ಹೋಗುವುದಲ್ಲ. ಬಂದಿದ್ದನ್ನು ಸ್ವೀಕರಿಸುವುದು. ಕಾರ್ಯವನ್ನು ಆತ್ಮಕ್ಕಾಗಿ ಮಾಡುವುದು. ಮಾಡುವ ಕಾರ್ಯದಲ್ಲಿ ದೇವರನ್ನು ಕಾಣುವುದು. ಕರ್ಮದ ಮೂಲಕ ಯೋಗ ಸಿದ್ಧಿ ಅದೇ ಧ್ಯಾನ! ಇದೇ ಆಧ್ಯಾತ್ಮಿಕತೆ!

ಇಂತಹ ಒಂದು ಮಹಾನ್ ಆಧ್ಯಾತ್ಮಿಕತೆ ಅವರ ಜೀವನದಲ್ಲಿ ಬಂದಿದ್ದು ಅವರೇ ಹೇಳಿಕೊಂಡಂತೆ ಅವರ ತಂದೆ, ತಾಯಿ ಮತ್ತು ಅವರನ್ನು ನೋಡಿಕೊಳ್ಳುತ್ತಿದ್ದ ರಂಬಾ ಎಂಬ ದಾದಿಯಿಂದ. ಅವರ ಮನೆ ಸರ್ವಜನಾಂಗದ ಶಾಂತಿಯ ತೋಟದಂತಿತ್ತು. ಮನೆಗೆ ಎಲ್ಲಾ ಧರ್ಮಿಯರನ್ನು ಕರೆಯಿಸಿ ಅವರ ಚರ್ಚೆಗಳನ್ನು ಏರ್ಪಡಿಸುತ್ತಿದ್ದರು. ತಾಯಿ ನಿತ್ಯ ವ್ರತಗಳನ್ನು ಮಾಡುತ್ತಿದ್ದರು. ಗಾಂಧಿಯನ್ನು ನಿತ್ಯ ದೇವಸ್ಥಾನಕ್ಕೆ ಕರೆದೊಯ್ಯುತ್ತಿದ್ದರು. ಬಾಲ್ಯದಲ್ಲಿ ಅವರ ತಾಯಿ ಆಡಿದ ಒಂದು ಮಾತು ಅವರ ಆಧ್ಯಾತ್ಮದ ಹೆಮ್ಮರಕ್ಕೆ ಬೀಜವಾಯಿತು.

ಒಂದು ಲೋಟ ನೀರು ಕೊಟ್ಟವರಿಗೆ ಊಟ ಹಾಕು. ಒಳ್ಳೆಯ ಮಾತನಾಡಿದವರಿಗೆ ಶಿರಬಾಗಿ ನಮಿಸು. ಒಂದು ಕಾಸುಕೊಟ್ಟವರಿಗೆ ಚಿನ್ನದ ಮೊಹರು ಕೊಡು. ನಿನ್ನ ಪ್ರಾಣ ಉಳಿಸಿದವರಿಗೆ ನಿನ್ನ ಜೀವನವನ್ನೇ ಕೊಡು. ಉಪಕಾರ ಮಾಡಿದರವರಿಗೆ ಹತ್ತುಪಟ್ಟು ಪ್ರತಿ ಉಪಕಾರ ಮಾಡು ಎಂಬ ಮಾತುಗಳು ಅವರ ಆಧ್ಯಾತ್ಮವನ್ನು ರೂಪಿಸಿದವು.

ಗಾಂಧೀಜಿಯವರು ಎಷ್ಟೊಂದು ಸ್ವಾವಲಂಬಿಗಳಾಗಿದ್ದರು ಎಂದರೆ ತಮ್ಮ ಹರಿದ ಬಟ್ಟೆಗಳನ್ನು ತಾವೇ ಹೊಲಿದುಕೊಳ್ಳುತ್ತಿದ್ದರು. ಯಾರ ಮೇಲೂ ಯಾವುದಕ್ಕೂ ಅವಲಂಬಿತರಾಗಿರಲಿಲ್ಲ. ಅವರ ಆಧ್ಯಾತ್ಮಿಕತೆಯ ಕೇಂದ್ರ ಬಿಂದು ಅಹಿಂಸೆಯಾಗಿತ್ತು. ಒಂದು ಕೆನ್ನೆಗೆ ಬಾರಿಸಿದರೆ ಇನ್ನೊಂದು ಕೆನ್ನೆ ತೋರಿಸು ಎನ್ನುತ್ತಿದ್ದರು. ಪ್ರಪಂಚದಲ್ಲಿ ಅಹಿಂಸೆಗಿಂತ ದೊಡ್ಡ ಅಸ್ತ್ರ ಇನ್ನೊಂದಿಲ್ಲ. ಅಣುವಾಸ್ತ್ರವೂ ಅದರ ಮುಂದೆ ತೃಣ ಮಾತ್ರ. ಎಲ್ಲರನ್ನೂ ಪ್ರೀತಿಯಿಂದ ಕಾಣು. ಪ್ರೀತಿಯಿಂದ ಎಲ್ಲವನ್ನೂ ಗೆಲ್ಲಬಹುದು ಎಂದಿದ್ದರು.

ಗಾಂಧೀಜಿಯವರು ಉತ್ತಮ ಅಡುಗೆ ಮಾಡುವವರಾಗಿದ್ದರು. ಇದೇನಪ್ಪಾ!? ಗಾಂಧಿ ಅಡುಗೆ ಮಾಡೋದಾ ಅನ್ಕೊಂಡ್ರಾ? ಹೌದು! ಹಿಂದು ಧರ್ಮದ ಅಕ್ಕಿ, ಇಸ್ಲಾಂ ಧರ್ಮದ ನೀರು, ಕ್ರೈಸ್ತ ಧರ್ಮದ ಶಾಖ, ಇನ್ನಿತರ ಧರ್ಮದ ಪರಿಕರಗಳನ್ನು ಬಳಸಿಕೊಂಡು ರುಚಿರುಚಿಯಾದ ಸಹಬಾಳ್ವೆಯ ಅನ್ನ ಮಾಡುತ್ತಿದ್ದರು. ಎಲ್ಲಾ ಧರ್ಮಗಳು ಬೇಕು, ಅವುಗಳ ಸಾರವೂ ಬೇಕು ಎಂದು ತಿಳಿಸಿದರು. ರಾಜಕೀಯವೂ ಧರ್ಮದ ಅಡಿಯಲ್ಲಿರಬೇಕು. ಧರ್ಮವೆಂದರೆ ವಿಭೂತಿಯೂ ಅಲ್ಲ ಶಿಲುಬೆಯೂ ಅಲ್ಲ ಅದೊಂದು ಮಾನವ

ಪ್ರೇಮ ಎಂದು ಸಾರಿದರು. ನಿಮ್ಮ ನಡೆ ನುಡಿ ಶುಭ್ರವಾಗಿರವಾಗ ಭಯಗೊಳ್ಳುವುದು ಮೂರ್ಖತನ ಎಂದರು. ಯಾರನ್ನು ತನ್ನಹಿಂದೆ ಬನ್ನಿ ಎಂದು ಅವರು ಕರೆಯಲಿಲ್ಲ. ಏಕಾಂಗಿಯಾಗಿ ಆಂಗ್ಲರಿಗೆ ಎದೆಯೊಡ್ಡಿದರು. ಲಕ್ಷಾಂತರ ಜನ ಅವರ ಹಿಂದೆ ಹೊರಟರು. ಅದು ನಿರ್ಭಯತೆಗಿರುವ ತಾಕತ್ತು.

ನಾನು ಮಾನಸಿಕವಾಗಿ ಕುಗ್ಗಿ ಹೋದಾಗಲೆಲ್ಲಾ ಭಗವದ್ಗೀತೆಯನ್ನು ಓದುತ್ತೇನೆ. ಅದು ನನಗೆ ಸಮಾಧಾನ ನೀಡುತ್ತದೆ ಎನ್ನುತ್ತಿದ್ದರು. ಜೀವನದಲ್ಲಿ ಕೆಲವು ವ್ರತಗಳನ್ನು ಅನುಸರಿಸಬೇಕೆಂದರು. ತಾವು ಕೂಡ ಮಾಡಿ ತೋರಿಸಿದರು. ವ್ರತಗಳೆಂದರೆ ನಾವು ಏಕಾದಶಿಯಲ್ಲಿ ಮಾಡುವ ವ್ರತಗಳಲ್ಲ. ಅವರ ಉಪವಾಸಗಳೆಂದರೆ ಕಠೋರ ಉಪವಾಸಗಳಾಗಿದ್ದವು. ನಮ್ಮ ಉಪವಾಸಗಳಂತೆ ಅಲ್ಲ. ಅಹಿಂಸೆ, ಸತ್ಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರ ಶ್ರಮ, ವರ್ಜನ, ಸರ್ವತ್ರ ಭಯ, ಸ್ವದೇಶಿತನ, ಸರ್ವಧರ್ಮಗಳ ಸಮಾನತೆ, ಸ್ಪರ್ಶ ಭಾವನೆ ಇವು ಅವರ ವ್ರತಗಳಾಗಿದ್ದವು.

ಹಾಗಾದರೆ ಗಾಂಧಿ ದೇವರನ್ನು ನಂಬುತ್ತಿರಲಿಲ್ಲವಾ? ಎಂದು ನೀವು ಕೇಳಬಹುದು. ಹೌದು! ಅವರು ನಂಬುತಿದ್ರು. ಕಾಯಿ ಒಡೆದು, ಮಂಗಳಾರತಿ




ತಗೊಂಡು ಕುಂಕುಮ ಹಚ್ಚಿಕೊಳ್ಳುವಂತೆ ನಮ್ಮ ನಿಮ್ಮ ಹಾಗೆ ಅಲ್ಲ ಅವರ ನಂಬಿಕೆ. ಅವರಿಗೆ ದೇವರೆಂದರೆ ಸತ್ಯ, ನಂಬಿಕೆ, ನೀತಿ–ನಿಯಮಗಳು. ಅವುಗಳಿಗೆ ಭಯವನ್ನು, ಗೌರವವನ್ನು ತೋರಿಸುತ್ತಿದ್ದರು. ರಾಮನನ್ನ ಜಪಿಸುತ್ತಿದ್ದರು. ಅವರ ರಾಮನೆಂದರೆ ಬಿಲ್ಲುಬಾಣ ಹಿಡಿದ ಮೂರ್ತಿಯಲ್ಲ. ಅವರಿಗೆ ವಿಗ್ರಹರಾಧನೆಯಲ್ಲಿ ನಂಬಿಕೆಯಿರಲಿಲ್ಲ. ಪ್ರತಿಯೊಬ್ಬರ ಮನದಲ್ಲಿರುವ ಅಂತಃಕರಣದ ಮೂರ್ತಿಯೇ ರಾಮನೆಂದು ಹೇಳುತ್ತಿದ್ದರು.

ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಪ್ರಾರ್ಥನೆ ಮಾಡುತ್ತಿದ್ದರು. ನಾವು ನೀವು ಪ್ರಾರ್ಥನೆ ಅಂದರೆ ದೇವರೇ ಅದು ಕೊಡಪ್ಪ ಇದು ಕೊಡಪ್ಪ ಎಂದು ಕೇಳುತ್ತೇವೆ. ಆದರೆ ಪ್ರಾರ್ಥನೆಯೆಂದರೆ ಬೇಡುವುದಲ್ಲ ಬದಲಿಗೆ ಸ್ತುತಿಸುವುದು ಎನ್ನುತ್ತಿದ್ದರು. ಅವರ ಆಶ್ರಮ ಜೀವನ ಗಮನ ಸೆಳೆಯುವಂತದ್ದು.



ಸಬರಮತಿಯ ಕುಟೀರದ ಸೂರಿನಡಿ ಮಾನವ ಮತ್ತು ಮಾನವ ಧರ್ಮವನ್ನು ತರುವುದು ಅವರ ಗುರಿ–ಯಾಗಿತ್ತು. ಟಾಲ್‌ಸ್ಟಾಯ್ ಫಾರಂ ಸ್ಥಾಪಿಸಿ ಅದರಿಂದಲೂ ಈ ಕಾರ್ಯ ಸಾಧಿಸಿದರು. ತಿನ್ನುವ ಆಹಾರದಲ್ಲಿ ಕ್ರಮ ಮತ್ತು ಅವರ ಅಹಿಂಸಾ ರೂಪ ಎಷ್ಟಿತ್ತು ಅಂದ್ರೆ ಹಸುವಿಗೆ ಹಿಂಸೆಯಾಗುತ್ತದೆ ಎಂದು ಕಡಲೆಬೀಜದ ಹಾಲು ಮತ್ತು ಬಾಳೆ ಹಣ್ಣು ಸೇವಿಸ ತೊಡಗಿದರು. ಅವರು ಸಮಾಧಿಸ್ಥಿತಿಯ ಸಾಮ್ರಾಟರಾಗಿದ್ದರು. ಯೋಗವು ಜೀವನಕ್ಕೆ ಅವಶ್ಯವೆಂದರು. ಎಲ್ಲೋ ಕುಳಿತು ಮಾಡುವ ಮೂರು ಗಂಟೆಯ ಆಸನವಲ್ಲ. ಯೋಗ ಅದು ಬದುಕುವ ರೀತಿ ಎಂದರು. ಮಾಡುವ ವ್ಯವಸ್ಥಿತ ಆಸನದಂತೆ, ವ್ಯವಸ್ಥಿತವಾಗಿ ಬದುಕುವುದನ್ನು ಬದುಕಿ ತೋರಿಸಿದರು. ಮೌನದ ಆಭರಣವನ್ನು ಯಾವತ್ತೂ ಧರಿಸಲು ಇಷ್ಟ ಪಡುತ್ತಿದ್ದರು. ಹಿಂಸೆಗೆ ಹಿಂಸೆ, ಸೇಡಿಗೆ ಸೇಡು ಯಾವತ್ತು ಪರಿಹಾರವಾಗಲೂ ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಯಾವ ಅಧಿಕಾರವೂ ಇಲ್ಲದ, ಹಣವೂ ಇಲ್ಲದ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಜಗತ್ತಿನ ಎಲ್ಲಾ ಜನ ಗೌರವಿಸುವುದು ಏಕೆ? ಆತ್ಮ, ತ್ಯಾಗ, ಆಧ್ಯಾತ್ಮಿಕ ಜೀವನವನ್ನು ತಾನೇ ಜೀವನದಲ್ಲಿ ಅಳವಡಿಸಿಕೊಂಡು ಮುಚ್ಚುಮರೆಯಿಲ್ಲದೆ ಸತ್ಯವನ್ನು ಪಾಲಿಸಿದ್ದ ಬಡವರಲ್ಲಿ ಬಡವರಾಗಿ ಬಾಳಿದ್ದ ವ್ಯಕ್ತಿ ಗಾಂಧೀಜಿ.

**ಕೃಪೆ : ವಿಶ್ವವಾಣಿ**

**ಅಮರ ಬಾಪು ಚಿಂತನ ಪ್ರತಿಕೆಗೆ ಚಂದಾದಾರರಾಗಲು ಸಂಪರ್ಕಿಸಿ.**
**ಮೊ.90356 18076**

# ನೆಲೆಯೂರಿ ನಿಂತ 'ಮಹಾತ್ಮ'ರು

– ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ

**ನನ್ನ ಬಾಲ್ಯದ ದಿನಗಳಲ್ಲಿಯೇ ನನ್ನ ಮನಸ್ಸಿನ ಭಾಗವಾಗಿ ಗಾಂಧೀಜಿ ನೆಲೆನಿಂತುಬಿಟ್ಟರು. ಅವರು 'ಮಹಾತ್ಮಾ'ಜಿಯಾಗಿ ಬರುವ ಮುನ್ನ 'ಮೋಹನದಾಸ' ಎಂಬುದು ನನಗೆ ಅತ್ಯಂತ ಪ್ರಿಯವಾದ ಹೆಸರಾಗಿತ್ತು. ಇದು ಗಾಂಧೀಜಿಯವರ ಬಾಲ್ಯದ ಹೆಸರು. ಮೋಹನ ಎಂಬುದು ರಮ್ಯತೆ ಹಾಗೂ ಭಾವಕತೆಯ ಪ್ರತೀಕವೇನೋ ಹೌದು! ವಿದ್ಯಾರ್ಥಿಗಳ ಬದುಕಿನಲ್ಲಿ 'ಮೋಹನ'ರೂಪ ಧರಿಸಿ; ಅನಂತರ 'ಗಾಂಧೀಜಿ'ಯಾಗಿ ನಮ್ಮ ಕನಸಿಗೆ ನೀರೆರೆದರು. ಮಹಾತ್ಮಾಜಿ ಅವರ ಬದುಕಿನಲ್ಲಿ ಮೂರು ಹಾಸುಗಳಿವೆಯೆಂದು ನನ್ನ ತಿಳಿವಳಿಕೆ. ಅವು ನನ್ನ ಜೀವದ ಭಾಗಗಳಾಗಿವೆ. ಮೋಹನದಾಸ ಎಂಬ ಹೆಸರಿನಿಂದ ಮೊದಲ ಹಾಸನ್ನು ನಾನು ಕಂಡೆ. ಬಾಲ್ಯಕಾಲದ ಎರಡನೆಯ ಘಟ್ಟದಲ್ಲಿ 'ಗಾಂಧೀಜಿ'ಯಾಗಿ ಅವರು ನನ್ನ ಮನಸ್ಸನ್ನು ಹೊಕ್ಕರು. ಅನಂತರ ರಾಷ್ಟ್ರಪಿತನೆಂದೂ ಮಹಾತ್ಮರೆಂದೂ ಭಾರತ ಜನತೆ ಕೈವಾರಿಸಿತು. ನನ್ನ ಪ್ರಬುದ್ಧ ವಯಸ್ಸಿನಲ್ಲಿ 'ಮಹಾತ್ಮ' ಎಂಬ ಮಹಾರೂಪಕದ ಮೂಲಕ ಅವರು ನೆಲೆಯೂರಿ ನಿಂತುಬಿಟ್ಟರು.**



**ನಾ**ನು ಹುಟ್ಟಿದ್ದು ಆನೇಕಲ್ಲು ತಾಲ್ಲೂಕಿನ ಹೆಬ್ಬಗೋಡಿಯಲ್ಲಿ. ಪ್ರಾಥಮಿಕ ಎರಡನೆಯ ತರಗತಿಯಲ್ಲಿರುವಾಗ ನಮ್ಮ ಅಪ್ಪ, ನೆಲಮಂಗಲದ ಸರ್ಕಾರಿ ಪ್ರಾಥಮಿಕ ಪಾಠಶಾಲೆಗೆ ನನ್ನನ್ನು ಸೇರಿಸಿದರು. ಆಗ ಶಾಲೆಯಲ್ಲಿ ವಾರಕ್ಕೊಮ್ಮೆ ತಕಲಿ ಹಿಡಿದು ಹತ್ತಿಯನ್ನು ನೇಯಬೇಕಾಗಿತ್ತು. ನಾವು ಪ್ರಾರಂಭದಲ್ಲಿ ಹತ್ತಿಯಿಂದ ದಾರವನ್ನು ತೆಗೆಯಲು ಕಷ್ಟಪಟ್ಟೆ. ಆದರೆ, ಗುರುಗಳಾದ ಸಂಜೀವಮೂರ್ತಿ ತಮ್ಮ ಏಕೋನಿಷ್ಠ–ಭಾವದಿಂದ ನನಗೆ ನೂಲುವುದನ್ನು ಕಲಿಸಿದರು. ನಾನು ತಕಲಿಯನ್ನು ಹಿಡಿದಾಗ ಪ್ರಾರ್ಥನೆ ಮಾಡಬೇಕಿತ್ತು. ಅನಂತರವೂ ಪ್ರಾರ್ಥನೆಯೊಡನೆ ನೂಲುವ ಕಾಯಕ ಮುಕ್ತಾಯ ಆಗುತ್ತಿತ್ತು. ಗಾಂಧೀಜಿಯವರ ಚಿತ್ರ ನನ್ನ ಮನಸ್ಸಿನ ಪರದೆಯಲ್ಲಿ ನೆಲೆಯೂರಿ ನಿಂತದ್ದು ಆಗಲೇ. ನಮ್ಮ ಮನೆಗೆ ಗಾಂಧೀಜಿ ಭಾವಚಿತ್ರಗಳು ಬಂದದ್ದು ನಾನು ಐದನೆಯ ತರಗತಿಯಲ್ಲಿದ್ದಾಗ! ಆದಿನ ನಮ್ಮ ಅಪ್ಪ ರಾಷ್ಟ್ರನಾಯಕರ ಚಿತ್ರಗಳನ್ನು ಗೋಡೆಗೆ ತೂಗಿಹಾಕಿದ್ದರ ಸಣ್ಣಸಂಭ್ರಮ ನನ್ನ ಸ್ಮೃತಿಪಟಲದಲ್ಲಿ ಹಾಗೆಯೇ ಉಳಿದಿದೆ. ಅವರು ಗಾಂಧೀಜಿಯವರ 'ವೈಷ್ಣವಜನತೋ' ಗೀತೆಯನ್ನು ಲೆಗ್ ಹಾರ್ಮೋನಿಯಂನಲ್ಲಿ ನುಡಿಸುತ್ತಿದ್ದರು. ಬೆಂಗಳೂರಿಗೆ ಮಹಾತ್ಮಾಜೀ ಬಂದಾಗ ನಮ್ಮ ಅಪ್ಪ ಕಂಡಿದ್ದರಂತೆ. ಇವರು ಸರ್ಕಾರಿ ಸೇವೆಯಲ್ಲಿದ್ದರೂ ಮಹಾತ್ಮಾಜೀ ಅವರ ವಿಷಯದಲ್ಲಿ ನಿಜವಾದ ಭಾವೋನ್ಮುಕ್ತ ಸ್ವಭಾವದವರಾಗಿದ್ದರು.

**ಮೋಹನದಾಸ**

ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ನಾನು 'ತಕಲಿ'ಯನ್ನು ಹಿಡಿದಾಗ ಒಂದು ಬಗೆಯ ರೋಮಾಂಚನವನ್ನು ಅನುಭವಿಸಿದ್ದುಂಟಷ್ಟೆ. ಇಲ್ಲಿಗೆ ಅರುವತ್ತೆರಡು ವರ್ಷಗಳ ಹಿಂದಿನ ಮಾತು. ಅದು ಈಗ ತಾನೆ ಸಂಭವಿಸಿತೆಂಬಷ್ಟು ರೋಮಾಂಚನವನ್ನು ನನಗೆ ಉಂಟುಮಾಡುತ್ತಿದೆ. ನಾನು 'ತಕಲಿ'ಯನ್ನು ಮೊದಲದಿನ ಬೆರಳಲ್ಲಿ ಹಿಡಿದಿದ್ದೆ. ಹೆಬ್ಬೆರಳು ಮತ್ತು ತೋರುಬೆರಳುಗಳ ಮೂಲಕ ಅದನ್ನು ತಿರುಗಿಸಿದಾಗ, ಅದರ ಸ್ಪರ್ಶವೇ ಒಂದು ಬಗೆಯ ಸಂಭ್ರಮವಾಗಿತ್ತು. ಮತ್ತೊಂದು ಬಗೆಯ ಅಚ್ಚರಿಯೂ ನನ್ನಲ್ಲಿ ಮನೆಮಾಡಿಕೊಂಡಿತ್ತು. ಪ್ರತಿ ಶನಿವಾರ ಕೈಗೆ ತಕಲಿ ಬರುತ್ತಿತ್ತು. ಎಡಗೈಯಲ್ಲಿ ಹತ್ತಿಯ ಉಂಡೆಯನ್ನು ಇಟ್ಟುಕೊಂಡು, ಬಲಗೈಯಲ್ಲಿ ತಕಲಿ ತಿರುಗಿಸುತ್ತಲೇ ಎಳೆಎಳೆಯಾಗಿ ದಾರವನ್ನು ತೆಗೆಯಬೇಕಾಗಿತ್ತು. ನಾನು ಮೊದಮೊದಲು ದಪ್ಪನೆಯ ಉರುಟುರುಟಾದ ದಾರವನ್ನು ತೆಗೆದದ್ದುಂಟು. ಅನಂತರ ಎಳೆಎಳೆಯಾಗಿ ತೆಗೆಯುವ ಹೊತ್ತಿಗೆ ಹಲವು ತಿಂಗಳುಗಳೇ ಕಳೆದವು. ನಾನು ತೆಗೆದ ದಾರವನ್ನು ಎಲ್ಲಿಗೆ ಒಯ್ಯುವರೆಂಬುದು ನನಗೆ ತಿಳಿಯದಾಗಿತ್ತು. ನಾನು ಆ ಬಗೆಗೆ ಯೋಚಿಸಿಯೂ ಇರಲಿಲ್ಲ. ಆದರೆ, ನನ್ನ ಶಿಕ್ಷಕರು ಗಾಂಧೀಜಿಯ ಬಾಲ್ಯಕಾಲ, ಅವರ ಬಾಲ್ಯದ ಹೆಸರು, ತಂದೆ–ತಾಯಿಗಳ ಪರಿಚಯವನ್ನು ತಿಳಿಸಿಕೊಟ್ಟಾಗ ನನ್ನ ಮನಸ್ಸಿನಲ್ಲಿ 'ಮೋಹನದಾಸ ಕರಮಚಂದ' ಎಂಬ ಹೆಸರಲ್ಲಿ 'ಮೋಹನ' ಎಂಬ ಮಾತಂತೂ ಆಳವಾಗಿ ಉಳಿದುಬಿಟ್ಟಿತು. ಅವರು ವೈಷ್ಣವ ಸಂಪ್ರದಾಯಕ್ಕೆ ಸೇರಿದವರು. ಇದಕ್ಕಾಗಿ 'ಮೋಹನ' ಎಂಬುದು ಪ್ರಥಿತವೇ ಆಗಿತ್ತು. ಗಾಂಧೀಜಿಯವರ ಬಾಲ್ಯಕಾಲದ ಚಿತ್ರದಲ್ಲಿ ನೋಡಿದ 'ಮೋಹನದಾಸ'ರ ಕೋಟು–ಷರ್ಟ್–ಪ್ಯಾಂಟು ಮತ್ತು ಟೋಪಿ ಎಷ್ಟೋ ವರ್ಷಗಳ ತನಕ ನನ್ನ ಮನಸ್ಸಿನ ಭಾವಪ್ರಪಂಚದಿಂದ ದೂರವಾಗಿರಲಿಲ್ಲ!

ಗಾಂಧೀಜಿ ಶಾಲೆಯಲ್ಲಿ ಓದುತ್ತಿರುವಾಗ ತಾಯಿಗೆ ಅತ್ಯಂತ ನಿಷ್ಠರಾಗಿದ್ದದ್ದು ನನಗೆ ತುಂಬಾ ಇಷ್ಟವಾಗಿತ್ತು. ನಾನು ನನ್ನ ಅಮ್ಮನನ್ನು ಬಲು ಪ್ರೀತಿಸುತ್ತಿದ್ದೆ. ಈ ಪ್ರೀತಿಭಾವ ಸಹಜವಾಗಿಯೇ ಬಂದಿತ್ತು. ತಾಯಿ ಪುತಲೀಬಾಯಿ ಮಗನ ಜತೆ ನಡೆದುಕೊಳ್ಳುತ್ತಿದ್ದ ರೀತಿ–ನೀತಿಗಳು, ನನ್ನ ಬದುಕಿಗೆ ಅಪರೋಕ್ಷಜ್ಞಾನವನ್ನು ಉಂಟುಮಾಡಿದ್ದವು. ತಾಯಿ ನನ್ನ ಭಾವಕೋಶದಲ್ಲಿ ನೆಲೆಯೂರಿ ನಿಲ್ಲಲು ಬಾಲಕ ಮೋಹನನ ರೀತಿ–ನೀತಿಗಳು ಪ್ರಭಾವ ಉಂಟು ಮಾಡಿದ್ದುವೆಂದು ತೋರುತ್ತದೆ.

ಪ್ರತಿವರ್ಷ 'ಗಾಂಧೀಜಯಂತಿ'ಯನ್ನು ದೇಶವೇ ಆಚರಿಸುತ್ತಿದ್ದಾಗ ಇದರ ಹಿಂದಿನ 'ಭಾವಕೋಶ'ವನ್ನು ತಿಳಿಯಲು ಯತ್ನಿಸಿದ್ದೆ. ಸರಳಜೀವನ, ಸರಳವಾದ ಆಹಾರ, ಸಾಮಾನ್ಯ ಬದುಕಿನ ದಿನದಿನದ ಕ್ಷಣಗಳ ಬಗೆಗೆ ಯೋಚಿಸಿದ್ದೇನೆ. ತುಂಡು ಬಟ್ಟೆಯ ಫಕೀರ ದೇಶದ ಸಮಸ್ತರನ್ನೂ ಸೂಜಿಗಲ್ಲಿನಂತೆ ತನ್ನತ್ತ ಸೆಳೆದುಕೊಂಡದ್ದರ ಬಗೆಗೆ ನನಗಿನ್ನೂ ವಿಸ್ಮಯವಿದೆ. ಅವರ ನಿಷ್ಠುರ ಸ್ವಭಾವ, ಪದೇ ಪದೇ 'ಪ್ರಯೋಗ' ಮಾಡುತ್ತಿದ್ದ ರೀತಿಗಳು, ದೇಶವನ್ನು ಮೂಕವಿಸ್ಮಿತರನ್ನಾಗಿಸಿವೆ. ಅವರು 'ಸತ್ಯಾಗ್ರಹ' ಎಂಬ ಬ್ರಹ್ಮದಂಡವನ್ನು ಹಿಡಿದದ್ದು ಸಾಮಾನ್ಯ ಸಂಗತಿಯಲ್ಲ. ಆಗ ನಾನು ಪ್ರಾಯಕ್ಕೆ ಬಂದು, ಯುವಕನಾಗಿದ್ದಾಗ 'ಜಾತಿ'ಯ ಪೆಡಂಭೂತ ನನ್ನನ್ನೂ ಅಟ್ಟಿಕೊಂಡು ಬಂದದ್ದುಂಟು. ಜಾತಿಯನ್ನು ಮೀರುವ ಯತ್ನ ಉದ್ದಕ್ಕೂ ನಡೆಸಿದೆ. ನಾನು ಹನ್ನೊಂದನೆಯ ತರಗತಿಯನ್ನು ದಾಟುವಾಗ 'ಗಾಂಧೀಜಿ'ಯವರು ನನ್ನ ಭವಿಷ್ಯದ ಸೂಚಕರಾಗಿಯೂ ಭಾವಕೋಶದ ಪ್ರತಿಮರಾಗಿಯೂ ಉಳಿದುಬಿಟ್ಟಿದ್ದರು. 'ಮೋಹನ' ಎಂಬ ಬಾಲ್ಯಕಾಲ ಹೋಗಿ 'ಗಾಂಧೀಜಿ' ಎಂಬ ತಾರುಣ್ಯಕಾಲ ನನ್ನೊಳಗೆ ಇಳಿದಿತ್ತು.

**ಗಾಂಧೀಜಿ**

ನಾನು ಮಾಧ್ಯಮಿಕ ತರಗತಿ ದಾಟುವಾಗ ಎಳೆವಯಸ್ಸಿನ 'ಮೋಹನ 'ಭಾವ ಉಳಿಯಲಿಲ್ಲ. ನಾವು ಸ್ವತಂತ್ರ ಭಾರತದ ಪ್ರಜೆಗಳೆಂಬ ಅರಿವು ಅದಾಗಲೇ ಬಂದಿತ್ತು. ನಾನು ತಿರುಗಾಡುತ್ತಿದ್ದ ನೆಲಮಂಗಲದ ಸರ್ಕಲಿನಲ್ಲಿ ಗಾಂಧೀಜಿ-ಯವರ ಸಿಮೆಂಟಿನ ಪುತ್ಥಳಿ ಇತ್ತು. ಸರ್ಕಾರಿ ಕಛೇರಿಗಳಲ್ಲೊ ಪುರಸಭಾ ಅಧ್ಯಕ್ಷರ ಕೊಠಡಿಗಳಲ್ಲೊ 'ಗಾಂಧೀಜಿ'ಯವರ 'ನಿಲುವು' ನನ್ನನ್ನು ಆಕರ್ಷಿಸಿದ್ದುಂಟು. ಅವರು ಕೋಲನ್ನು ಹಿಡಿದು, ತುಂಡು ಪಂಚೆಯುಟ್ಟು ನಡೆಯುತ್ತಿರುವ 'ಭಂಗಿ' ನನ್ನ ತಾರುಣ್ಯಕ್ಕೆ ಹೊಸತನ್ನು ಸೇರಿಸುತ್ತಿತ್ತು. ಆಗ್ಗೆ ನಾನು ಗಾಂಧೀಜಿ 'ತುಂಡುಪಂಚೆ' ಏಕೆ ಉಟ್ಟಿದ್ದಾರೆಂದು ಕೇಳಿಕೊಂಡಿರಲಿಲ್ಲ. ಅವರ ಪ್ರಸನ್ನಭಾವ ಮಾತ್ರ ನನ್ನ ಮನಸ್ಸನ್ನು ಸೆರೆ ಹಿಡಿದಿತ್ತು. ನಾನು ಏಳನೆಯ ತರಗತಿ ಓದುವಾಗ ಸಂಕ್ಷಿಪ್ತವಾಗಿ ಗಾಂಧೀಜಿಯವರ ಜೀವನಚಿತ್ರ ಉಪ-ಪಠ್ಯದಲ್ಲಿ ಸೇರಿ-ಕೊಂಡಿತ್ತು! ಅಲ್ಲಿ ನನ್ನ ಮನಸ್ಸು 'ಸ್ವಾತಂತ್ರ್ಯ'ದ ದೀಕ್ಷೆಯನ್ನು ತೊಟ್ಟ ಗಾಂಧೀಜಿ ಕಾಣಿಸಿಕೊಳ್ಳುತ್ತಿದ್ದರು! ಅವರು 'ನಂದಿಬೆಟ್ಟ'ದಲ್ಲಿ ತಂಗಿದ ಸಂಗತಿಗಳೂ ಅವರು ಮೇಕೆಹಾಲನ್ನು ಕುಡಿಯುತ್ತಾರೆಂಬ ವಿಚಾರವೂ ತಿಳಿದಾಗ ನಮ್ಮ ಗ್ರಾಮದ ಒಂದು ಬದಿಯಲ್ಲಿದ್ದ 'ಕುರುಬರ ಹಟ್ಟಿ' ನನಗೆ ನೆನಪಾಗುತ್ತದೆ. ನಾನು ಮಧ್ಯಾಹ್ನದ ಹೊತ್ತು ಬೇಲಿಯ ಸಂದು-ಗೊಂದುಗಳಲ್ಲಿ ಮೇಯುತ್ತಿದ್ದ ಮೇಕೆಯನ್ನು ಹಿಡಿದು ಲೋಟದಲ್ಲಿ ಹಾಲುಕರೆದು ಕುಡಿದದ್ದುಂಟು! ಇದು ಗಾಂಧೀಜಿಯವರ ಅನುಕರಣೆಯೇ ಆಗಿತ್ತು! ಆದರೆ, 'ಸುಳ್ಳು' ಹೇಳುವುದನ್ನು ನಾನು ಬಿಡಲಾಗಲಿಲ್ಲ. ಇದು ಅಚಾನಕ್ ಆಗಿ ನಮ್ಮ ಅಂತರಾಳವನ್ನು ಹೊಕ್ಕುಬಿಡುತ್ತಿತ್ತು. ನಮ್ಮ ಅಪ್ಪನ ಜೇಬಿನಿಂದ 'ಕಾಸು' ಎಗರಿಸಿದ್ದುಂಟು. ಅಪರೂಪಕ್ಕೆ ಎಂಬಂತೆ ನಾಲ್ಕಾಣೆ, ಎಂಟಾಣೆ ಸಿಗುತ್ತಿತ್ತು. ಅಪ್ಪ ಒಮ್ಮೊಮ್ಮೆ ಕೇಳಿದಾಗ ನಮಗೇನು ತಿಳಿದಿಲ್ಲವೇನೊ ಎಂಬ ಸೋಗಿನ ನಟನೆ ಮಾಡಿದ್ದುಂಟು! ಆಗ್ಗೆ 'ಸುಳ್ಳು' ಹೇಳಿದ್ದೇನೊ ನಿಜ. ನನ್ನ ಮನಸ್ಸು 'ನೀನೀಗ ಸುಳ್ಳು ಹೇಳಿದ್ದೀಯಾ?" ಎಂದು ಹೇಳುತ್ತಿದ್ದರೂ 'ಸತ್ಯವಚನ'ಕ್ಕೆ ಬಾಗಲು ನನಗೆ ಸಾಧ್ಯವಾಗುತ್ತಿರಲಿಲ್ಲ. 'ಸತ್ಯವೇ ನಮ್ಮ ತಾಯಿ-ತಂದೆ' ಎಂಬ ಗೋವಿನ ಹಾಡು



ನನ್ನ ಮನಸ್ಸಿನಲ್ಲಿ ಇರುತ್ತಿತ್ತೇ ವಿನಾ, ಅದು ಬದುಕಿನ ಅಣುಕ್ಷಣ ಚರಿತವಾಗಲು ಸಾಧ್ಯವಾಗಲಿಲ್ಲ.

**ಮಹಾತ್ಮ**

ಗುರುದೇವ ರವೀಂದ್ರರಿಂದ ಗಾಂಧೀಜಿಯವರು ಮಹಾತ್ಮರೆಂದು ಕರೆಸಿಕೊಂಡರಷ್ಟೆ. ದೇಶದ ಸಮಸ್ತ ಜನರೂ 'ಮಹಾತ್ಮ' ಎಂದು ಭಾವಿಸಿದರು. ಸ್ವಾತಂತ್ರ್ಯ ಪಡೆದ ಮೇಲೆ ನನ್ನಂಥ ಲಕ್ಷಾಂತರ, ಕೋಟ್ಯಂತರ ಜನರ ಮನಸ್ಸಿನಲ್ಲಿ 'ಮಹಾತ್ಮ'ರಾಗಿ ನೆಲೆಯೂರಿ ನಿಂತರು. ಗಾಂಧೀಜಿಯವರ ರಾಜಕೀಯ ಗುರುಗಳಾದ ಶ್ರೀಗೋಪಾಲಕೃಷ್ಣ ಗೋಖಲೆ, ಹಿರಿಯ ರಾಷ್ಟ್ರವಾದಿ ಬಾಲಗಂಗಾಧರ ತಿಲಕ್, ಮುಂತಾದವರ ನಡುವೆ 'ಗಾಂಧೀಜಿ' ನೋಡನೋಡುತ್ತಲೇ ರಾಷ್ಟ್ರಶಿಖರವನ್ನು ಏರಿದರು. 'ಮಹಾತ್ಮಾಜಿ' ಎಂಬ ಹೆಸರು ಈಗ ಮಂತ್ರಸದೃಶವಾಗಿ ಉಳಿದು ಬಿಟ್ಟಿವೆ. ಇನ್ನಾರಿಗೂ ಇದನ್ನು ಹೇಳಲು ಸಾಧ್ಯವಿಲ್ಲ. ಇಡಿ ವಿಶ್ವವೇ 'ಮಹಾತ್ಮ' ಎಂಬ ಹೆಸರು ಕೇಳಿದಾಗ 'ಗಾಂಧೀಜಿ'ಯವರ ಸ್ಮೃತಿಚಿತ್ರವೇ ನಮ್ಮ ಎದುರು ನಿಲ್ಲುತ್ತದೆ. ಬಾಪು. 150ರ ಸಂಭ್ರಮವನ್ನು ಇಡಿ ದೇಶವೇ ಆಚರಿಸುತ್ತಿದೆ. ಇದು 'ಮಹಾತ್ಮ'ನ ನೈತಿಕಪ್ರಜ್ಞೆ ಮತ್ತು ಆಧ್ಯಾತ್ಮಿಕ ಮಾರ್ಗವನ್ನು ಏಕಕಾಲಕ್ಕೆ ಪ್ರತಿನಿಧಿಸುತ್ತಿದೆ. ನಮ್ಮ ಸಮಸ್ತ ಕ್ರಿಯೆಗಳ ಹಿಂದೆ ನೈತಿಕತೆ ಮತ್ತು ಆಧ್ಯಾತ್ಮಿಕ ಪರಿವೇಶಗಳು ಹಾಸು-ಹೊಕ್ಕಾಗಿರಬೇಕು. ಮಹಾತ್ಮಾಜಿ ಅವರು ಇವೆರಡರ ಸಂಕೇತದ ಮಹಾನ್ ರೂಪಕವೇ ಆಗಿದ್ದಾರೆ.

ನಾವು ದೇಶವನ್ನು ಕಟ್ಟುವಾಗ, ಸಾಮಾಜಿಕ ಬಲವನ್ನು ಗಟ್ಟಿಗೊಳಿಸುವಾಗ, ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ಮಿಸುತ್ತಿರುವಾಗ ನೈತಿಕತೆ ಮತ್ತು ಆಧ್ಯಾತ್ಮಿಕತೆಗಳೆಂಬ ಸಂಪೂರ್ಣಮಂತ್ರಗಳು ನಮಗೆ ದಾರಿದೀಪವಾಗಬೇಕಾಗಿದೆ.

# ಗಾಂಧಿ ಜಾಡು ಹಿಡಿದು...

– ಡಾ.ಹೆಚ್.ಎಸ್.ಸುರೇಶ್

**ಬಾ**ಂಗ್ಲಾದೇಶವನ್ನು ನೋಡುವ ಬಯಕೆ ನನಗಿತ್ತು. ನೆತ್ತರು ಬಸಿದ ನೌಖಾಲಿಯ ಆ ನೆಲದಲ್ಲಿ ನಡೆದಾಡಿದ ಮಹಾತ್ಮನ ಪಾದಧೂಳಿನ್ನು ಸ್ಪರ್ಶಿಸಿ ಪವಿತ್ರನಾಗುವ ಹಂಬಲವಿದ್ದಿತು.

ಮಹಾರಾಷ್ಟ್ರದಲ್ಲಿನ ಸೇವಾಗ್ರಾಮದಲ್ಲಿರುವ ಅಖಿಲ ಭಾರತ ಸರ್ವೋದಯ ಮಂಡಲ ಸರ್ವ ಸೇವಾ ಸಂಘ ಮತ್ತು ನೌಖಾಲಿ ಯಲ್ಲಿರುವ ಮಹಾತ್ಮಾ ಗಾಂಧೀ ಆಶ್ರಮ ಟ್ರಸ್ಟ್ ಹಾಗೂ ಬಾಂಗ್ಲಾದೇಶದ ವಿವಿಧ ಗಾಂಧೀ ವಿಚಾರ ಸಂಸ್ಥೆಗಳ ಸಹಯೋಗದಲ್ಲಿ ಕಳೆದ ವರ್ಷ ಗಾಂಧಿ 150 ಅಭಿಯಾನದ ಅಂಗವಾಗಿ ಸಂಘಟಿಸಲಾಗಿದ್ದ ಎಂಟು ದಿವಸಗಳ ಕೋಲ್ಕತ್ತಾ–ನೌಖಾಲಿ ಶಾಂತಿ–ಸಂಪ್ರೀತಿ–ಮೈತ್ರಿ ಯಾತ್ರಾದಲ್ಲಿ ಭಾಗವಹಿಸುವ ಅವಕಾಶ ದೊರಕಿತು. ದೇಶಾದ್ಯಂತ ಆಯ್ದ 19 ಗಾಂಧೀ ಕಾರ್ಯಕರ್ತರಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಪ್ರಾಧ್ಯಾಪಿಕೆ ಡಾ.ಅಬೀದಾ ಬೇಗಂ ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷ ಶ್ರೀ ಎಲ್.ನರಸಿಂಹಯ್ಯ ಸಹ ನಮ್ಮೊಂದಿಗಿದ್ದರು.

**ಯಾತ್ರಾದ ಉದ್ದೇಶ :** ಯಾವುದೇ ರಾಷ್ಟ್ರದ ಶಾಂತಿ ಹಾಗೂ ಸುರಕ್ಷತೆ ಆ ದೇಶದ ನಾಲ್ಕೂ ದಿಕ್ಕಿನ ಗಡಿಗಳಿಗೆ ಮಾತ್ರ ಸಂಬಂಧಿಸುವುದಿಲ್ಲ. ಅಕ್ಕಪಕ್ಕದ ದೇಶಗಳೊಂದಿಗಿನ ಪರಸ್ಪರ ಸಹಕಾರ ಪ್ರೀತಿ ಸೌಹಾರ್ದ ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಕೊಡು–ಕೊಳ್ಳುವಿಕೆ ಶಾಂತಿ ಸುರಕ್ಷತೆಗೆ ಆಧಾರವಾಗುತ್ತದೆ ಅನ್ನುವುದು ಗಾಂಧೀಜಿಯವರ ಸ್ಪಷ್ಟ ನಿಲುವಾಗಿತ್ತು. ಜೈ ಜಗತ್ ಪೂಜ್ಯ ವಿನೋಬಾ ಭಾವೆ ವಿಶ್ವಕ್ಕೆ ನೀಡಿದ ಸಂದೇಶವಾಗಿತ್ತು. ಈ ಯಾತ್ರೆಯ ಹೆಸರೇ ಅದರ ಉದ್ದೇಶವೂ ಆಗಿದ್ದಿತು.

ಕೋಲ್ಕತ್ತಾದಿಂದ ಢಾಕಾಗೆ ರಸ್ತೆ ಮಾರ್ಗವಾಗಿ ಸುಮಾರು 475 ಕಿಲೋಮೀಟರ್. ಬಸ್ಸುಗಳು 12 ಗಂಟೆಗಳಲ್ಲಿ ಈ ದೂರವನ್ನು ಕ್ರಮಿಸುತ್ತವೆ. ಶ್ಯಾಮೋಲಿ ಯಾತ್ರಿ ಪರಿಭಹನ್ ಬಸ್ಸುಗಳು ರೂ.1500 ಛಾರ್ಜು ಮಾಡುತ್ತವೆ. ಮಧ್ಯೆ ಪದ್ಮಾನದಿಯನ್ನು ಬಸ್ಸಿನ ಸಮೇತ ವಿಶಾಲವಾದ ಬಾರ್ಜ್‌ಗಳಲ್ಲಿ ದಾಟಬೇಕಾಗುತ್ತದೆ. ಇದೇ ಎರಡು ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಢಾಕಾದಿಂದ ನೌಖಾಲಿಗೆ ಸುಮಾರು 130 ಕಿ.ಮೀ. ಮೂರು ಗಂಟೆ ಪ್ರಯಾಣ. ವಿಮಾನದಲ್ಲಿ ಪ್ರಯಾಣಿಸಿದರೆ ಆನ್ ಅರೈವಲ್ ವೀಸಾ ದೊರಕುತ್ತದೆ. ರಸ್ತೆ ಮಾರ್ಗವಾಗಿ ಹೋಗುವವರು ಮೊದಲೇ ಕೋಲ್ಕತ್ತಾದಲ್ಲಿರುವ ಬಾಂಗ್ಲಾದೇಶ್ ರಾಯಭಾರಿ ಕಚೇರಿಯಲ್ಲಿ ಮುಂದಾಗಿ ವೀಸಾ ಪಡೆಯಬೇಕು ಕೋಲ್ಕತ್ತಾದಿಂದ ಪೆಟ್ರಾಪೋಲ್ ಗಡಿಗೆ 125 ಕಿ.ಮೀ. ಇಲ್ಲಿ ಭಾರತೀಯರ ಪಾಸ್ಪೋರ್ಟ್ ವೀಸಾ ತಪಾಸಣೆ ಆಗುತ್ತದೆ. ಎರಡೂ ದೇಶದ ನಡುವಿನ 15–20 ಮೀಟರ್ ಶೂನ್ಯ ಪ್ರದೇಶ ಎಂಬುದಾಗಿ ಕರೆಯಲಾಗುತ್ತದೆ. ಎರಡು ಗೇಟುಗಳನ್ನು ದಾಟಿದರೆ ಬಾಂಗ್ಲಾದೇಶ್ ಗಡಿ ಬೆನಾಪೋಲ್ ಇಲ್ಲಿ ಬಾಂಗ್ಲಾದೇಶ್ ಅಧಿಕಾರಿಗಳು ನಮ್ಮ ವೀಸಾ ಪಾಸ್ಪೋರ್ಟ್ ಚೆಕ್ ಮಾಡುತ್ತಾರೆ. ಅಲ್ಲಿಗೆ ಮುಗಿಯಿತು. ಮುಂದೆ ಅಲ್ಲಿಂದ ಜೆಸ್ಸೋರ್ ಜಿಲ್ಲಾಕೇಂದ್ರಕ್ಕೆ 50ಕಿ.ಮೀ. ಪೆಟ್ರಾಪೋಲ್ ಅಥವಾ ಬೆನಾಪೋಲ್‌ನಲ್ಲಿ ಕರೆನ್ಸಿ ವಿನಿಮಯ, ಮೊಬೈಲ್ ಸಿಮ್ ಕೊಳ್ಳಬಹುದು.

26 ಸೆಪ್ಟೆಂಬರ್ 2018 ಮಧ್ಯಾಹ್ನ 1ಕ್ಕೆ ಭಾರತ ಬಾಂಗ್ಲಾ ನಡುವಿನ ಶೂನ್ಯ ಪ್ರದೇಶವನ್ನು ದಾಟಿದ ಕೂಡಲೇ 19 ಕಾರ್ಯಕರ್ತರ ನಮ್ಮ ಯಾತ್ರಾ ತಂಡಕ್ಕೆ ಮನಮುಟ್ಟುವಂತಹ ಸ್ವಾಗತ ದೊರೆಯಿತು. ನೌಖಾಲಿ ಗಾಂಧೀ ಆಶ್ರಮ ಟ್ರಸ್ಟ್‌ನ ನಿರ್ದೇಶಕ ಶ್ರೀ ರಹ ನಬ ಕುಮಾರ್ ಮತ್ತು ಅವರ ಸಹೋದ್ಯೋಗಿಗಳು ನಮ್ಮನ್ನು ಬರಮಾಡಿಕೊಂಡರು. ಸರ್ವಸೇವಾ ಸಂಘದ ಅಧ್ಯಕ್ಷ ಶ್ರೀ ಮಹದೇವ್ ವಿದ್ರೋಹಿ ಯಾತ್ರಾ ನಿರ್ದೇಶಕ ಶ್ರೀ ಚಂದನ್ ಪಾಲ್ ಪರಸ್ಪರ ಪರಿಚಯ ಶುಭಾಷಯ ವಿನಿಮಯ ಮಾಡಿಕೊಟ್ಟರು. ಠಾಕೂರ್ ಮಹರಾಜ್ ಮಂದಿರದಲ್ಲಿ ಊಟವಾದ ನಂತರ ನಮ್ಮನ್ನು ಜೆಸ್ಸೋರ್ ಪ್ರೌಢಶಾಲೆಗೆ ಕರೆದೊಯ್ಯ–ಲಾಯಿತು. ಶಾಲಾ ಆವರಣದಿಂದ ನಗರದೊಳಗೆ ಒಂದು ಕಿಲೋಮೀಟರ್ ಶೋಭಾ ಯಾತ್ರೆ ಮಾಡಿದೆವು. ಶಾಲೆಯ 40 ವಿದ್ಯಾರ್ಥಿನಿಯರು ನಡೆಸಿಕೊಟ್ಟ 60 ನಿಮಿಷಗಳ ಗಾಂಧೀ ಭಜನ್ ಮತ್ತು ಸಾಂಸ್ಕೃತಿಕ ನೃತ್ಯ ಅದೊಂದು ಅದ್ಭುತ ಮರೆಯಲಾದ ಅನುಭವ. ಶಾಲಾ ಸಂಸ್ಥೆಯ ಅಧ್ಯಕ್ಷ ಶ್ರೀ ದೀಪಾಂಕುರ್ ದಾಸ್ ಇಂತಹಾ ಕಾರ್ಯಕ್ರಮಗಳ ಅಗತ್ಯತೆ ಬಗ್ಗೆ ಮಾತನಾಡಿದರು. ಆ ರಾತ್ರಿ ಸಮೀಪದ ರಾಮನಗರ್‌ನಲ್ಲಿ ಇರುವ ಗ್ರಾಮೀಣ ಪುನರ್ ನಿರ್ಮಾಣ್ ಪ್ರತಿಷ್ಠಾನ್ ನಿಲಯದಲ್ಲಿ ಉಳಿದುಕೊಂಡೆವು. ಇದು ಯುವಜನರಿಗೆ ವೃತ್ತಿ ಶಿಕ್ಷಣ ಮತ್ತು ಕೌಶಲ್ಯ ನೀಡುವ ವಿದ್ಯಾರ್ಥಿ ನಿಲಯವಾಗಿದೆ.

27ರ ಮುಂಜಾವಿನ ನಸುಕಿನಲ್ಲಿಯೇ ಮಧುಮತಿ ಮತ್ತು ರೂಪಸಿ ನದಿಗಳನ್ನು ಹಲವಾರು ಜಿಲ್ಲೆಗಳನ್ನೂ ದಾಟಿ ಐತಿಹಾಸಿಕ ಟುಂಗಿಪಾರಾ ತಲುಪಿದೆವು. ಇಲ್ಲಿರುವ ರಾಷ್ಟ್ರಪಿತ ಬಂಗ ಬಂಧು ಶೇಖ್ ಮುಜೀಬುರ್ ರಹಮಾನ್ ಮತ್ತು ಅವರ ತಂದೆ ತಾಯಿ ಅವರ ಸಮಾಧಿಗಳನ್ನು ಸಂದರ್ಶಿಸಿ ಪುಷ್ಪ ಗುಚ್ಛವನ್ನು ಇರಿಸಿ, ಅವರ ಜೀವನ ಮತ್ತು ಸಾಧನೆಗಳ ಕುರಿತ ಪ್ರದರ್ಶನವನ್ನು ನೋಡಿದೆವು. ಪದ್ಮಾ ನದಿಯನ್ನು ದಾಟಿ ಢಾಕಾ ಮಾರ್ಗವಾಗಿ ನೌಖಾಲಿ ಜಯಾಗ್ ಗಾಂಧಿ ಆಶ್ರಮ ತಲುಪಿದಾಗ ಬೆಳಗಿನ ಮೂರು ವರೆ ಗಂಟೆಯಾಗಿತ್ತು.

ಯಾತ್ರಾದ ಮೂರನೇ ಸ್ಮರಣೀಯ ದಿನ, ಬಾಪು ಚಾಂದ್‌ಪುರ್‌ನಿಂದ ನೌಖಾಲಿಯ ಚೌಮುಹಾನಿ ರೈಲ್ವೆ ನಿಲ್ದಾಣಕ್ಕೆ ಬಂದಿಳಿದ ದಿನ 7 ನವೆಂಬರ್ 1946, ಸ್ಟೇಷನ್ ಮಾಸ್ಟರ್ ಉತ್ಸಾಹಿ ಯುವಕ ನಜಿಮುದ್ದೀನ್ ಬಹಳಷ್ಟು ಸಾರ್ವಜನಿಕರನ್ನು ಕಲೆಹಾಕಿ ನಿಲ್ದಾಣವನ್ನೆಲ್ಲಾ ಅಲಂಕರಿಸಿದ್ದರು ಸಭೆಯನ್ನು ಉದ್ದೇಶಿಸಿ ಮಾತನಾಡಲಾಯಿತು. ಯಾತ್ರಾದ ನಾಲ್ಕನೇ ದಿನದ ಕಾರ್ಯಕ್ರಮ ಶ್ರೀರಾಂಪುರ್ ಹೈಸ್ಕೂಲ್‌ನಲ್ಲಿ ಆಯೋಜಿಸಲಾಗಿತ್ತು. ಯಾತ್ರೆಯಲ್ಲಿ ಭಾಗವಹಿಸಿದ್ದ 95 ವರ್ಷದ ಭಾಗಲ್ಪುರ್‌ನ ಹಿಂದಿನ (1977) ಸಂಸದ ಹಾಗೂ ವಿಶ್ವವಿದ್ಯಾಲಯದ ಕುಲಪತಿ ಡಾ.ಪ್ರೊಫೆಸರ್ ರಾಮ್ ಸಿಂಗ್ ಜಿ ಗಾಂಧೀ, ಭಗವದ್ಗೀತೆ, ಕೊರಾನ್‌ಗಳನ್ನೂ ಉಲ್ಲೇಖಿಸಿ ಮಾಡಿದ ವಿದ್ವತ್ಪೂರ್ಣ ಭಾಷಣ ಎಲ್ಲರನ್ನು ಮಂತ್ರ ಮುಗ್ಧರನ್ನಾಗಿಸಿತು. ಶ್ರೀರಾಂಪುರ್‌ನಲ್ಲಿ ಗಾಂಧೀ 45 ದಿನ ತಂಗಿದ್ದರು. 90ರ ಆಸುಪಾಸಿನಲ್ಲಿದ್ದ ಜನಾಬ್ ಲಾಲ್ಮಿಯಾ ಅವರು ರಘುಪತಿ ರಾಘವ ಹಾಡಿ ಗಾಂಧಿಯೊಂದಿಗೆ ಕಳೆದ ತಮ್ಮ ಬಾಲ್ಯದ ದಿನಗಳನ್ನು ಹಂಚಿಕೊಂಡರು.

ಮುಂದಿನ ದಿನಗಳಲ್ಲಿ ನಾವು ನೌಖಾಲಿ ಕೃಷಿ ತಂತ್ರಜ್ಞಾನ ವಿಶ್ವವಿದ್ಯಾಲಯ, ರತನ್ಪುರ್, ಮುನ್ಸಿರ್ ಹಾತ್, ಫೆನಿ, ಹತಿಯ ಮುಂತಾದ ಪ್ರದೇಶಗಳನ್ನು ಸಂದರ್ಶಿಸಿ ಜನರೊಂದಿಗೆ ಸಂವಾದ ನಡೆಸಿದೆವು ಅಕ್ಟೋಬರ್ 2 ಗಾಂಧಿ ಆಶ್ರಮ ಟ್ರಸ್ಟ್‌ನ ಪ್ರಾಂಗಣ ಮತ್ತು ಬೃಹತ್ ಪೆಂಡಾಲ್ ಶಾಲಾ ಮಕ್ಕಳು ಮತ್ತು ಸಾರ್ವಜನಿಕರಿಂದ ತುಂಬಿ ಹೋಯಿತು. ನೌಖಾಲಿ ವಿಜ್ಞಾನ–ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಹಿದುಜ್ಜಮಾನ್ ಬಾಂಗ್ಲಾ ವಿಮೋಚನೆಯಲ್ಲಿ ಭಾರತದ ಕೊಡುಗೆ, ಗಾಂಧಿ ಮೌಲ್ಯ ಮತ್ತು ಆದರ್ಶಗಳ ಬಗ್ಗೆ ಅದ್ಭುತವಾಗಿ ಮಾತನಾಡಿದರು. ಪ್ರಭಾತ್ ಫೇರಿ ಕೈಗೊಳ್ಳಲಾಯಿತು. ಯಾತ್ರಿಗಳಿಂದ ಆಶ್ರಮದ ಆವರಣದಲ್ಲಿ ಸಸಿ ನಡೆವ ಕಾರ್ಯ ನಡೆಯಿತು.

ಇಂದೇ ಮಧ್ಯಾಹ್ನ ಢಾಕಾಗೆ ಪ್ರಯಾಣಿಸಿದೆವು. 3 ಅಕ್ಟೋಬರ್ 2018 ನಮ್ಮ ಭಾರತ –ಬಾಂಗ್ಲಾ ಶಾಂತಿ–ಸಂಪ್ರೀತಿ–ಮೈತ್ರಿ ಯಾತ್ರಾದ ಕಡೆಯ ದಿನ. ಢಾಕಾದಲ್ಲಿನ ಲಿಬರೇಶನ್ ವಾರ್ ಮ್ಯೂಸಿಯಮ್ ಕಣ್ತುಂಬಿಕೊಂಡೆವು. ಸ್ವಾತಂತ್ರ್ಯಕ್ಕಾಗಿ ದೇಶವೊಂದು ತೆರಬೇಕಾದ ಬೆಲೆ ಅರ್ಥವಾಯಿತು. 2017ರಲ್ಲಿ ಬಾಂಗ್ಲಾ ಪ್ರಧಾನಿ ಶ್ರೀಮತಿ ಷೇಕ್ ಹಸೀನಾ ಲೋಕಾರ್ಪಣೆ ಮಾಡಿದ ಈ ಭವ್ಯ ಭವನದ ಭಿತ್ತಿಯ ಮೇಲೆ ಕೆತ್ತಿರುವ ಈ ವಾಕ್ಯಗಳು ಮನಕರಗಿಸುತ್ತವೆ.

**"ಸಾಕ್ಷಿ, ಬಂಗಾಲದ ರಕ್ತಸಿಕ್ತ ನೆಲ, ಇಲ್ಲಿನ ಚಂದ್ರ ನಕ್ಷತ್ರಗಳು, ಹುತಾತ್ಮರ ನೆನಪು ಮರೆತಿಲ್ಲ ಯಾವುದನ್ನೂ ನಾವು ಮರೆಯಲಾರೆವು".**

# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ



ಇಡೀ ದೇಶದಲ್ಲಿ ಕೇವಲ ಹದಿನೈದು ಮಹಿಳಾ ವಿಶ್ವವಿದ್ಯಾಲಯಗಳಿದ್ದು ಈ ಪೈಕಿ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವೂ ಒಂದು. ಅಷ್ಟೇ ಅಲ್ಲ, ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾಲಯ ಕೂಡಾ. ಮಹಿಳಾ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ, ಪಿಜಿ ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಅವರ ನೇತೃತ್ವದಲ್ಲಿ ಹಲವಾರು ಶೈಕ್ಷಣಿಕ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಂಡು ಮಹಿಳಾ ಸಬಲೀಕರಣದಲ್ಲಿ ಮಹಿಳಾ ವಿವಿ ದಾಪುಗಾಲು ಹಾಕುತ್ತಿದೆ.

## ಲಭ್ಯವಿರುವ ಕೋರ್ಸ್‌ಗಳು

- **ಕಲಾ ನಿಕಾಯ:** ಎಂ.ಎ– ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಪ್ರದರ್ಶಕ ಕಲೆಗಳ ವಿಭಾಗ (ಎಂ.ಮ್ಯೂಜಿಕ್–ಹಿಂದೂಸ್ತಾನಿ ಮ್ಯೂಜಿಕ್),
- **ಸಮಾಜ ವಿಜ್ಞಾನ ನಿಕಾಯ:** ಎಂ.ಎ.: ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ಮಹಿಳಾ ಅಧ್ಯಯನ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ (ಎಂಎಲ್‌ಐಸಿ) ಮತ್ತು ಮಾಸ್ಟರ್ ಆಫ್ ಸೋಶಿಯಲ್ ವರ್ಕ್ (ಎಂಎಸ್‌ಡಬ್ಲ್ಯು),
- **ವಿಜ್ಞಾನ ನಿಕಾಯ:** ಎಂ.ಎಸ್.ಸಿ.– ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ, ಸಂಖ್ಯಾಶಾಸ್ತ್ರ, ಜೈವಿಕ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಔಷಧ ರಸಾಯನಶಾಸ್ತ್ರ, ಆಹಾರ ಸಂಸ್ಕರಣೆ ಮತ್ತು ಪೌಷ್ಟಿಕ, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಎಂಸಿಎ.
- **ಶಿಕ್ಷಣ ನಿಕಾಯ:** ಎಂ.ಈಡಿ, ಬಿಪಿಈಡಿ, ಎಂ.ಪಿ.ಈಡಿ,
- **ವಾಣಿಜ್ಯ ನಿಕಾಯ:** ಎಂ.ಕಾಂ. ಮತ್ತು ಎಂಬಿಎ,
- ಪಿಜಿ ಡಿಪ್ಲೋಮಾ ಇನ್– ಕಂಪ್ಯೂಟರ್ ಸೈನ್ಸ್, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ, ಮಹಿಳಾ ಸಬಲೀಕರಣ, ಇಂಗ್ಲಿಷ್ ಫಾರ್ ಕಮ್ಯುನಿಕೇಷನ್, ಇಂಗ್ಲಿಷ್‌ನಲ್ಲಿ ಭಾಷಾಂತರ, ಮ್ಯೂಜಿಕ್, ಪೌಷ್ಟಿಕಾಂಶ ಮತ್ತು ನಿಯಮಿತ ಆಹಾರ, ಕ್ರೀಡಾ ಪೌಷ್ಟಿಕತೆ, ಸಹಕಾರ ಆಡಳಿತ, ಯೋಗಾ ಸ್ಟಡೀಸ್.
- ಸರ್ಟಿಫಿಕೇಟ್ ಕೋರ್ಸ್ ಇನ್– ಲೈಬ್ರರಿ ಸೈನ್ಸ್. ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ, ಯೋಗಾ ಸ್ಟಡೀಸ್, ಮ್ಯೂಜಿಕ್, ಜೆರಿಯಾಟ್ರಿಕ್ ಕೇರ್, ಪೇರೆಂಟಿಂಗ್, ಮೂಲಭೂತ ಆಹಾರ ಸಂಸ್ಕರಣೆ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಇಂಗ್ಲಿಷ್ ಪ್ರೊಫಿಸಿಯೆನ್ಸಿ.

## ಸೌಲಭ್ಯಗಳು

- ಅತ್ಯಾಧುನಿಕ ಬೋಧನಾ ತಂತ್ರಗಳು– ಸ್ಮಾರ್ಟಬೋರ್ಡ್ ಮತ್ತು ಡಿಜಿಟಲ್ ಕ್ಲಾಸ್‌ರೂಂ
- ಮಲ್ಟಿಮೀಡಿಯಾ ಲ್ಯಾಬ್ ಮತ್ತು ಲಾಂಗ್ವೇಜ್ ಲ್ಯಾಬ್
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಹಾಸ್ಟೆಲ್ ವ್ಯವಸ್ಥೆ
- ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್
- 24x7 ಇಂಟರ್‌ನೆಟ್ ಸೌಲಭ್ಯ
- ಮಕ್ಕಳ ಲಾಲನೆ–ಪಾಲನೆಗೆ ಡೇಕೇರ್ ಸೆಂಟರ್
- ನಗರದ ವಿವಿಧ ಭಾಗಗಳಿಂದ ವಿಶ್ವವಿದ್ಯಾಲಯಕ್ಕೆ ವಾಹನ ವ್ಯವಸ್ಥೆ

## ವೈಶಿಷ್ಟ್ಯಗಳು







- ಮಹಿಳಾ ವಿಶ್ವವಿದ್ಯಾಲಯ ಅತ್ಯಂತ ವಿಶಿಷ್ಟವಾದ ಪಠ್ಯಕ್ರಮವನ್ನು ಹೊಂದಿದೆ. ವಿದ್ಯಾರ್ಥಿಗಳು ತಾವು ಓದುತ್ತಿರುವ ಕೋರ್ಸ್‌ಗಳ ಜತೆಗೆ ಪ್ರತಿಯೊಂದು ಸೆಮಿಸ್ಟರ್‌ನಲ್ಲಿ ಬೇರೊಂದು ಉಪಯುಕ್ತ ವಿಷಯನ್ನು ಆಯ್ಕೆ ಮಾಡಿಕೊಂಡು ಓದುವ ಅವಕಾಶ ಕಲ್ಪಿಸಲಾಗಿದೆ.
- ಎರಡು ವರ್ಷದ ಸ್ನಾತಕೋತ್ತರ ಕೋರ್ಸ್‌ಗಳನ್ನು ಓದುವಾಗಲೇ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಏಕಕಾಲಕ್ಕೆ ಓದುವ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಎರಡು ವರ್ಷಗಳಲ್ಲಿ ಮೂರು ಪದವಿಗಳನ್ನು ಪಡೆಯಬಹುದಾಗಿದೆ!
- ಸುಸಜ್ಜಿತ ಗ್ರಂಥಾಲಯ ಸ್ಥಾಪಿಸಲಾಗಿದ್ದು ಗ್ರಂಥಾಲಯದಲ್ಲಿ ಎಲ್ಲಾ ಕೋರ್ಸ್‌ಗಳಿಗೆ ಅಗತ್ಯವಿರುವ ಪುಸ್ತಕ ಸಂಗ್ರಹವಿದೆ. ಜತೆಗೆ ರಾಷ್ಟ್ರ, ಅಂತರರಾಷ್ಟ್ರೀಯ ಜರ್ನಲ್‌ಗಳು, ಈ–ಜರ್ನಲ್‌ಗಳು ಲಭ್ಯವಿವೆ. ಅಷ್ಟೇ ಅಲ್ಲ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪುಸ್ತಕಗಳು ಕೂಡಾ ಗ್ರಂಥಾಲಯದಲ್ಲಿವೆ. ಈ ಎಲ್ಲಾ ಸೌಲಭ್ಯಗಳನ್ನು ವಿದ್ಯಾರ್ಥಿನಿಯರು ಪಡೆದುಕೊಳ್ಳಬಹುದಾಗಿದೆ.
- ವಿದ್ಯಾರ್ಥಿನಿಯರು ಕ್ರೀಡಾ, ಸಾಂಸ್ಕೃತಿಕ ಮತ್ತಿತರ ಪಠ್ಯೇತರ ಚಟುಟವಟಿಕೆಗಳಲ್ಲಿ ನಿಯಮಿತವಾಗಿ ಭಾಗವಹಿಸುವಂತೆ ಮಾಡಲು ಸೂಕ್ತ ವಾತಾವರಣ ನಿರ್ಮಾಣ ಮಾಡಲಾಗಿದ್ದು ವಿದ್ಯಾರ್ಥಿನಿಯರಲ್ಲಿರುವ ಸುಪ್ತ ಪ್ರತಿಭೆಯ ಪ್ರಕಾಶನಕ್ಕೆ ವೇದಿಕೆ ಒದಗಿಸಲಾಗಿದೆ. ಪ್ರತಿ ವರ್ಷ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳ ಯುವಜನೋತ್ಸವಗಳನ್ನು ಸಂಘಟಿಸಲಾಗುತ್ತಿದೆ.









ಹೆಚ್ಚಿನ ಮಾಹಿತಿಗಾಗಿ: ಪ್ರೊ.ಆರ್.ಸುನಂದಮ್ಮ, ಕುಲಸಚಿವರು,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ– 586108.
ದೂರವಾಣಿ ಸಂಖ್ಯೆ: 08352–229051 ಮತ್ತು 08352–229054; website: www.kswu.ac.in

ಶುಭಾಶಯಗಳೊಂದಿಗೆ

# ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,

ನಂ. 32, 3ನೇ ಮಹಡಿ, ಡಿ. ದೇವರಾಜ ಅರಸ್ ರಸ್ತೆ (ರೇಸ್‌ಕೋರ್ಸ್ ರಸ್ತೆ), ಬೆಂಗಳೂರು-560001
ದೂರವಾಣಿ : 22268018/19, ಫ್ಯಾಕ್ಸ್: 22261346 Email ID: kscfltd@gmail.com





ಎನ್. ಗಂಗಣ್ಣ
ಅಧ್ಯಕ್ಷರು



ಎನ್. ಚಂದ್ರಪ್ಪ
ಉಪಾಧ್ಯಕ್ಷರು



ಎಸ್.ಎನ್.ಅರುಣ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು

ಹಾಗೂ ಆಡಳಿತ ಮಂಡಳಿ ಸದಸ್ಯರು

## ಸಹಕಾರ ಚಳವಳಿಯ ಸಮಗ್ರ ಅಭಿವೃದ್ಧಿಗೆ ಪರಿಣಾಮಕಾರಿ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ನೀಡುತ್ತಿರುವ ಮಾತ್ರ ಸಂಸ್ಥೆ

- ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಎಲ್ಲಾ ಸಹಕಾರ ಸಂಘಗಳ ಸದಸ್ಯರಿಗೆ ಸಹಕಾರ ಶಿಕ್ಷಣ, ತರಬೇತಿ ನೀಡುವುದು.
- ಮಹಿಳೆಯರಿಗೆ-ಯುವಜನರಿಗೆ ಸಹಕಾರ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ವಿಶೇಷ ಕಾರ್ಯಕ್ರಮಗಳು.
- ಸಹಕಾರ ಕ್ಷೇತ್ರದ ಸಿಬ್ಬಂದಿಯನ್ನು ದಕ್ಷರನ್ನಾಗಿಸಲು ವೃತ್ತಿಪರ ತರಬೇತಿ ನೀಡುವುದು.
- ಸಹಕಾರ ತರಬೇತಿ ಕೇಂದ್ರಗಳ (ಕೆ.ಐ.ಸಿ.ಎಂ) ಮೂಲಕ ಸಹಕಾರ ಶಿಕ್ಷಣ, ಕಂಪ್ಯೂಟರ್ ತರಬೇತಿಗೆ ಆದ್ಯತೆ.
- ಸಹಕಾರ ಸಂಸ್ಥೆಗಳ ಸಿಬ್ಬಂದಿಗಳಿಗೆ 6 ತಿಂಗಳ ದೂರಶಿಕ್ಷಣ ಸಹಕಾರ ತರಬೇತಿಯನ್ನು ನೂತನವಾಗಿ ಪ್ರಾರಂಭಿಸಲಾಗಿದೆ.
- ಅಬಲವರ್ಗದ, ಅಲ್ಪಸಂಖ್ಯಾತರ ಮತ್ತು ಗುಡ್ಡಗಾಡು ಜನರಿಗೆ ಸಹಕಾರ ಕ್ಷೇತ್ರದ ಬಗ್ಗೆ ಅಗತ್ಯ ಶಿಕ್ಷಣ, ತರಬೇತಿ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ಸಭೆ, ಸಮ್ಮೇಳನ, ವಿಚಾರಗೋಷ್ಠಿ, ಜಾಗೃತಿ ಕಾರ್ಯಕ್ರಮ, ನಾಯಕತ್ವ ತರಬೇತಿ ವ್ಯವಸ್ಥೆ ಕೈಗೊಳ್ಳುವುದು.
- ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಸಹಕಾರ ಕ್ಷೇತ್ರದೆಡೆ ಆಕರ್ಷಿಸಲು ಪ್ರಬಂಧ ಮತ್ತು ಚರ್ಚಾ ಸ್ಪರ್ಧೆ ಏರ್ಪಡಿಸುವುದು.
- ಸಹಕಾರಿ ಕ್ಷೇತ್ರದ ಸಾಧನೆಗಳ ಬಗ್ಗೆ ಪರಿಣಾಮಕಾರಿ ಪ್ರಚಾರ ನೀಡಲು "ಸಹಕಾರ" ವಾರಪತ್ರಿಕೆ ಪ್ರಕಟಣೆ-ಮಾಧ್ಯಮಗಳ ಪರಿಣಾಮಕಾರಿ ಬಳಕೆ ಹಾಗೂ ಸಾಹಿತ್ಯ ಪ್ರಕಟಣೆ. ಸಹಕಾರ ವಾರಪತ್ರಿಕೆಯ ಸಾರ್ಥಕ 50 ವರ್ಷಗಳ ಸಂಭ್ರಮಾಚರಣೆ

# ಶಿಕ್ಷಣದ ಬಗ್ಗೆ ಗಾಂಧೀಜಿಯ ನಿಲುವು

– ಸುಮ ಚಂದ್ರಶೇಖರ್

**ಪುಸ್ತಕಗಳಿಂದ ಮಾತ್ರವೇ ವಿದ್ಯೆ ಕಲಿಸುವುದರಿಂದ ಪ್ರಯೋಜನವಿಲ್ಲ. ಅಭ್ಯಾಸದಿಂದ ಕಲಿಯಬೇಕು. ಮೂಲಶಿಕ್ಷಣದಲ್ಲಿ, ಉದ್ಯೋಗದ ಮೂಲಕ ಜನರಿಗೆ ವಿದ್ಯೆಯನ್ನು ಕಲಿಸಬೇಕು.**



ಗಾಂಧೀಜಿಯವರ ದೃಷ್ಟಿಯಲ್ಲಿ ಶಿಕ್ಷಣವೆಂದರೆ ಮಗುವಿನ ಸರ್ವಾಂಗೀಣ ಬೆಳವಣಿಗೆ. ಮಗುವಿನ ಮನಸ್ಸು ದೇಹ ಆತ್ಮಗಳ ಉತ್ತಮ ಶಕ್ತಿಗಳೆನ್ನಲ್ಲಾ ಸರ್ವೋತೋ–ಮುಖವಾಗಿ ವಿಕಸನಗೊಳಿಸುವುದು. ಸಾಕ್ಷರತೆ ಪ್ರಾರಂಭವಾಗಲಿ ಅಥವಾ ಮುಕ್ತಾಯವಾಗಲಿ ಅಲ್ಲ. ಅದು ಜನತೆಯನ್ನು ಶಿಕ್ಷಿತರನ್ನಾಗಿ ಮಾಡಲು ಒಂದು ಸಾಧನವಾಗಿದೆ.

ಗಾಂಧೀಜಿಯವರ ಶಿಕ್ಷಣ ವಿಚಾರ ಹೀಗಿದ್ದಿತು. ಶಿಕ್ಷಣ ಬುದ್ಧಿಗೆ ಮಾತ್ರ ಸೀಮಿತವಾಗಿರದೆ ಹೃದಯ ಸಂಸ್ಕಾರಕ್ಕೆ ಹಾಗೂ ಕೈಕಸುಬುಗಳಿಗೆ ಆದ್ಯತೆ ನೀಡಬೇಕು. ಮಕ್ಕಳಿಗೆ ಅವರ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದಲ್ಲಿಯೇ ಉಪಯೋಗಕರವಾದ ಕೆಲವು ಕರಕುಶಲ ಕಲೆಗಳನ್ನು ಕಲಿಸಬೇಕು. ಶಾಲೆಗಳಲ್ಲಿ ಮಕ್ಕಳಿಂದ ತಯಾರಾದ ವಸ್ತುಗಳನ್ನು ಸರ್ಕಾರ ಕೊಳ್ಳಬೇಕು. ಆ ಮೂಲಕ ಪ್ರತಿ ಶಾಲೆಯೂ ಸ್ವಾವಲಂಬನೆಯನ್ನು ಬೆಳೆಸಿಕೊಳ್ಳಬೇಕು.

ಕರಕೌಶಲಗಳನ್ನು ಯಾಂತ್ರಿಕವಾಗಿ ಕಲಿಸದೆ ವೈಜ್ಞಾನಿಕ ರೀತಿಯಲ್ಲಿ ಆಸಕ್ತಿ ಹುಟ್ಟುಸುಂತೆ ಕಲಿಸಬೇಕು. ಕಲಿಕೆಯ ಪ್ರತಿ ಹಂತದಲ್ಲಿ ಪ್ರಶ್ನೆಗಳು ಹುಟ್ಟುವಂತಿದ್ದು ಅವುಗಳಿಗೆ ಉತ್ತರಗಳನ್ನು ಕಂಡುಕೊಳ್ಳುತ್ತ ಮಕ್ಕಳು ಮುಂದೆ ಸಾಗಬೇಕು. ಇಂತಹ ಶಿಕ್ಷಣ ಪದ್ಧತಿ ನಮ್ಮ ಮಕ್ಕಳನ್ನು ಸ್ವಾವಲಂಬಿಗಳನ್ನಾಗಿ ಮಾಡುವುದಲ್ಲದೆ ದುಡಿಮೆಯ ಬಗ್ಗೆ ಅವರಲ್ಲಿ ಗೌರವ ಭಾವನೆ ಬೆಳೆಸುತ್ತದೆ ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಪ್ರಾಥಮಿಕ ಶಿಕ್ಷಣದಲ್ಲಿ ಸಂಗೀತ ಸೇರಬೇಕೆಂದು ಗಾಂಧೀಜಿ ಹೇಳುತ್ತಿದ್ದರು. ಮಕ್ಕಳ ಶಿಕ್ಷಣದಲ್ಲಿ ಕೈಕಸಬು, ಚಿತ್ರಕಲೆ, ದೈಹಿಕ ಶಿಕ್ಷಣ ಮತ್ತು ಸಂಗೀತ ಇವುಗಳು ಜೊತೆಯಾಗಿ ಸಾಗಬೇಕೆನ್ನುವುದು ಅವರ ಅಭಿಪ್ರಾಯವಾಗಿತ್ತು. ಸಂಗೀತ ಹೃದಯಸ್ಪರ್ಶಿ ಗುಣವನ್ನು ಹೊಂದಿದ್ದು ಮಕ್ಕಳ ಭಾವನೆಗಳನ್ನು ಅರಳಿಸುತ್ತದೆ. ಮಕ್ಕಳು ನಿತ್ಯವೂ ಒಟ್ಟಾಗಿ ರಾಷ್ಟ್ರಭಕ್ತಿಯ ಗೀತೆಗಳನ್ನು ಹಾಡಬೇಕೆಂದು ಅವರು ಅಪೇಕ್ಷಿಸಿದ್ದರು.

ಭಾರತದಲ್ಲಿ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪದ್ಧತಿ ಜಾರಿಗೆ ಬರಬೇಕೆನ್ನುವುದು ಗಾಂಧೀಜಿಯವರ ಖಚಿತ ನಿಲುವಾಗಿತ್ತು ಗುಡಿಕೈಗಾರಿಕೆ, ಕರಕುಶಲಗಳನ್ನು ಮಕ್ಕಳ ಬಿಡುವಿನ ವೇಳೆಯಲ್ಲಿ ಕಲಿಸುವುದರ ಮೂಲಕ ಅವರ ಮನಸ್ಸು ದೇಹ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಬೆಳಸಬೇಕೆಂದು ಅವರು ಹೇಳಿದರು. ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ ಮಕ್ಕಳು ತಪ್ಪುಗಳನ್ನು ಮಾಡುತ್ತಲೆ ಕಲಿಯಬೇಕೆಂದು ಅವರು ಸೂಚಿಸುತ್ತಿದ್ದರು. ಶಿಕ್ಷಣದ ಗುರಿ ಎಂದರೆ ಹೃದಯ ಪರಿವರ್ತನೆ. ಆ ಮೂಲಕ ಆತ್ಮದ ಅರಿವು ಹುಟ್ಟಿ ಒಳಿತು ಕೆಡಕುಗಳ ವ್ಯತ್ಯಾಸವನ್ನು ತಿಳಿಯುವ ಸಾಮರ್ಥ್ಯ ಪಡೆಯುವಂತಾಗಬೇಕೆಂಬುದು ಗಾಂಧೀಜಿಯವರ ವಿಚಾರವಾಗಿತ್ತು. ಶಿಕ್ಷಣದಲ್ಲಿ ಬೌದ್ಧಿಕ ವಿಕಾಸವನ್ನಷ್ಟೇ ಉದ್ದೀಪಿಸುವ ಕಲಿಕೆಗಿಂತ ಮೂಲಶಿಕ್ಷಣದ ಮಹತ್ವವನ್ನು ಗಾಂಧೀಜಿ ಪ್ರತಿಪಾದಿಸಿದರು. ಮಗುವಿನ ಕುಟುಂಬಕ್ಕೆ ರೂಢಿಗತವಾಗಿ ಬಂದ ಕುಲಕಸುಬಿನ ಬಗ್ಗೆ ಸಮಗ್ರವಾಗಿ ಮತ್ತು ವೈಜ್ಞಾನಿಕವಾಗಿ ಮಾಹಿತಿ ನೀಡುವುದರಿಂದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಸಾಧ್ಯವೆಂಬುದು ಗಾಂಧೀಜಿಯ ನಿಲುವಾಗಿತ್ತು.

ಚಾರಿತ್ರ್ಯ ನಿರ್ಮಾಣವೇ ಶಿಕ್ಷಣದ ಗುರಿ, ಮಕ್ಕಳಲ್ಲಿ ಧೈರ್ಯ, ಶಕ್ತಿ ಮತ್ತು ಸದ್ಗುಣಗಳನ್ನು ಬೆಳೆಸುವುದು ಶೈಕ್ಷಣಿಕ ಕಲಿಕೆಗಿಂತಲೂ ಮುಖ್ಯವೆಂದು ಗಾಂಧೀಜಿ ಅಭಿಪ್ರಾಯ ಪಟ್ಟಿದ್ದಾರೆ. ಹೃದಯದ ಶಿಕ್ಷಣವನ್ನು ಪುಸ್ತಕಗಳ ಮೂಲಕ ಕಲಿಸುವುದು ಸಾಧ್ಯವಿಲ್ಲ ; ಶಿಕ್ಷಕನ ಸಜೀವ ಸಂಸ್ಪರ್ಶದಿಂದ ಮಾತ್ರ ಸಾಧ್ಯ. ಆದ್ದರಿಂದ ಶಿಕ್ಷಕರಾದ ಪುರುಷರು ಮತ್ತು ಮಹಿಳೆಯರು ಶುದ್ಧ ಚಾರಿತ್ರ್ಯವನ್ನು ಹೊಂದಿರಬೇಕು ಎನ್ನುವುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

**(ಸದ್ಯದಲ್ಲೇ ಪ್ರಕಟಗೊಳ್ಳಲಿರುವ ಲೇಖಕಿಯ ಗಾಂಧಿ ವ್ಯಕ್ತಿತ್ವ ದರ್ಶನ ಸಂಕಲನದ 'ಸತ್ಯ ಪಥದ ನಿತ್ಯ ಸಂತ' ಕೃತಿಯಿಂದ ಆಯ್ದ ಲೇಖನ)**

# ಗಾಂಧೀ ಎಂಬ ಮಾಂತ್ರಿಕ...

ಬಟ್ಟೆಗೆಟ್ಟು ಬೀದಿಗೆ ಬಿದ್ದ
ನಮ್ಮ ಬದುಕನ್ನೊಮ್ಮೆ
ನೀ ಕಾಣಬೇಕು ಗಾಂಧಿ;
ನೀನೊಬ್ಬ ಮಾಂತ್ರಿಕ
ಸತ್ಯ ಶಾಂತಿ ಅಹಿಂಸೆ
ಸಹನೆ-ಸಹಬಾಳ್ವೆಯಿಂದಲಿ
ಜಗವನ್ನೆಲ್ಲ ಸುತ್ತಿ ಬಂದವನು
ಜಾತ್ಯಾತೀತ ಶಕ್ತಿ ತಾನಾದವನು!!

ಭಾರತೀಯರನು ದಾಸ್ಯದಿಂದ ಬಿಡಿಸಿದ
ಮೋಹನ ದಾಸನು ನೀನು
ಕರ್ಮ ಸಿದ್ಧಾಂತವ ಬಗೆದವನು
ದೀನ ದಲಿತರ ತಮವ ಬಗೆದು
ಅವರ ಬಾಳಲಿ ಬೆಳಕು ಚೆಲ್ಲಿದವನು;
ಪೋರ ಬಂದರ ಪುತ್ಥಳಿ ಬಾಯಿಯ ಸುಪುತ್ರ
ಭಾರತೀಯ ಶ್ರೀ ಸಾಮಾನ್ಯರ ಮಹಾತ್ಮ !!

ಜಗದ ಅಣು ತೃಣ ಕಾಷ್ಠ
ನೋವುಗಳಿಗೆ ದನಿಯಾದೆ ತಾನು
ನಮ್ಮ ಬಾಳ ಮಾರ್ಗ ದೀವಿಗೆಯಾದೆ ಗಾಂಧಿ
ಭಾರತೀಯರ ಧಮನಿಗಳಲಿ
ನಿನ್ನ ಹೆಸರನು ಅಚ್ಚೊತ್ತಿ ಹೋದೆ
ನೀನೊಬ್ಬ ಮಹಾ ಮಾಂತ್ರಿಕ ಗಾಂಧಿ !!

ಮದ್ದು, ಗುಂಡು, ಬಂದೂಕುಗಳೆಲ್ಲ
ಕತ್ತಿ, ಗುರಾಣಿಗಳೆಲ್ಲ
ದ್ವೇಷ-ಅಸೂಯೆಗಳೆಲ್ಲ
ಕಟ್ಟಿಕೊಂಡು ಬಂದವರೆಲ್ಲ
ಹೇಳ ಹೆಸರಿಲ್ಲದಂತಾಗಿ



ಮಣ್ಣ ಮುಖವ ಮಾಡಿದವು,
ತುಕ್ಕಿಡಿದು, ಧೂಳಿಡಿದು
ಗಾಳಿಯಲ್ಲಿ ಬೆಂಕಿ ಚೆಂಡುಗಳಾದುವು
ಇವ್ಯಾವ ಶಕ್ತಿಯೂ ತಡೆಯಲಿಲ್ಲ ನಿನ್ನ,
ತಡೆಯ ಬಂದವರು ನಿನ್ನ
ಪ್ರೀತಿ-ತ್ಯಾಗ ಬಲಿದಾನಗಳೆದುರು
ಶರಣಾಗಿ ಹೋದರು !!

ಜಾತಿ ಮತ ಧರ್ಮ ದೇವರ
ಹೆಸರಲಿ ದೇಶ ಮಾರುತಿಹರು
ಮಾತಿನ ಭಾಷಣಗಳು
ಕಿವುಡು ಮಾಡುತ್ತಿವೆ;
ನೀನಿದ್ದಾಗ ಇದ್ದವುಗಳೆಲ್ಲ
ಒಂದೂ ಬದಲಾಗಲಿಲ್ಲ
ದೊಡ್ಡ ದೊಡ್ಡ ಸೌಧಗಳು
ಗಗನದೆತ್ತರ ನಿಂತಿಹವು;
ಅಭಿವೃದ್ಧಿಯೆಂಬ ಮರೀಚಿಕೆಯಲಿ
ಭಯದ ವಾತಾವರಣದಲಿ
ಸ್ವರ್ಗ ಕಾಣಿಸುತ್ತಿಹರು ಗಾಂಧಿ !!

ಶ್ರೀ ಸಾಮಾನ್ಯನ ಅಳಲು
ಅರಣ್ಯವಿಲ್ಲದೆ ರೋದನವಾಗಿದೆ
ಉಳ್ಳವರೇ ಎಲ್ಲಾ
ರಾಜಕಾರಣ ಮಾಡಿಹರು
ಶಾಸ್ತ್ರವೆಂಬ ಬೂಟಾಟಿಕೆ ಗಟ್ಟಿಯಾಗಿದೆ
ಭೂಮಿ ಕಡಲು ಮುಗಿಲ
ಒಂದು ಮಾಡಿದ್ದಾರೆ;
ಯಾರಿಗೂ ಪಂಚೇಂದ್ರಿಯಗಳು
ಕಾಣದಾಗಿವೆ ಗಾಂಧಿ
ನಿನ್ನ ತಾಳ್ಮೆ ನಮಗಿಲ್ಲವಾಗಿದೆ
ಗಾಂಧಿ ನೀನೊಬ್ಬ ಮಾಂತ್ರಿಕ
ಮಹಾ ಮಾಂತ್ರಿಕ.....

– ಡಾ|| ಎಸ್. ರಾಮಲಿಂಗೇಶ್ವರ (ಸಿಸಿರಾ)

ಅಮರ ಬಾಪು ಚಿಂತನ
ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ ಪತ್ರಿಕೆಗೆ
ಇಂದೇ ಚಂದಾದಾರರಾಗಿ !

ಮೂರು ವರ್ಷದ ಚಂದಾ ₹ 600/-
For 3 Years
500 ಪುಟಗಳ ಗಾಂಧಿ ಆತ್ಮಕಥೆ ಪುಸ್ತಕ
Avail 500 Pages Gandhi Autobiography Book

ಐದು ವರ್ಷದ ಚಂದಾ ₹1000/-
For 5 Years
500 ಪುಟಗಳ ಗಾಂಧಿ ಆತ್ಮಕಥೆ ಪುಸ್ತಕ
ಮತ್ತು ಸುಂದರವಾದ ಚರಕದ ಸ್ಮರಣಿಕೆ
Avail 500 Pages Gandhi Autobiography
& Charaka Momento

ಉಚಿತ ಕೊಡುಗೆ
Free Gift



Amara Baapu Chintana
Kannada & English Bi-Monthly
Regd. Office : Gandhi Bhavan,
Kumara Park East,
Bangalore-560 001

Send Subscription Amount through
Cheque/DD/ Money Order or
NEFT in favour of
'AMARA BAAPU CHINTANA'

Name of the Bank :
ALLAHABAD BANK
Branch : Malleshwaram, 6th Cross,
Bangalore-560003
Account No : 50323011980,
IFSC Code : ALLA0212729

amarabaapuchintana@gmail.com
facebook.com/amarabaapuchintana
www.amarabaapuchintana.com

For Details Contact : 94480 42653 / 98800 60354 / 90356 18076



ಕರ್ನಾಟಕ ಸರ್ವೋದಯ ಮಂಡಲಿ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ತು ಸಂಯುಕ್ತ ಆಶ್ರಯದಲ್ಲಿ ಬಾ–ಬಾಪು 150ನೇ ವರ್ಷಾಚರಣೆ ಅಂಗವಾಗಿ ಪಾವಗಡ ತಾಲೂಕಿನದ್ಯಾಂತ ಶಾಲಾ ಕಾಲೇಜು ಮತ್ತು ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ಗಾಂಧೀಜಿ ಕುರಿತು 150 ಉಪನ್ಯಾಸಗಳ ಉದ್ಘಾಟನೆಯನ್ನು ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷ ಎಲ್.ನರಸಿಂಹಯ್ಯನವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಖಜಾಂಚಿ ಯ.ಚಿ.ದೊಡ್ಡಯ್ಯ, ತಾಲೂಕು ಅಧ್ಯಕ್ಷರಾದ ಎಲ್.ಶಿವಶಂಕರ ನಾಯ್ಡು, ಕಾರ್ಯದರ್ಶಿಗಳಾದ ಈರಣ್ಣ ವಿ. ಮತ್ತು ಅಂತರಗಂಗೆ ಶಂಕರಪ್ಪರವರು ಉಪಸ್ಥಿತರಿದ್ದರು.

---

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಎಂ.ವಿ.ಆರ್.ಫೌಂಡೇಶನ್, ರಾ.ಸೆ.ಯೋ., ಗಾಂಧಿ ಅಧ್ಯಯನ ಕೇಂದ್ರ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಆಶ್ರಯದಲ್ಲಿ ಹಿರಿಯ ಮುತ್ಸದಿ ಮಾಜಿ ಕೇಂದ್ರ ಸಚಿವ ಡಾ.ಎಂ.ವಿ.ರಾಜಶೇಖರ್ ರವರ 92 ನೇ ಜನ್ಮ ದಿನಾಚರಣೆ ಅಂಗವಾಗಿ ವೆಲ್ಲೂರು ವಿ.ಐ.ಟಿ ವಿಶ್ವವಿದ್ಯಾಲಯದ ಸ್ಥಾಪಕ ಕುಲಪತಿ ಡಾ.ಜಿ ವಿಶ್ವನಾಥನ್ ರವರು ಸಾರ್ವಜನಿಕ ಜೀವನದಲ್ಲಿ ನೈತಿಕ ಮೌಲ್ಯಗಳು ಕುರಿತು ದತ್ತಿ ಉಪನ್ಯಾಸವನ್ನು ನಡೆಸಿಕೊಟ್ಟರು. ಕ.ಗಾ.ಸ್ಮಾ.ನಿ.ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಂಸದ ಐ.ಜಿ.ಸನದಿ, ಹೆಚ್.ಹನುಮಂತಪ್ಪ, ಮಾಜಿ ಸಚಿವ ವೀರಣ್ಣ ಮತ್ತಿಕಟ್ಟಿ ಮೊದಲಾದವರು ಉಪಸ್ಥಿತರಿದ್ದರು.



---



ಬೆಳಗಾವಿ ಜಿಲ್ಲೆ ಸರ್ವೋದಯ ಮಂಡಲಿ, ಗಾಂಧಿ ಅಧ್ಯಯನ ಕೇಂದ್ರ, ಸಣ್ಣವೀರಪ್ಪ ಚನ್ನಬಸಪ್ಪ ಹೊಂಗಲ ಪ್ರತಿಷ್ಠಾನ ಗೋವನಕೊಪ್ಪ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು ಆಶ್ರಯದಲ್ಲಿ ಬೆಳಗಾವಿ ಜಿಲ್ಲಾ ಸರ್ವೋದಯ ಮಂಡಲದ ಉದ್ಘಾಟನೆಯನ್ನು ಧಾರವಾಡ ಕರ್ನಾಟಕ ವಿಶ್ವವಿದ್ಯಲಯದ ವಿಶ್ರಾಂತ ಕುಲಪತಿ ಡಾ.ಹೆಚ್.ಬಿ.ವಾಲಿಕಾರ ನೆರವೇರಿಸಿದರು. ಆರ್.ಜಿ.ಎಸ್.ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಜಿ.ಎಮ್.ಗಣಚಾರಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲಿ ಬಿ. ಎಫ್.ಪಾಟೀಲ್, ಎಲ್.ನರಸಿಂಹಯ್ಯ, ಡಾ.ಹೆಚ್.ಎಸ್.ಸುರೇಶ್, ವಿ.ಟಿ.ಹುಡೇದ್ ಭಾಗವಹಿಸಿದ್ದರು.

---



ಚಿಕ್ಕಮಗಳೂರು ತರೀಕೆರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಯುವ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಪ್ರಾಂಶುಪಾಲರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಸರ್ವೋದಯ ಮಂಡಲದ ಖಜಾಂಚಿ ಯ.ಚಿ.ದೊಡ್ಡಯ್ಯನವರು ಭಾಗವಹಿಸಿದ್ದರು.

ಕರ್ನಾಟಕ ಸರ್ವೋದಯ ಮಂಡಲದ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಸರ್ವೋದಯ ಮಂಡಲದ ಶಾಖಾ ಕಛೇರಿ ಉದ್ಘಾಟನೆಯಲ್ಲಿ ಗೌರವಾಧ್ಯಕ್ಷ ಪ್ರೊ.ಎಮ್.ಎನ್.ಸುಂದರರಾಜ್ ಮತ್ತಿತರು ಪಾಲ್ಗೊಂಡಿದ್ದರು.



---



ಕಾಕೋಳು ಸರ್ಕಾರಿ ಪ್ರೌಢಶಾಲೆ ಮತ್ತು ಪಾಂಚಜನ್ಯ ಪ್ರತಿಷ್ಠಾನದ ವತಿಯಿಂದ ಶಿಕ್ಷಕ ದಿನಾಚರಣೆ ಪ್ರಯುಕ್ತ ಗುರುವಂದನಾ ಮಹೋತ್ಸವವನ್ನು ಏರ್ಪಡಿಸಲಾಗಿತ್ತು.ಹಿರಿಯ ಸಾಹಿತಿ ಚಿಕ್ಕನಾಯಕನಹಳ್ಳಿಯ ಡಾ.ಎಂ.ವಿ.ನಾಗರಾಜರಾವ್ ಮತ್ತು ಸೇಡಂನ ಶಿಕ್ಷಣ ಸಂಶೋಧಕ ಡಾ.ವಾಸುದೇವ್ ಅಗ್ನಿಹೋತ್ರಿ ಭಾಗವಹಿಸಿದ್ದರು. ಶಿಕ್ಷಕ ಆನಂದ ಡಿ.ಬಿ. ಮತ್ತು ಅಜ್ಜಯ್ಯ ಬಿ.ರವರನ್ನು ಗೌರವಿಸಲಾಯಿತು. ಗೌ॥ ಕಾರ್ಯದರ್ಶಿ ಮುರಳಿ ಕಾಕೋಳು, ಮುಖ್ಯೋಪಾಧ್ಯಾಯ ಓಂಕಾರ್ ನಾಯ್ಕ ಹಾಗೂ ಕೆ.ರಾಘವೇಂದ್ರ ಉಪಸ್ಥಿತರಿದ್ದರು.



ಅಮರ ಬಾಪು ಚಿಂತನದ ಉಪ ಸಂಪಾದಕ ಡಾ.ಗುರುರಾಜ ಪೋಶೆಟ್ಟಿಹಳ್ಳಿರವರಿಗೆ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅನಿಕೇತನ ಕನ್ನಡ ದಳ ವತಿಯಿಂದ ಬಿಬಿಎಂಪಿ ನಿವೃತ್ತ ಮುಖ್ಯ ಅಭಿಯಂತರ ಕೆ.ಟಿ.ನಾಗರಾಜ್‌ರವರು ಅಭಿನಂದನಾ ಕಾರ್ಯಕ್ರಮದಲ್ಲಿ 'ಕನ್ನಡ ಸೇವಾರತ್ನ' ಪ್ರಶಸ್ತಿಯನ್ನು ಶ್ರೀ ಮಾಯಣ್ಣ ನೀಡಿ ಗೌರವಿಸಿದರು. ಎಂ.ತಿಮ್ಮಯ್ಯ, ಬಿ.ಶೃಂಗೇಶ್ವರ ಮೊದಲಾದವರು ಉಪಸ್ಥಿತರಿದ್ದರು. ಮತ್ತು ಸತ್ಯಸಾಯಿ ಸಾಂಸ್ಕೃತಿಕ ಸಂಭ್ರಮದಲ್ಲಿ 'ಸರ್.ಎಂ.ವಿಶ್ವೇಶ್ವರಯ್ಯ' ಪ್ರಶಸ್ತಿಯನ್ನು ಶ್ರೀ ಹೆಚ್.ಎ.ಸತ್ಯ, ಡಾ.ಕೆಂಚನೂರು ಶಂಕರ್, ಟಿ.ಎ.ಕನಕರಾಜು,ಸಂಜಯ್ ಕುಮಾರ್ ಜೇವರ್ಗಿ ಪ್ರದಾನ ಮಾಡಿದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ವಿಚಾರ ಪರಿಷತ್ತು, ರಾ.ಸೆ.ಯೋ., ಗಾಂಧಿಭವನ ಮೈಸೂರು ವಿಶ್ವವಿದ್ಯಾಲಯ, ಹೆಚ್.ಸಿ.ದಾಸಪ್ಪ ಸಾರ್ವಜನಿಕ ಸಂಸ್ಥೆ ಆಶ್ರಯದಲ್ಲಿ 'ಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ' ವಿಶ್ವವಿದ್ಯಾಲಯ ಮಟ್ಟ ವಿಚಾರ ಸಂಕಿರಣವನ್ನು ಮೈಸೂರು ವಿ.ವಿ.ಕುಲಪತಿ ಪ್ರೊ. ಜಿ.ಹೇಮಂತ್ ಕುಮಾರ್ ಉದ್ಘಾಟಿಸಿದರು. ಮಹಾತ್ಮ ಗಾಂಧಿ ನ್ಯಾಷನಲ್ ಮ್ಯೂಸಿಯಮ್ ನವದೆಹಲಿ ನಿರ್ದೇಶಕ ಎ.ಅಣ್ಣಾಮಲೈ, ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ವಸಂತ ಕುಮಾರ್ ತಿಮಕಾಪುರ್, ಹೆಚ್.ಸಿ.ದಾಸಪ್ಪ ಸಾರ್ವಜನಿಕ ಸಂಸ್ಥೆಯ ಅಧ್ಯಕ್ಷ ಡಾ. ಕೆ.ಮಹದೇವ್ ಮೊದಲಾದವರು ಉಪಸ್ಥಿತರಿದ್ದರು.

ಮಹಾತ್ಮಗಾಂಧಿ ಸ್ಮಾರಕ ಟ್ರಸ್ಟ್, ಮಂಡ್ಯದಲ್ಲಿ ಡಾ.ಅರ್ಜುನಪುರಿ ಅಪ್ಪಾಜಿಗೌಡ ಸ್ಮಾರಕ ಮೂರನೇ ದತ್ತಿ ಪ್ರಶಸ್ತಿಯನ್ನು ಪ್ರಜಾವಾಣಿ ಪತ್ರಿಕೆಯ ಮಂಡ್ಯ ಜಿಲ್ಲೆ ವರದಿಗಾರರಾದ ಎಂ.ಎನ್.ಯೋಗೇಶ್ ಮಾರೇನಹಳ್ಳಿ ರವರಿಗೆ ನಿವೃತ್ತ ಪ್ರಾಧ್ಯಾಪಕ –ಸಾಹಿತಿ ಡಾ.ಹೆಚ್.ಎಸ್.ಮುದ್ದೇಗೌಡ ನೀಡಿ ಪುರಸ್ಕರಿಸಿದರು. ವೇಮಗಲ್ ಸೋಮಶೇಖರ್ ರವರ ಮಹಾತ್ಮರ ಬಾಳು ಪುಸ್ತಕವನ್ನು ಕರ್ನಾಟಕ ಗೆಜೆಟಿಯರ್ ನಿವೃತ್ತ ಸಂಪಾದಕ ಎಸ್.ರಾಜೇಂದ್ರಪ್ಪ ಬಿಡುಗಡೆಗೊಳಿಸಿದರು. ಡಾ.ಗುರುರಾಜ ಪೋಶೆಟ್ಟಿಹಳ್ಳಿರವರು ಕೃತಿ ಕುರಿತು ಮಾತನಾಡಿದರು. ಗಾಂಧಿಭವನದ ಪ್ರಧಾನ ಕಾರ್ಯದರ್ಶಿ ಎನ್.ರಾಜುರವರು ಅಧ್ಯಕ್ಷತೆ ವಹಿಸಿದ್ದರು.





ಕರ್ನಾಟಕ ರಾಜ್ಯ ಸರ್ಕಾರ ನೀಡುವ 2019ನೇ ಸಾಲಿನ 'ಮಹಾತ್ಮ ಗಾಂಧಿ ಸೇವಾ ಪುರಸ್ಕಾರಕ್ಕೆ' ಸರಳ ಹಾಗೂ ಆದರ್ಶ ಬದುಕಿನ ಮೂಲಕ ಮಹಾತ್ಮ ಗಾಂಧೀಜಿರವರ ತತ್ವದ ಪ್ರತಿಬಿಂಬದಂತಿರುವ ಚಾಮರಾಜನಗರ ದೀನಬಂಧು ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಪ್ರೊ.ಜಿ.ಎಸ್.ಜಯದೇವರವರು ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ಐದು ಲಕ್ಷ ರೂ.ನಗದನ್ನು ಒಳಗೊಂಡಿದೆ.

ಎಂ.ಚಂದ್ರಶೇಖರ್ ಪ್ರತಿಷ್ಠಾನ ಮತ್ತು ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ ಆಶ್ರಯದಲ್ಲಿ ನಡೆದ ಡಿ.ಎಸ್.ನಾಗಭೂಷಣರವರ 'ಗಾಂಧಿ ಕಥನ' ಕೃತಿಯನ್ನು ಹಿರಿಯ ಲೇಖಕ ದೇವನೂರು ಮಹಾದೇವ ಬಿಡುಗಡೆ ಮಾಡಿದರು. ಹಿರಿಯ ಗಾಂಧಿವಾದಿ ಹೆಚ್.ಎಸ್.ದೊರೆಸ್ವಾಮಿ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಡಾ.ನಿತ್ಯಾನಂದ ಬಿ.ಶೆಟ್ಟಿ ಮೊದಲಾದವರು ಭಾಗವಹಿಸಿದ್ದರು.





ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಅಪ್ಪಾದೇಶ್ ಫೌಂಡೇಶನ್ ವತಿಯಿಂದ ಗಾಂಧಿತತ್ವ ಪ್ರಚಾರದಲ್ಲಿ ತೊಡಗಿಸಿಕೊಂಡಿರುವ ಬಿಜಾಪುರದ ನೇತಾಜಿ ಗಾಂಧಿ ಮತ್ತು ಇನ್ನಿತರ ಸಾಧಕರಿಗೆ ರಾಜ್ಯ ಮಟ್ಟದ ಶ್ರಮಿಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ನೀಡಲಾಗುವ ಜಯಶ್ರೀ ಟ್ರಸ್ಟ್ ಪುರಸ್ಕಾರಕ್ಕೆ ಖ್ಯಾತ ಪತ್ರಕರ್ತ– ಅಂಕಣಕಾರ ಡಾ.ಎನ್ ಜಗದೀಶ್ ಕೊಪ್ಪರವರ "ಗಾಂಧಿಗಿರಿಯ ಫಸಲುಗಳು" ಕೃತಿ ಆಯ್ಕೆಯಾಗಿದೆ.



# My Life is My Message....

Though Mohandas Karamchand Gandhi or ' Mahatma Gandhi ' is known and remembered as the supreme leader of the Indian freedom struggle, his main aim in life was always the attainment of truth. He was always a philosopher and his philosophy was always practical and down-to- earth. He did not believe in empty metaphysical argument or merely building complex structures of idea but always tried to implement his idea in everyday practice.

Gandhi equates salvation ('Moksha', as he calls it) with self-realisation. He equates self-realisation with the realisation of God . And he equates God with truth . Thus , he gives his unique interpretation of Advaita Vedanta.

Gandhi defines God as truth . By ' truth ' he does not mean subjective or relative truth , but the absolute truth , ' the Eternal principle ' , that is God. As he says , " I worship God as truth only .I have not yet found him but I am trying seeking after him and daily the conviction is growing upon me that he alone is real and all else is unreal ".(The story of my experiment with Truth P.4)

Later on, Gandhi went one step further to say ' Truth is God ' . Thus for him truth was the sovereign principle of morality and it was also through a perfect vision of truth can only follow a complete realisation of Ahimsa .To see the universal and all- pervading spirit of truth face to face one must be able to love the meanest of creation as oneself . (My experiment with truth , p.401-2).

For Gandhi , Truth and Ahimsa are so intertwined that it is practically impossible to disentangle and separate them . As he puts it , Ahimsa is the means and Truth is the end . Thus, Ahimsa becomes our supreme duty and Truth becomes God . " Truth exists , it alone exists. It is the only God and there is but one way of realising ". (Collected works . vol 44, p . 59).

Thus, Ahimsa is the fundamental means by which Truth can be realised , that is , Moksha can be achieved. Ahimsa includes non-violence in thought , feeling and action and also means total humility , love , compassion and service .

The idea of Satyagraha is the logical culmination of the ideals of truth and non-violence.Gandhi used Satyagraha - passive resistance- as a strategy very successfully during the freedom struggle and in fact , it remains the most important aspect of the Gandhian thought .The novelty of this concept was the re-interpretation of both , the political action and the political aim in religious terms.

Gandhi's political thought is obviously influenced by his religious ideas and therefore truth and non-violence are the important aspects . He also gives equal importance to the means with which to achieve the end. For him , the end does not justify the means .

The ideal society envisaged by Gandhi would be a class-less and state society , where every village will be a self - sufficient unit . There will be no cities , and no heavy industry and there will be no need for the police and the counts and pressers. Political power will be completely de-centralized and voluntary co-operation will characterize economic , political and social relations.

Thus, in Gandhi , the saint and the politician go in hands , proclaiming the power of truth , non-violence , love and peace.

**Courtesy : VandeMataram.com**

---

**In the following pages let us revisit Gandhian Thoughts on different aspects of life. On the occasion of Gandhi Jayanthi a relook at his thoughts is more relevant....**



# Impact of Peace

**The greatest and the most unique contribution of India to the contemporary world is the message of non-violence and peace. Especially the technique of Satyagraha or non-violent are direct action, formulated and practiced by Gandhi.**

**- Dr. Shubhangi Rathi**












Great men have always been struggled and fought against the prevailing social evils and human suffering, history of humanity shows it. One among of them is great man Gandhi in human history. Gandhi responded to the challenges of the given historical situations. He realized the historical necessities of his times and tried to actualize the needs and inspirations of the people in his own way.

The issue of non-violence and global peace raises certain philosophical and moral questions such as- What is the meaning of non-violence. Does non-violence the only solution to the ills of an age threatened by nuclear weapons? Does peace possible in a world where a vast majority of people live under conditions of ignorance, hunger, poverty, injustice, and tyranny? Do violence and war rooted in human nature? Does non-violence and peace presuppose moral transformation of individuals? What is the ultimate goal of humanity? In what direction it is progressing? Is peace possible without unifying moral principles and ethical ideals to the whole of humanity?

**The Origins of Gandhi's Non-Violence**

Gandhi's secularism and openness to all kinds of theological and philosophical schools is well-known. It was through an assimilation of various concepts and philosophical tenets that Gandhi arrived at his own understanding of non-violence. Jainism and Buddhism were the most important influences that lay behind the foundation of Gandhi's non-violence theory. Both Jainism and Buddhism preached non-violence as the basic principle of existence. All other thoughts and actions propagated by these two religious schools were based on this base of non-violence. Gandhi was deeply influenced by his readings of these scriptures. The Acaranga Sutra of the Jains stated all life to be dear and precious and Gandhi believed in it earnestly. The Bhagvadgita was another important influence, with its stress on non-attachment and selfless action. Christianity, along with its message of love and compassion, extended even to one's enemies was another important influence on Gandhi's life. Bringing together all these theological schools, Gandhi was in search for a meaningful life, a life based on truth and honesty, a life that would boast of a moral courage to stand for the right and for justice, even at its own cost. It was this outlook that Gandhi employed as a tool to guide India's freedom struggle, which eventually succeeded to unite the length and breadth of the country like never before.

**The Legacy**

Non-violence played a very important role in defining the course of Indian national movement, from the 1920s to the final achievement of the freedom. It formed the basis of the methods of Satyagraha that became closely associated with the Gandhian whirlwind in Indian politics. Gandhi understood economic profit to be the guiding force of the imperialist project and attacked the British government at where it hurt most, which was financial gain. Picketing, non-cooperation and organised resistance to British modes of oppression were the main modes of the non-violent political movements in India. It shaped the course of the

# and Non-Violence

**India's distinctive mind and face are stamped with Gandhian impact among the people of global community as well as among the member countries of the United Nations Organization.**









Civil Disobedience Movement as well. Even at a later time, during the Quit India movement, Gandhi's theory of non-violence held strong in the face of the new and radical waves in the world of Indian politics like communism and armed revolution.

Gandhi's concept of non-violence appears to have two dimensions - (i) non-violence in thought and (ii) non-violence in action. So far as the former is concerned he is not prepared to compromise, but he is flexible in the case of latter.

Non-Violence, as Gandhi conceived, it is not a negative virtue. It is not merely abstaining from violence or harmlessness but a positive state of love, or doing well even to the evil-doer. Doing well to the evil-doer does not mean to support his evil acts, but it means to resist his evil acts without hatred or harm to him. Thus the underlying principle of non-violence is "hate the sin, but not the sinner."



Gandhi was essentially a peace loving man. He emphasized the purity of means for attaining noble ends. He believes that a genuine and enduring peace could never be achieved by means of violence, war and repression. He says that violence originates from anger, hatred, ill will, enmity and selfishness. Violence produces counter violence, and it becomes a law unto itself. Peace through violence at best may be a truce, but it cannot be a lasting peace. Violence and war end in colossal destruction of human life and property. on-violence originates from love, compassion, goodwill, cooperation, harmony, and selflessness, a genuine and enduring peace can be ensured only through non-violent means.

Gandhi holds that peace for the sake of peace is a meaningless social goal unless it is linked to social equality, economic justice and human rights. He says that a hungry man cannot be fed with doctrine. Therefore, peace can only be achieved by changing the social conditions of toiling masses all over the world.

**Influence on the world Politics**

Though the impact of Gandhi's idea was not so much clear for some years after his death. His influence in the world politics is only too clear today. Though not directly, his ideal of non-violence has been accepted today by the most powerful nations of the world and gradually the world is going towards more and more disarmament, control over nuclear weapons, control over science and technology and insistence upon educational,





# HUMAN MIND

moral spiritual progress. Not conflict but harmony is the watch world of the modern world politics.

**Fedaration**

Gandhi maintains that the moral regeneration of the individual and non-violent values which he practices would reflect on all spheres of human activity, whether social or political, national or international. He visualizes the establishment of a World Federation or International league founded on the principals of non-violence and international co-operation. In his scheme, his organize the quality of all nations and abhors the use of force for settling disputes among nations; methods adopted for the settlement of dispute are negotiation, meditation and arbitration. The world federation may maintain an international non-violent policy of the non-violent state for the purpose of meeting the eventuality of strife between the states, but the soldiers of this force will bear no arms. Trained in non-violent ways, as they are, they will use persuasion for resolving the dispute between the states. Though Gandhi is conceived that such a new world order will take a long time to evolve, yet his faith in the inherent goodness of man prompts him to hope for the best.

**War Begins In The Mind**

The structure of international realities and relationships, as they exist today, require a sharing of fortune and misfortune, happiness and misery, pleasures and sorrows that transcends national boundaries. Peace should be both inner and outer. It is not a mysterious or super-human factor that causes war. It is man himself that causes war. To be free from evil, one must suppress it at its source. For the elimination of evil, the individual should be reformed from within. Since wars begin in the minds of men, there could be no peace outside unless there is inner peace. Hence Gandhi thought that any scheme of peace must include moral transformation of individual minds and hearts to ensure solid peace in the world.

**Humanity of War**

At no time in the history of humanity, man is under constant fear of insecurity of life, and threat of destruction of humanity of nuclear war. After the experiences of Hiroshima and Nagasaki, the nuclear war not only looked as barbarous, but theoretically it is possible to extinguish mankind altogether. In such a challenging situation, our differences of race and religion, class and colour, nation and ideology are irrelevant and meaningless. We have to devise a realistic and practical way by which humanity does not bring about its own destruction.

**Conclusion**

In the age of nuclear weapons, we are left with a choice of " live together or die together". The invention of nuclear weapons has brought about the ancient truth - that nothing welds people more quickly together than the imminence of common disaster. Non-violent technique seems to be the only solution to the world armed with nuclear weapons.





Affordable Prices
Time: 10 AM to 7 PM
ನಾಮಗಿರಿಸ್ ವೀ ಮಾರ್ಟ
NAMAGIRIS WE MART
Super Store for Hand Made & Natural Products
DAILY POOJA ITEMS
Ayurvedic Health Products
No. 77/8/3, 2nd Main Road, Vyalikaval, Next to SBI Bank, Bangalore - 560 003
Contact: 99867 07883, 95131 11611 E-mail: namagiriswemart@gmail.com

# ಖಾದಿ ನೇಷನ್

Online Shopping: www.khadination.shop



ಖಾದಿ ನೇಷನ್

# KHADI NATION

A UNIT OF: SNKGS & IKEDA CERTIFIED BY K.V.I.C MINISTRY OF M.S.M.E GOVT OF INDIA

## Khadi India

### Our Branches:

| | | | |
|---|---|---|---|
| 1. Dr. D.V.G Road, Basavanagudi | 080 - 2667 0045 | 7. 18th Cross, Malleshwaram | 080 - 2344 6926 |
| 2. KHADI INDIA, Commercial Street | 080 - 4370 0669 | 8. Sidlaghatta Town | +91 96236 97631 |
| 3. Koramangala BDA Complex | 080 - 2553 3332 | 9. Vivekananad Metro Station Bayappanahalli | +91 81475 95960 |
| 4. 80ft, Ramaiah 2nd Stage | 080 - 4217 6291 | 10. KHADI INDIA, Kammanahalli Main Road | 080 - 4852 5071 |
| 5. 7th Cross, Malleshwaram | 080 - 4093 9991 | 11. 108F, MLA Layout, Bopasandra, R M V 2nd Stage | 080 - 2351 1673 |
| 6. 15th Cross, Malleshwaram | 080 - 2336 2029 | | |

Production Centre : Dodda Dasarahalli, Sidlaghatta, Kaiwar Road, Sidlaghatta Taluk, Chikkaballapur Dist.



# A Government is best which Governs the Least







In no department of life has the contribution of Gandhiji been so unique and significant as in the political field, national and international. At no time throughout history, as we know it, have fundamental moral values, such as truth, justice, brotherhood of man and non-violence, been applied or even recognized as valid in men's relations in the political field and more especially in the mutual dealings of organised groups and nations. It is true that moral values are often violated in all spheres of life, especially in the field of commerce and industry. Yet even here the validity of these values has never been questioned. Often businessmen are reminded of their duty to be fair and honest. In highly organised communities, businessmen themselves have devised desirable norms of conduct, which would be fair to the producers and the consumers of goods. Even in societies where no such code of conduct exists, honesty is considered as the best policy. It is not unoften that an honest businessman does as well as, if sometimes not better than, one who uses doubtful methods. Further, businessmen keep their word with one another and fulfil their obligations. Whatever be the actual conduct of businessmen, the validity of the moral law is never questioned. Unfair conduct, even when tolerated, is not applauded.

Reverse is the case in the political field. The very recognition of the validity of the moral law is denied in political dealings. To some extent the validity of the moral values is recognised in a democracy. The more ganuine a democracy is, the better is the standard of conduct observed in it. As a matter of fact, democracy is based upon the recognition of the dignity of man which functions, not by breaking heads but by counting them, not by the bullet but by the ballot –box . It can be real only when the voter is free from any coercion, exercised by power, social, economic or political. This means that democracy, for its healthy and proper functioning, needs non-violence in the field of internal politics. It is also defeated when there is widespread impersonation, that is , when there is deviation from the standards of honesty, which is truth.

Further, no elective democracy has yet been able to function without the party system. This often undermines the politician's loyalty, not only to the moral law, but also to the nation, for whose good he has been elected to the legislature. It is a fact that in a representative democracy, as it has developed , a person unattached to a party would find it difficult to win an election, and when elected he would find it even more difficult to make his weight felt in the legislature. If he wants to mould the policies of the nation, he must fall in line with the bosses in the party, He must follow the line laid down by them. In this he may have to modify his opinions and sometimes even to suppress them. He may have to give his loyalty to the party and not to the nation for the service of which he is elected to the legislature.



It is natural and even legitimate for a politician to aspire to wield power. Nothing worthwhile can be done without power. Yet it is a fact that power corrupts. Even a politician in opposition aspires for power. He may have, therefore, to exaggerate the faults of those in power and highlight them before the public.

How was then the Government of India to be organised after independence? Of course it was to be organised as a democracy. But after what pattern? It must follow the genius of the people and their historical evolution. It must be based upon institutions familiar to the people.

India through the ages has lived and even now lives in the villages. Each village community was in the past organised as a semi-independent republic, governed by its panchayats, consisting generally of the heads of families. In some places the panchayats were elected, the electors being the heads of families. These village communities were in most cases economically self-sufficient, producing the essential necessities of everyday life. Their surplus products went to the cities and to foreign markets.

**Village level**

Gandhiji wanted the government of free India to rest on the foundation of the revived and revitalized village panchayats. The panchayats were not to be organised by the Central and State Governments. The State and the Central governments were to be based on the village units and not vice versa. Gandhiji held that as the economic structure of India should be based upon decentralized industry, so must its political organistation rest on the devolution of power. He further held that democracy could be most effective in small units, where people could carry on a dialogue and confront on another. He had a holy fear of concentration of power. It must be diffuse through many centres. He held that government is the best which governs least. He did not believe in making people happy through coerciton. They must make themselves happy according to their own ideas, provided they are not anti-social. Gadnhiji further held that the strength of the centre must rest on the strength of its foundation in the villages and not at their expense. This naturally meant indirect elections to the legislative assemblies.



Gandhiji, however, did not work out the details of his conception of a democratic government for independent India. The present Constitution of India does not embody his ideas. It is based on a strong centre, monopolizing most of the sources of power and finance, leaving the local units weak and resourceless.

To the extent that we have made the centre in Delhi powerful at the expense of the local units, our democracy has suffered. Some of our present difficulties stem from the lack of opportunities for the exercise of initiative by the local units.

Gandhiji does not believe that world peace can be achieved through a policy of balance of power or through the fear of utter destruction induced by the threat of the use of nuclear weapons. He does believe purely in a world organisation keeping international peace. But a world organization for peace must consist of nations whose politicians are genuinely anxious for peace and do not aspire to dominate other nations. World ofganisation will be effective only when there is a change of heart in big and powerful nations and their politicians.

# Build the Character...



To Students -

Character cannot be built with mortar and stone. It cannot be built by hands other than your own. The Principal and the Professor cannot give you character from the pages of books. Character building comes from their very lives and really speaking, it must come from within yourselves.

Put all your knowledge, learning and scholarship in one scale and truth and purity in the other and the latter will by far outweigh the other. The miasma of moral impurity has today spread among our school going children and like a hidden epidemic is working havoc among them. All your scholarship, all your study of the scriptures will be in vain if you fail to translate their teachings into your daily life.....

If teachers impart all the knowledge in the world to their students but inculcate not truth and purity among them, they will have betrayed them and instead of raising them set them on the downward road to perdition. Knowledge without character is a power for evil only, as seen in the instances of so many talented thieves and 'gentlemen rascals' in the world.

As to use of the vacation by students, if will they approach the work with zeal, they can undoubtedly do many things. I enumerate a few of them:

1. Conduct night and day schools with just a short course, well conceived, to last for the period of the vacation.

2. Visit Harijan quarters and clean them, taking the assistance of Harijans if they would give it.

3. Taking Harijan children for excursions, showing them sights near the villages and teaching them how to study Nature, and generally interesting them in their surroundings, giving them by the way a working knowledge of geography and history.

4. Reading to them simple stories from the Ramayana and the Mahabharata.

5. Teaching them simple Bhajans (Devotional Songs).





6. Cleaning the Harijan boys of all the dirt that they would find about their persons and giving both, the grown-ups and the children simple lessons in hygiene.

7. Taking a detailed census in selected areas of the condition of the Harijans.

8. Taking medical aid to the ailing Harijans.

9. This is but a sample of what is possible to do among the Harijans. It is a list hurriedly made, but a thoughtful student will, I have no doubt, add many other items.

